ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 25 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 129 | ಪುಟಗಳು: 10

ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com

₹4

ಕೆಆರ್‌ಎಸ್ ಜಲಾಶಯದಿಂದ ನವೆಂಬರ್‌ನಲ್ಲಿ

ಸ್ವಯಂಚಾಲಿತ ನೀರು ಬಿಡುಗಡೆ

ವಿಶ್ವ ಬ್ಯಾಂಕ್ ನೆರವಿನ ಯೋಜನೆಗೆ 63 ಕೋಟಿ ವೆಚ್ಚ

● ವಿಶ್ವದರ್ಜೆಯ ತಂತ್ರಜ್ಞಾನ ಅಳವಡಿಕೆ ● ಸಾಫ್ಟ್‌ವೇರ್ ಮೂಲಕ ನಿಯಂತ್ರಣ ● 153 ಗೇಟ್‌ಗಳ ಕಾರ್ಯ ನಿರ್ವಹಣೆ ● ಕೇಬಲ್, ರಾಟೆ ಬಳಕೆಯ ಹಸ್ತಚಾಲಿತ ಕಾರ್ಯಕ್ಕೆ ತಿಲಾಂಜಲಿ





ಮಂಡ್ಯ ಜಿಲ್ಲೆ ಕೆಆರ್‌ಎಸ್ ಜಲಾಶಯದಲ್ಲಿ ಪ್ರಸ್ತುತ ಹಸ್ತಚಾಲಿತ ಗೇಟ್‌ಗಳ ನಿರ್ವಹಣೆ ಮೂಲಕ ನೀರು ಬಿಡುಗಡೆ ಮಾಡಲಾಗುತ್ತಿದೆ (ಎಡಚಿತ್ರ). ಮೇಲ್ವಿಚಾರಣಾ ನಿಯಂತ್ರಣ ಮತ್ತು ದತ್ತಾಂಶ ಸಂಗ್ರಹಣೆ ಮೂಲಕ ಸ್ವಯಂಚಾಲಿತ ನೀರು ಬಿಡುಗಡೆಗೆ ನಿರ್ಮಾಣವಾಗುತ್ತಿರುವ ಕಟ್ಟಡವನ್ನು (ಬಲಚಿತ್ರ) ಕಾಣಬಹುದು.

ಮೈಸೂರು, ಆ.24(ಬಿಎಲ್‌ಯು)– ಮಂಡ್ಯ ಜಿಲ್ಲೆಯ ಐತಿಹಾಸಿಕ ಕೃಷ್ಣರಾಜಸಾಗರ (ಕೆಆರ್‌ಎಸ್) ಅಣೆಕಟ್ಟಿನಿಂದ ನವೆಂಬರ್ ವೇಳೆಗೆ ಸ್ವಯಂಚಾಲಿತವಾಗಿ ನೀರು ಬಿಡುಗಡೆಯಾಗಲಿದೆ. ವಿಶ್ವದರ್ಜೆಯ ತಂತ್ರಜ್ಞಾನ ಹೊಂದಿರುವ ಸ್ವಯಂಚಾಲಿತ ಯೋಜನೆಯನ್ನು 63 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.


ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪರಿಕಲ್ಪನೆ ಹಾಗೂ ವಿಶ್ವೇಶ್ವರಯ್ಯ ಅವರ ಇಂಜಿನಿಯರಿಂಗ್ ಸೃಜನಾತ್ಮಕತೆಯಲ್ಲಿ ಕಳೆದ 93 ವರ್ಷದ ಹಿಂದೆ ಕೆಆರ್‌ಎಸ್ ಜಲಾಶಯ ನಿರ್ಮಾಣವಾಯಿತು.

ಕೆಆರ್‌ಎಸ್ ಜಲಾಶಯದಲ್ಲಿ ನೈಜ ಸಮಯದ ನೀರಿನ ಮೇಲ್ವಿಚಾರಣೆ ಮತ್ತು ಮೇಲ್ವಿಚಾರಣಾ ನಿಯಂತ್ರಣ ಮತ್ತು ದತ್ತಾಂಶ ಸ್ವಾಧೀನ (ಎಸ್‌ಸಿಎಡಿಎ– ಸೂಪರ್‌ವೈಸರಿ ಕಂಟ್ರೋಲ್ ಅಂಡ್ ಡಾಟಾ ಅಕ್ವಿಸೇಷನ್) ವ್ಯವಸ್ಥೆಯನ್ನು ಕರ್ನಾಟಕದಲ್ಲಿ ಮೊದಲ ಬಾರಿಗೆ ಅನುಷ್ಠಾನ ಮಾಡಲಾಯಿತು. ಸ್ವಯಂಚಾಲಿತ ನೀರು ಬಿಡುಗಡೆ ವ್ಯವಸ್ಥೆ ಹಲವು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರಲಿಲ್ಲ. ಆದರೆ ಈಗ ಸ್ವಯಂಚಾಲಿತ ▶ 6ನೇ ಪುಟಕ್ಕೆ

ಇಂದು ದಸರಾ ಗಜಪಡೆಯ ಎರಡನೇ ತಂಡ ಆಗಮನ

ಸಂಜೆ 4 ಗಂಟೆಗೆ ಜಯಮಾರ್ತಾಂಡ ದ್ವಾರದ ಬಳಿ ಗಜ ಪೂಜೆ












ಮೈಸೂರು, ಆ.24 (ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಎರಡನೇ ತಂಡದಲ್ಲಿ 3 ಹೊಸ ಆನೆ ಸೇರಿದಂತೆ ಐದು ಆನೆಗಳು ನಾಳೆ(ಆ.25) ಸಂಜೆ 4 ಗಂಟೆಗೆ ಜಯಮಾರ್ತಾಂಡ ದ್ವಾರದ ಮೂಲಕ ಅರಮನೆ ಆವರಣ ಪ್ರವೇಶಿಸಲಿವೆ.

ಈಗಾಗಲೇ ಮೊದಲ ತಂಡದಲ್ಲಿ ಆಗಮಿಸಿರುವ 9 ಆನೆಗಳು ಜಂಬೂ ಸವಾರಿ ಮಾರ್ಗದಲ್ಲಿ ತಾಲೀಮಿನಲ್ಲಿ ಪಾಲ್ಗೊಳ್ಳುತ್ತಿದ್ದು, ಅವುಗಳಿಗೆ ಪೌಷ್ಟಿಕ ಆಹಾರ ನೀಡಿ ಆರೈಕೆ ಮಾಡಲಾಗುತ್ತಿದೆ. ದಸರಾ ಉದ್ಘಾಟನೆಗೂ 29 ದಿನ ಮುನ್ನ ಎರಡನೇ ತಂಡದ ಆನೆಗಳನ್ನು ಕರೆತರಲು ಮುಹೂರ್ತ ಫಿಕ್ಸ್ ಮಾಡಲಾಗಿದೆ. ಸೆ.22ರಿಂದ ಈ ಸಾಲಿನ ದಸರಾ ಮಹೋತ್ಸವ ಆರಂಭವಾಗಲಿದ್ದು, ಅ.2ರಂದು ಜಂಬೂಸವಾರಿ ನೆರವೇರಲಿದೆ

ಎರಡನೇ ತಂಡ: ಎರಡನೇ ತಂಡದಲ್ಲಿ ಕರೆತರುತ್ತಿರುವ 5 ಆನೆಗಳಲ್ಲಿ ಎರಡು ಹೆಣ್ಣಾನೆ ಹಾಗೂ ಒಂದು ಹೊಸ ಗಂಡಾನೆ ಸೇರಿವೆ. ಅದರಲ್ಲಿ ದುಬಾರೆ ಕ್ಯಾಂಪ್‌ನಿಂದ ಗೋಪಿ(43), ಸುಗ್ರೀವ (43), ಹೊಸ ಆನೆಗಳಾದ ಮತ್ತಿಗೋಡು ಕ್ಯಾಂಪ್‌ನಿಂದ ಶ್ರೀಕಂಠ(56), ದುಬಾರೆಯಿಂದ ಹೇಮಾವತಿ(11) ಹಾಗೂ ಭೀಮನಕಟ್ಟೆ ಕ್ಯಾಂಪ್‌ನಿಂದ ರೂಪ (44) ಮೈಸೂರಿಗೆ ಆಗಮಿಸುತ್ತಿವೆ.

ಮೊದಲ ತಂಡದಲ್ಲಿ ಆಗಮಿಸಿರುವ ಆನೆಗಳ ಪೈಕಿ ಭೀಮ ಆನೆ ಅತ್ಯಂತ ಹೆಚ್ಚು ತೂಕ ಹೊಂದಿದ್ದು, ಬಲಭೀಮನಾಗಿ ಹೊರಹೊಮ್ಮಿದ್ದಾನೆ. ಆದರೆ, ಮತ್ತಿಗೋಡು ಕ್ಯಾಂಪ್‌ನಿಂದ ಆಗಮಿಸುತ್ತಿರುವ ಶ್ರೀಕಂಠ ಆನೆ ಭೀಮನಿಗಿಂತ ಹೆಚ್ಚು ತೂಕವಿರುವ ಆನೆಯಾಗಿದ್ದು, ದಸರಾ ಆನೆ ತಂಡದಲ್ಲಿ ಶ್ರೀಕಂಠನೇ ಅತ್ಯಂತ ಬಲಶಾಲಿ ಎಂದು ಹೇಳಲಾಗಿದೆ. ಇದೇ ಮೊದಲ ಬಾರಿಗೆ ದಸರಾದಲ್ಲಿ ಭಾಗವಹಿಸುತ್ತಿರುವ ಶ್ರೀಕಂಠ ಮುಂದಿನ ದಿನಗಳಲ್ಲಿ ಅಂಬಾರಿ ಹೊರುವ ಆನೆಯಾಗಲು ಅರ್ಹನಿದ್ದಾನೆ ಎಂಬ ಮಾತು ಆನೆ ಕ್ಯಾಂಪ್‌ನಿಂದ ಕೇಳಿಬರುತ್ತಿದೆ.

ಹೇಮಾವತಿ ಎಡದಂಡೆ ನಾಲೆಗೆ ಕಾರು ಬಿದ್ದು ಇಬ್ಬರ ಸಾವು



ಹಾಸನ, ಆ.24– ಹೊಳೆನರಸೀಪುರದ ಹರಳಹಳ್ಳಿ ಗ್ರಾಮದ ಬಳಿಯ ಹೇಮಾವತಿ ನದಿ ಎಡದಂಡೆ ನಾಲೆಯಲ್ಲಿ ಕಾರೊಂದು ಪತ್ತೆಯಾಗಿದೆ.

ಶನಿವಾರ ರಾತ್ರಿ ನಾಲೆಗೆ ಕಾರು ಬಿದ್ದಿದೆ ಎಂದು ಶಂಕಿಸಲಾಗಿದೆ. ಕಾರನ್ನು ನೋಡಿ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಅಗ್ನಿಶಾಮಕದಳದ ಸಿಬ್ಬಂದಿ ಹಾಗೂ ಸ್ಥಳೀಯರು ಕಾರನ್ನು ಮೇಲೆತ್ತಿದ್ದಾರೆ. ಕಾರು ಪತ್ತೆಯಾದ ಸಮೀಪದ ದೊಡ್ಡಕುಂಚೇವು ಗ್ರಾಮದ ಕೆರೆಯಲ್ಲಿ ಓರ್ವ ಪುರುಷ ಹಾಗೂ ಮಹಿಳೆಯ ಶವಗಳು ಪತ್ತೆಯಾಗಿವೆ. ಮೃತರ ಗುರುತು ಈವರೆಗೂ ತಿಳಿದು ಬಂದಿಲ್ಲ. ಆದರೆ, ಕಾರು ಕೊಂತಗೋಡನಹಳ್ಳಿ ಗ್ರಾಮದ ಪ್ರೇಮ ಕುಮಾರ್ (38) ಎಂಬುವವರಿಗೆ ಸೇರಿದ್ದು ಎಂದು ಶಂಕಿಸಲಾಗಿದೆ. ▶ 6ನೇ ಪುಟಕ್ಕೆ

ದೆಹಲಿಗೂ ಬುರುಡೆ ಕೊಂಡೊಯ್ದಿದ್ದ ಚಿನ್ನಯ್ಯ ಅಂಡ್ ಗ್ಯಾಂಗ್



ಚಿನ್ನಯ್ಯ

ಮಂಗಳೂರು, ಆ.24– ಚಿನ್ನಯ್ಯ ತಂದು ಕೊಟ್ಟ ಬುರುಡೆ ಎಲ್ಲಿಯದ್ದು ಎಂಬ ಯಕ್ಷ ಪ್ರಶ್ನೆಗೆ ಕೊನೆಗೂ ಉತ್ತರ ಸಿಕ್ಕಿದೆ. ಮುಸುಕುಧಾರಿಯನ್ನು 10 ದಿನಗಳ ಕಾಲ ಕಸ್ಟಡಿಗೆ ಪಡೆದು ವಿಚಾರಣೆ ನಡೆಸುತ್ತಿರುವ ಎಸ್‌ಐಟಿ ಸ್ಫೋಟಕ ರಹಸ್ಯಗಳನ್ನು ಬಯಲಿಗೆಳೆಯುತ್ತಿದೆ.

ಚಿನ್ನಯ್ಯ ತಂದಿದ್ದ ಬುರುಡೆ, ಅಧಿಕಾರಿಗಳು ಧರ್ಮಸ್ಥಳದಲ್ಲಿ ನೋಡುವುದಕ್ಕೂ ಮುನ್ನವೇ ದೆಹಲಿಯಲ್ಲಿ ಪ್ರಭಾವಿ ವ್ಯಕ್ತಿಗಳು ನೋಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ. ಷಡ್ಯಂತ್ರದ ಗ್ಯಾಂಗ್ ಚಿನ್ನಯ್ಯನನ್ನು ಬುರುಡೆ ಸಮೇತ ದೆಹಲಿಗೆ ಕರೆದುಕೊಂಡು ಹೋಗಿತ್ತು. ಅಲ್ಲಿ ಪ್ರತಿಷ್ಠಿತ ವ್ಯಕ್ತಿಗಳನ್ನು ಭೇಟಿಯಾಗಿ ಬುರುಡೆಯನ್ನು ತೋರಿಸಲಾಗಿತ್ತು. ಬುರುಡೆ ಸಮೇತ ಇಡೀ ಪ್ರಕರಣದ ಕಥೆಯನ್ನು ಅಲ್ಲಿ ಹೇಳಲಾಗಿತ್ತು. ಮೆಗಾ ಡೀಲ್ ಕೂಡ ನಡೆದಿತ್ತು ಎಂಬ ರಹಸ್ಯ ಬೆಳಕಿಗೆ ಬಂದಿದೆ.

ಎಫ್‌ಎಸ್‌ಎಲ್ ವರದಿಯಿಂದ ಬುರುಡೆ ಬಂಡವಾಳ ಬಯಲು: ಚಿನ್ನಯ್ಯ ಈ ಬುರುಡೆಯನ್ನು ಇಟ್ಟುಕೊಂಡು ನ್ಯಾಯಾಲಯದಿಂದ ಸಾಕ್ಷಿ ಸಂರಕ್ಷಣಾ ಕಾಯ್ದೆಯಡಿ ಭದ್ರತೆ ಪಡೆದುಕೊಂಡಿದ್ದ. ಹೀಗಾಗಿ ▶ 6ನೇ ಪುಟಕ್ಕೆ

ಯೂಟ್ಯೂಬರ್ ಸಮೀರ್ 5 ಗಂಟೆ ವಿಚಾರಣೆ

ಇಂದು ಮೊಬೈಲ್, ಲ್ಯಾಪ್‌ಟಾಪ್ ತರುವಂತೆ ಪೊಲೀಸರ ಸೂಚನೆ



ಬೆಳ್ತಂಗಡಿ, ಆ.24–ಹಿಂದೂಗಳ ಪವಿತ್ರ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳ ಕುಟುಂಬದ ವಿರುದ್ಧ ಯೂಟ್ಯೂಬ್ ಮೂಲಕ ಅಪಪ್ರಚಾರ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಯೂಟ್ಯೂಬರ್ ಎಂ.ಡಿ.ಸಮೀರ್ ಭಾನುವಾರ ಪೊಲೀಸರ ವಿಚಾರಣೆಗೆ ಹಾಜರಾಗಿದ್ದಾರೆ.

ಬೆಳಗ್ಗೆ ಠಾಣೆಗೆ ಹಾಜರಾಗಿದ್ದ ಸಮೀರ್, ಸತತ 5 ಗಂಟೆಗಳ ಕಾಲ ವಿಚಾರಣೆ ಎದುರಿಸಿದ್ದಾರೆ. ಸಮೀರ್ ವಾಯ್ಸ್ ಸ್ಯಾಂಪಲ್ ಪಡೆದಿರುವ ಪೊಲೀಸರು, ▶ 6ನೇ ಪುಟಕ್ಕೆ

ಆ.28 ರವರೆಗೆ ಕಾಂಗ್ರೆಸ್ ಶಾಸಕ ವೀರೇಂದ್ರ ಪಪ್ಪಿ ಇಡಿ ವಶಕ್ಕೆ



ಬೆಂಗಳೂರು, ಆ.24– ಅಕ್ರಮವಾಗಿ ಬೆಟ್ಟಿಂಗ್ ಕಂಪನಿ ನಡೆಸುತ್ತಿದ್ದ ಆರೋಪಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೀಡಾಗಿರುವ ಕಾಂಗ್ರೆಸ್ ಶಾಸಕ ಕೆಸಿ ವೀರೇಂದ್ರ ಪಪ್ಪಿ ಅವರನ್ನು ಆ.28 ರವರೆಗೆ ಜಾರಿ ನಿರ್ದೇಶನಾಲಯದ (ಇ.ಡಿ) ವಶಕ್ಕೆ ನೀಡಿ ಭಾನುವಾರ ಇಲ್ಲಿನ ನ್ಯಾಯಾಲಯ ಆದೇಶ ನೀಡಿದೆ.

ಮೂಲಗಳ ಪ್ರಕಾರ, ಶಾಸಕರನ್ನು ಇಂದು ಬೆಳಿಗ್ಗೆ ಸಿಕ್ಕಿಂನಿಂದ ಬೆಂಗಳೂರಿಗೆ ಕರೆತರಲಾಗಿದೆ. ಅವರು ಇಲ್ಲಿನ ವಿಮಾನ ನಿಲ್ದಾಣಕ್ಕೆ ಆಗಮಿಸಿದಾಗ ಇಡಿ ವಿಶೇಷ ತಂಡ ಅವರನ್ನು ವಶಕ್ಕೆ ತೆಗೆದುಕೊಂಡಿತು. ಯಾವುದೇ ಅಹಿತಕರ ಘಟನೆ ನಡೆಯದಂತೆ ತಡೆಯಲು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2ರಲ್ಲಿ ಬಿಗಿ ಭದ್ರತೆ ಏರ್ಪಡಿಸಲಾಗಿತ್ತು.

ಶುಕ್ರವಾರ ಪಪ್ಪಿ (50), ಆತನ ಸಹೋದರ ಮತ್ತು ಇತರರ ವಿರುದ್ಧ ಅಕ್ರಮ ಬೆಟ್ಟಿಂಗ್–ಸಂಬಂಧಿತ ಹಣ ಅಕ್ರಮ ವರ್ಗಾವಣೆ ಪ್ರಕರಣದ ಭಾಗವಾಗಿ ಕೇಂದ್ರೀಯ ತನಿಖಾ ಸಂಸ್ಥೆಯು ಹಲವಾರು ರಾಜ್ಯಗಳಲ್ಲಿ ಶೋಧ ನಡೆಸಿತು.

ಧರ್ಮಸ್ಥಳ ಪ್ರಕರಣದಲ್ಲಿ ಪೂರ್ವಾಪರ ವಿಚಾರಿಸದೆ ಎಸ್‌ಐಟಿ ತನಿಖೆಗೆ ಆದೇಶಿಸಿ ಸರ್ಕಾರ ಎಡವಿದೆ

ತಮ್ಮದೇ ಸರ್ಕಾರದ ಕ್ರಮ ಟೀಕಿಸಿದ ಮಾಜಿ ಸಚಿವ ಕೆ.ಎನ್.ರಾಜಣ್ಣ



ಕೆ.ಎನ್.ರಾಜಣ್ಣ

ಬೆಂಗಳೂರು, ಆ.24– ಧರ್ಮಸ್ಥಳ ಪ್ರಕರಣ ಕುರಿತು ದೇಶ ಹಾಗೂ ನಾಡಿನಾದ್ಯಂತ ತೀವ್ರ ಚರ್ಚೆಯಾಗುತ್ತಿರುವಂತೆಯೇ ಕಾಂಗ್ರೆಸ್ ನಾಯಕ ಹಾಗೂ ಮಾಜಿ ಸಚಿವ ಕೆಎನ್. ರಾಜಣ್ಣ ಭಾನುವಾರ ತಮ್ಮದೇ ಸರ್ಕಾರದ ನಿರ್ಧಾರವನ್ನು ಟೀಕಿಸಿದ್ದಾರೆ.

ಭೂಮಿಯಲ್ಲಿ ಹೂತ ನಂತರ ಮೃತದೇಹವನ್ನು ಹೊರತೆಗೆಯಲು ಕಾನೂನಿನಲ್ಲಿ ನಿರ್ದಿಷ್ಟ ನಿಯಮಗಳಿವೆ. ತಾಲೂಕು ಮ್ಯಾಜಿಸ್ಟ್ರೇಟ್ ಅವರ ಅನುಮತಿ ಮತ್ತು ಉಪಸ್ಥಿತಿಯಲ್ಲಿ ಮಾತ್ರ ದೇಹವನ್ನು ಹೊರತೆಗೆಯಬೇಕು. ಆದರೆ, ಧರ್ಮಸ್ಥಳದ ಅನಾಮಿಕ ತಲೆಬುರುಡೆ ತಂದು ಕೊಟ್ಟ ತಕ್ಷಣ ಆತನ ಬಗ್ಗೆ ಪೂರ್ವಪರ ವಿಚಾರಿಸದೆ, 164 ಹೇಳಿಕೆ ಪಡೆದು ಎಸ್‌ಐಟಿ ರಚಿಸಲಾಯಿತು. ತನಿಖೆಯ ಪ್ರಾರಂಭಿಕ ಹಂತದಲ್ಲಿ ಎಲ್ಲರೂ ಎಡವಿದ್ದಾರೆ. ಎಲ್ಲಿಂದ ಬುರುಡೆ ತಂದಿದ್ದರು, ಕಾನೂನು ಪ್ರಕಾರವೇ ಗುಂಡಿಯಿಂದ ಬುರುಡೆ ಹೊರ ತೆಗೆಯಲಾಗಿದೆಯೇ? ಎಂಬುವುದನ್ನು ಪರಿಶೀಲಿಸಿದ್ದರೆ ಇಷ್ಟೆಲ್ಲಾ ರಾದ್ಧಾಂತ ಆಗುತ್ತಿರಲಿಲ್ಲ ಎಂದು ಮಾಜಿ ಸಚಿವ ರಾಜಣ್ಣ ಹೇಳಿದ್ದಾರೆ.

ಈ ಪ್ರಕರಣದಲ್ಲಿ ತಲೆಬುರುಡೆಯನ್ನು ಕಾನೂನುಬಾಹಿರವಾಗಿ ತರಲಾಗಿದ್ದು, ಇದನ್ನು ಎಲ್ಲಿಂದ, ಹೇಗೆ ಮತ್ತು ಯಾರ ಆದೇಶದ ಮೇರೆಗೆ ತೆಗೆಯಲಾಗಿದೆ ಎಂಬುದನ್ನು ಮೊದಲು ತನಿಖೆ ಮಾಡಬೇಕು ಎಂದು ರಾಜಣ್ಣ ಒತ್ತಾಯಿಸಿದ್ದಾರೆ. ಧರ್ಮಸ್ಥಳಕ್ಕೆ ಅಪಕೀರ್ತಿ ತರುವ ಪ್ರಯತ್ನ ನಡೆಯಿತು. ಕೆಲ ಏಜೆನ್ಸಿಗಳು ವಿನಾ ಕಾರಣ ಈ ವಿಚಾರವನ್ನು ಬಹಳ ದೊಡ್ಡಮಟ್ಟಕ್ಕೆ ತೆಗೆದುಕೊಂಡು ಹೋದವು. ಕಂಡಕಂಡಲ್ಲಿ ಗುಂಡಿ ತೆಗೆದು ಅಲ್ಲಿನ ನಿವಾಸಿಗಳಿಗೆ ತೊಂದರೆ ನೀಡ ಲಾಯಿತು. ಪ್ರಾರಂಭದಲ್ಲಿ ಸಾಮಾನ್ಯ ಜ್ಞಾನ ಬಳಸಿದ್ದರೆ ಇದೆಲ್ಲ ಆಗುತ್ತಿರಲಿಲ್ಲ ಎಂದಿದ್ದಾರೆ.

ಬುರುಡೆ ತನಿಖೆ ನಡೆಸಿದ ಸರ್ಕಾರಕ್ಕೆ ಸಿದ್ದರಾಮಯ್ಯ ಪರಮಾಪ್ತ, ಮಾಜಿ ಸಚಿವ ಕೆ.ಎನ್.ರಾಜಣ್ಣ ಚಾಟಿ ಬೀಸಿದ್ದಾರೆ ಎಂದು ಬಿಜೆಪಿ ಲೇವಡಿ ಮಾಡಿದೆ. ▶ 6ನೇ ಪುಟಕ್ಕೆ

'ರನ್ ಫಾರ್ ಗಣೇಶ; ಸೇ ನೋ ಟು ಡ್ರಗ್ಸ್'

ಮ್ಯಾರಥಾನ್ ಮೂಲಕ ಡ್ರಗ್ಸ್ ವಿರುದ್ಧ ಜಾಗೃತಿ





'ರನ್ ಫಾರ್ ಗಣೇಶ ; ಸೇ ನೋ ಟು ಡ್ರಗ್ಸ್' ಶೀರ್ಷಿಕೆಯಡಿ ನಡೆದ ಮ್ಯಾರಥಾನ್‌ಗೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು(ಎಡಚಿತ್ರ). ಬಲಚಿತ್ರದಲ್ಲಿ ಮ್ಯಾರಥಾನ್‌ನಲ್ಲಿ ಪಾಲ್ಗೊಂಡಿರುವ ಓಟಗಾರರನ್ನು ಕಾಣಬಹುದು

ಮೈಸೂರು,ಆ.24(ಎಂಟಿವೈ)– ಯುವ ಜನತೆ ಮಾದಕ ವಸ್ತುಗಳಿಗೆ ದಾಸರಾಗಿ ಆರೋಗ್ಯ ಹಾಳು ಮಾಡಿಕೊಳ್ಳದೆ, ಸಮಾಜದಲ್ಲಿ ಸತ್ಪ್ರಜೆಯಾಗಿ ರೂಪುಗೊಳ್ಳಬೇಕು ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸಲಹೆ ನೀಡಿದ್ದಾರೆ.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಶ್ರೀ ಜನಜಾಗರಣ ಟ್ರಸ್ಟ್‌ನ ಮಾಧವ ಕೃಪಾ ಗಣೇಶ ಉತ್ಸವ ಸಮಿತಿ ಹಾಗೂ ಮೈಸೂರಿನ ಕಾಮಾಕ್ಷಿ ಆಸ್ಪತ್ರೆಗಳ (ಕುವೆಂಪುನಗರ ಮತ್ತು ಜೆಪಿ ನಗರ) ಸಹಯೋಗದಲ್ಲಿ 'ರನ್ ಫಾರ್ ಗಣೇಶ; ಸೇ ನೋ ಟು ಡ್ರಗ್ಸ್' ಶೀರ್ಷಿಕೆಯಡಿ ಮಾದಕ ದ್ರವ್ಯದ ವಿರುದ್ಧ ಜಾಗೃತಿಗಾಗಿ ಸಮುದಾಯ ಮ್ಯಾರಥಾನ್ (ಓಟ)ಗೆ ಚಾಲನೆ ನೀಡಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಡ್ರಗ್ಸ್ ಮಾಫಿಯಾ ವ್ಯಾಪಕವಾಗಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಈಗಾಗಲೇ ಬಹಿರಂಗವಾಗಿದೆ. ಡ್ರಗ್ಸ್ ತಯಾರಿಕಾ ಘಟಕದ ಮೇಲೆ ಪೊಲೀಸರು ದಾಳಿ ಮಾಡಿ, ಅಪಾರ ಪ್ರಮಾಣದ ಡ್ರಗ್ಸ್ ವಶಪಡಿಸಿಕೊಂಡಿರುವ ಘಟನೆ ನಡೆದಿದೆ. ಈ ಹಿನ್ನೆಲೆಯಲ್ಲಿ ಯುವ ಜನತೆ ಡ್ರಗ್ಸ್‌ನಂತಹ ಮಾದಕ ವಸ್ತುಗಳ ದುಶ್ಚಟಗಳಿಗೆ ದಾಸರಾಗದೇ ಆರೋಗ್ಯವಂತರಾಗಿ ಜೀವನ ನಡೆಸಬೇಕು ಎಂದರು.

ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮ ಕುರಿತಂತೆ ಜಾಗೃತಿ ಮೂಡಿಸಲು ಗಣೇಶ ಉತ್ಸವ ಸಮಿತಿ ಹಾಗೂ ಮೈಸೂರಿನ ಕಾಮಾಕ್ಷಿ ಆಸ್ಪತ್ರೆಗಳ ಸಂಯುಕ್ತಾಶ್ರಯದಲ್ಲಿ ಮ್ಯಾರಥಾನ್ ಆಯೋಜಿಸಿರುವುದು ಶ್ಲಾಘನೀಯ. ಎಲ್ಲರೂ ದೈಹಿಕ ಮತ್ತು ಆರೋಗ್ಯ ಕಾಪಾಡಿಕೊಳ್ಳಬೇಕು. ವ್ಯಾಯಾಮ, ದೈಹಿಕ ಕಸರತ್ತು ಮಾಡುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಪರಿಸರ ಸ್ನೇಹಿ ಗಣಪನ ಪೂಜಿಸಿ: ಹಿಂದೂ ಸಂಪ್ರದಾಯದಲ್ಲಿ ಗಣೇಶ ಹಬ್ಬಕ್ಕೆ ಮಹತ್ವವಿದೆ. ಗಣೇಶ ಹಬ್ಬದ ಅಂಗವಾಗಿ ಎಲ್ಲೆಡೆ ಗಣೇಶನ ಮೂರ್ತಿ ಪೂಜಿಸಲಾಗುತ್ತದೆ. ಪರಿಸರದ ಮೇಲೆ ದುಷ್ಪರಿಣಾಮ ಬೀರದ ಪರಿಸರ ಸ್ನೇಹಿ ಗಣಪನನ್ನೇ ಪೂಜಿಸಲು ಪಣ ತೊಡಬೇಕು ಎಂದು ಸಲಹೆ ನೀಡಿದರು. 5 ಕಿ.ಮೀ ಹಾಗೂ 3 ಕಿ.ಮೀ ದೂರದ ಮ್ಯಾರಥಾನ್‌ನಲ್ಲಿ 9 ವಿಭಾಗದಲ್ಲಿ ಓಟದ ಸ್ಪರ್ಧೆ ನಡೆಸಲಾಯಿತು. ಇದರಲ್ಲಿ 250 ಮಕ್ಕಳು ಸೇರಿದಂತೆ ಸುಮಾರು 650ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು. ಎಲ್ಲರಿಗೂ ಟೀ–ಶರ್ಟ್ ನೀಡಲಾಗಿತ್ತು. ▶ 6ನೇ ಪುಟಕ್ಕೆ

ಮಾಜಿ ಎಂಎಲ್‌ಸಿ ಸಂದೇಶ್ ನಾಗರಾಜ್ ಹುಟ್ಟುಹಬ್ಬದ ಹಿನ್ನೆಲೆ

ಆರೋಗ್ಯ ಉಚಿತ ತಪಾಸಣೆ ಶಿಬಿರ



ಮೈಸೂರಿನ ಕುವೆಂಪುನಗರದ ಜೋಡಿ ಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮಾಜಿ ಎಂಎಲ್‌ಸಿ ಸಂದೇಶ್ ನಾಗರಾಜ್ ಅವರ ಹುಟ್ಟುಹಬ್ಬದ ಅಂಗವಾಗಿ ಭಾನುವಾರ ಉಚಿತ ಆರೋಗ್ಯ ತಪಾಸಣೆ, ಕಣ್ಣಿನ ತಪಾಸಣೆ ಶಿಬಿರ ನಡೆಸಲಾಯಿತು.

ಮೈಸೂರು, ಆ.24(ಜಿಎ)–ವಿಧಾನ ಪರಿಷತ್ ಮಾಜಿ ಸದಸ್ಯ ಹಾಗೂ ಉದ್ಯಮಿ ಸಂದೇಶ್ ನಾಗರಾಜ್ ಹುಟ್ಟುಹಬ್ಬದ ಅಂಗವಾಗಿ ಭಾನುವಾರ ಕುವೆಂಪುನಗರದ ಜೋಡಿ ಬಸವೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಶ್ರೀ ಸಂದೇಶ್ ನಾಗರಾಜ್ ಅಭಿನಂದನಾ ಸಮಿತಿ, ಆದಿಚುಂಚನಗಿರಿ ಒಕ್ಕಲಿಗರ ಮಹಿಳಾ ಸಮಾಜ, ಸುಯೋಗ ಆಸ್ಪತ್ರೆ ಹಾಗೂ ವಾಸನ್ ಐ ಕೇರ್ ಇವರ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣೆ, ಉಚಿತ ಕಣ್ಣಿನ ತಪಾಸಣೆ ಶಿಬಿರವನ್ನು ನಡೆಸಲಾಯಿತು.

ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಮಾತನಾಡಿ, ತಂತ್ರಜ್ಞಾನದ ಉಪಕರಣಗಳ ಹೆಚ್ಚಿನ ಬಳಕೆ ಪರಿಣಾಮ ಅತೀ ಸಣ್ಣ ವಯಸ್ಸಿನಲ್ಲಿಯೇ ಮಕ್ಕಳು ದೃಷ್ಟಿದೋಷದ ಸಮಸ್ಯೆ ಎದುರಿಸುತ್ತಿದ್ದು, ಇದರ ಮುಂಜಾಗ್ರತಾ ಕ್ರಮವಾಗಿ ನೇತ್ರ ಪರೀಕ್ಷೆ ನಡೆಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಕಣ್ಣಿನ ತಪಾಸಣೆ ಶಿಬಿರ ಇದರಿಂದ ಅನುಕೂಲವಾಗಲಿದೆ ಎಂದರು.

ಉದ್ಯಮಿ ಎ.ಪಿ.ನಾಗೇಶ್ ಮಾತನಾಡಿ, ಇಂದಿನ ಒತ್ತಡದ ಜೀವನ, ಆಹಾರ ಕ್ರಮದಿಂದ ನಿತ್ಯ ಆರೋಗ್ಯದಲ್ಲಿ ಒಂದಲ್ಲಾ ಒಂದು ವೈಪರೀತ್ಯ ಕಾಣುತ್ತಿದ್ದೇವೆ. ಪ್ರತಿಯೊಬ್ಬರೂ 3 ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ದೇಹದ ಆರೋಗ್ಯ ರಕ್ಷಣೆ ಜೊತೆಗೆ ಕಣ್ಣಿನ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಸಂದೇಶ್ ನಾಗರಾಜ್ ಅಭಿನಂದನಾ ಸಮಿತಿ ಸಂಚಾಲಕ ವಿಕ್ರಾಂತ್ ಪಿ.ದೇವೇಗೌಡ, ಗಂಟಯ್ಯ (ಕೃಷ್ಣಪ್ಪ), ಶ್ರೀನಿವಾಸ್‌ಕುಮಾರ್, ಮರಿಯಪ್ಪ, ನಾಗಣ್ಣ, ಗುರುಮಲ್ಲು, ಮಿರ್ಚಿ ಮಹದೇವು, ಕುಮಾರ್, ಲೋಕೇಶ್ ಕುಮಾರ್ ಮಾದಾಪುರ, ಮನೋಜ್ ಕುಮಾರ್, ಲಕ್ಷ್ಮಣ, ಆನಂದ್, ಬಂಗಾರ ನಾಯಕ, ಏಚಗುಂಡ್ಲ, ಶಿವಕುಮಾರ್, ಹೊಸಹುಂಡಿ ಸಂತೋಷ್, ಸುನಿಲ್, ಕೃಷ್ಣಪ್ಪ, ಎಂ.ರಾಮೇಗೌಡ, ರಾಹುಲ್, ಮನೋಜ್, ಗಿರೀಶ್ ಡಿ.ಗೌಡ, ರಾಮಚಂದ್ರ, ನಾಗಣ್ಣ ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಸಂಘದ ಅಧ್ಯಕ್ಷರಾದ ಸವಿತಾ ಸಣ್ಣತಮ್ಮೇಗೌಡ, ಶಾರದಾ, ಯೋಗೇಶ್ವರಿ, ಮಂಗಳ ಮಂಜುನಾಥ, ಶಾರದಾ, ಹಂಸ, ರೂಪಾ, ರುಕ್ಮಿಣಿ ರಮೇಶ್, ಲಕ್ಷ್ಮೀ ದೇವೇಗೌಡ, ಪೈಲ್ವಾನ್ ರಮೇಶ್, ಅಂಗಡಿ ಲಿಂಗಣ್ಣ, ಶಾರದ, ಮಂಜುನಾಥ್, ತಮ್ಮಣ್ಣೇಗೌಡ, ಎಳನೀರು ರಾಮು ಮತ್ತಿತರರು ಉಪಸ್ಥಿತರಿದ್ದರು.

ಮಾಸ್ಕ್‌ಮ್ಯಾನ್ ಚಿನ್ನಯ್ಯನ ಹಿಂದಿರುವ ಕುತಂತ್ರಿಗಳ ಬಂಧಿಸಿ

ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಆಗ್ರಹ

ಮೈಸೂರು,ಆ.24 (ಬಿಎಲ್‌ಯು)– ಶ್ರೀ ಕ್ಷೇತ್ರ ಧರ್ಮಸ್ಥಳದ ಬಗ್ಗೆ ಷಡ್ಯಂತ್ರ ರೂಪಿಸಿರುವ ಮಾಸ್ಕ್‌ಮ್ಯಾನ್ ಚಿನ್ನಯ್ಯನ ಹಿಂದಿರುವ ಕುತಂತ್ರಿಗಳನ್ನು ಬಂಧಿಸಬೇಕು ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ಇಂದಿಲ್ಲಿ ಆಗ್ರಹಿಸಿದ್ದಾರೆ.

ನಗರದ ರಮಾವಿಲಾಸ ರಸ್ತೆಯ ತಮ್ಮ ಕಚೇರಿಯಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಐಟಿಯವರು ಮಾಸ್ಕ್‌ಮ್ಯಾನ್ ಚಿನ್ನಯ್ಯನನ್ನು ಬಂಧಿಸಿದರೆ ಮಾತ್ರ ಸಾಲದು, ಇವನ ಹಿಂದಿರುವ ಕಾಣದ ಕೈಗಳು ಯಾರು ಎಂದು ಬಯಲು ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಹಿಂದೂ ಧರ್ಮಿಯರ ಪವಿತ್ರ ಕ್ಷೇತ್ರವಾದ ಧರ್ಮಸ್ಥಳದಲ್ಲಿ ಆಧ್ಯಾತ್ಮಿಕತೆಯ ಭಕ್ತಿ ಭಾವ ಮೇಳೈಸುತ್ತಿದೆ. ಇಂತಹ ಪವಿತ್ರ ಕ್ಷೇತ್ರದ ಮೂಲಕ ತ್ರಿವಿಧ ದಾಸೋಹ, ಸ್ವಸಹಾಯ ಸಂಘಗಳಿಂದ ಮಹಿಳಾ ಸಬಲೀಕರಣ ಸೇರಿದಂತೆ ಇತರೆ ಸಾಮಾಜಿಕ ಕಾರ್ಯ ಮಾಡಲಾಗುತ್ತಿದೆ. ಆದರೆ, ಜನರ ಧಾರ್ಮಿಕ ನಂಬಿಕೆ ಕೇಂದ್ರವಾದ ಧರ್ಮಸ್ಥಳದ ವಿರುದ್ಧ ಹುನ್ನಾರ ರೂಪಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಧರ್ಮಸ್ಥಳದ ಬಗ್ಗೆ ಕೆಲವು ಆರೋಪಗಳು ಕೇಳಿ ಬಂದ ಹಿನ್ನೆಲೆ ಎಸ್‌ಐಟಿ ತನಿಖೆಗೆ ಹಸ್ತಕ್ಷೇಪ ಮಾಡಬಾರದು ಎಂದು ನಾವು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಆದರೆ ಈಗ ಮಾಸ್ಕ್‌ಮ್ಯಾನ್ ಕುತಂತ್ರವನ್ನು ಎಸ್‌ಐಟಿಯವರೆ ಬಯಲು ಮಾಡಿದ್ದಾರೆ. ಈಗ ಈತನ ಹಿಂದಿರುವರ ಜಾಡು ಹಿಡಿದು ಹುನ್ನಾರ ಬಯಲು ಮಾಡಬೇಕು ಎಂದು ಸಾ.ರಾ.ಮಹೇಶ್ ಆಗ್ರಹಿಸಿದರು.

ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತಿರುವುದಾಗಿ ಚಿನ್ನಯ್ಯ ಹೇಳುತ್ತಾನೆ. ಒಬ್ಬನೇ ಒಬ್ಬ ವ್ಯಕ್ತಿ ಶವ ಹೊತ್ತೊಯ್ದು ಹಳ್ಳ ತೆಗೆದು ಹೂಳಲು ಸಾಧ್ಯವೇ ಎಂಬ ಸಂಶಯ ಎದುರಾಗುತ್ತಿದೆ ಎಂದು ಹೇಳಿದರು.

ಎಸ್‌ಐಟಿಯವರು ದಕ್ಷತೆ ಪ್ರಾಮಾಣಿಕತೆಯಿಂದ ಕೆಲಸ ಮಾಡುವುದಾದರೆ ಚಿನ್ನಯ್ಯನ ಹಿಂದಿರುವವರ ಕುತಂತ್ರ ಬಯಲು ಮಾಡಬೇಕು. ಧರ್ಮಸ್ಥಳದ ನಂಬಿಕೆಗೆ ಧಕ್ಕೆ ತರುವವರನ್ನು ಬಂಧಿಸುವ ಮೂಲಕ ಹಿಂದೂ ಧರ್ಮಿಯರ ನಂಬಿಕೆಗೆ ಚ್ಯುತಿ ತರುವವರಿಗೆ ತಕ್ಕಪಾಠ ಕಲಿಸಬೇಕು ಎಂದು ಸಾ.ರಾ.ಮಹೇಶ್ ಆಗ್ರಹಿಸಿದರು.

ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಷಡ್ಯಂತ್ರದ ವಿರುದ್ಧ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ನಾಳೆ (ಆ.25) ಬೆಳಗ್ಗೆ 4 ಗಂಟೆಗೆ ಪಾಂಡವಪುರದಿಂದ ಜೆಡಿಎಸ್ ಕಾರ್ಯಕರ್ತರು ಕಾರು ಮತ್ತು ಬೈಕ್‌ಗಳಲ್ಲಿ ರ್‍ಯಾಲಿ ಆರಂಭಿಸಿ ಮೈಸೂರಿನ ಇಲವಾಲಕ್ಕೆ ಬಂದು ತಲುಪಲಿದ್ದಾರೆ ಎಂದರು.

ಮೈಸೂರಿನ ಜೆಡಿಎಸ್ ಕಾರ್ಯಕರ್ತರು ಕಾರು ಮತ್ತು ಬೈಕ್‌ಗಳಲ್ಲಿ ಇಲವಾಲಕ್ಕೆ ಹೋಗಿ ಅಲ್ಲಿಂದ ಒಟ್ಟಾಗಿ ಧರ್ಮಸ್ಥಳಕ್ಕೆ ಭೇಟಿ ನೀಡುತ್ತೇವೆ. ಅಲ್ಲಿ ಶ್ರೀ ಮಂಜುನಾಥನ ದರ್ಶನ ಪಡೆಯುತ್ತೇವೆ ಎಂದು ಸಾ.ರಾ.ಮಹೇಶ್ ಹೇಳಿದರು.

ಮಾಜಿ ಮೇಯರ್ ಆರ್.ಲಿಂಗಪ್ಪ, ಮಾಜಿ ಉಪಮೇಯರ್ ಕೃಷ್ಣ, ಮಾಜಿ ಕಾರ್ಪೋರೇಟರ್ ಭಾಗ್ಯ, ಶೋಭಾ, ಅಶ್ವಿನಿ, ಶಿವಣ್ಣ, ಮುಖಂಡರಾದ ಕುಮಾರಸ್ವಾಮಿ, ಬೋರೇಗೌಡ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ರಮಾವಿಲಾಸ ರಸ್ತೆಯ ತಮ್ಮ ಕಚೇರಿಯಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಮಾಜಿ ಮೇಯರ್ ಆರ್.ಲಿಂಗಪ್ಪ ಇನ್ನಿತರರಿದ್ದಾರೆ.

ಲಕ್ಷಾಂತರ ಕೋಟಿ ರೂ. ಸಾಲ ಮಾಡಿರುವ ಸಿಎಂ ಸಿದ್ದರಾಮಯ್ಯರನ್ನು ನಾಲ್ವಡಿ ಅವರಿಗೆ ಹೋಲಿಸಬೇಡಿ

ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅರಮನೆಯಲ್ಲಿದ್ದ ಚಿನ್ನಾಭರಣಗಳನ್ನು ಮಾರಾಟ ಮಾಡಿ ಕೆಆರ್‌ಎಸ್ ನಿರ್ಮಾಣ ಮಾಡಿದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಲಕ್ಷಾಂತರ ಕೋಟಿ ರೂಪಾಯಿ ಸಾಲ ಮಾಡಿ ಕರ್ನಾಟಕದ ಸಾಲದ ಹೊರೆಯನ್ನು 7 ಲಕ್ಷ ಕೋಟಿವರೆಗೆ ತಂದು ನಿಲ್ಲಿಸಿದ್ದಾರೆ ಎಂದು ಸಾ.ರಾ.ಮಹೇಶ್ ಆರೋಪಿಸಿದರು.

ನಮ್ಮ ತಂದೆ ನಾಲ್ವಡಿ ಅವರಿಗಿಂತಲೂ ಮೈಸೂರಿನಲ್ಲಿ ಹೆಚ್ಚು ಅಭಿವೃದ್ಧಿ ಮಾಡಿದ್ದಾರೆ ಎಂದು ಶಾಸಕ ಡಾ.ಯತೀಂದ್ರ ಹೇಳಿದ್ದಾರೆ. ಸಿದ್ದರಾಮಯ್ಯ ಅವರು ಮೈಸೂರು ಜಿಲ್ಲೆಯಲ್ಲಿ ಅಭಿವೃದ್ಧಿ ಮಾಡಿಲ್ಲ ಎಂದು ಹೇಳಲ್ಲ. ಆದರೆ ಸಿದ್ದರಾಮಯ್ಯ ಅವರನ್ನು ನಾಲ್ವಡಿ ಅವರಿಗೆ ಹೋಲಿಕೆ ಮಾಡುವುದು ತಪ್ಪು ಎಂದು ಅಭಿಪ್ರಾಯಪಟ್ಟರು. ಕರ್ನಾಟಕದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಪೊಲೀಸ್ ಅಧಿಕಾರಿಯೊಬ್ಬ ವರ್ಗಾವಣೆಯಾಗಲು 15 ಲಕ್ಷದಿಂದ 1 ಕೋಟಿವರೆಗೆ ಲಂಚ ನೀಡಬೇಕು. ಮೈಸೂರಿನಲ್ಲಿ ಕೂಡ ಲಂಚದ ಬಾಹು ಚಾಚಿದೆ. ಇದೆಲ್ಲಾ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ಗಮನಕ್ಕೆ ಬಂದೇ ನಡೆಯುತ್ತಿದೆ. ಮಳೆಗೆ ರಾಜ್ಯದಲ್ಲಿ ಸಾವಿರಾರು ಮನೆಗಳು ಧರಶಾಯಿಯಾಗಿದೆ. ಈ ತನಕ ಬೀದಿಪಾಲಾದ ಕುಟುಂಬಗಳಿಗೆ ಸೂರು ನೀಡಿಲ್ಲ. ಇಂತಹ ಅವ್ಯವಸ್ಥೆಯ ಸರ್ಕಾರದ ನೇತೃತ್ವ ವಹಿಸಿರುವ ಸಿದ್ದರಾಮಯ್ಯ ಅವರನ್ನು ಅದು ಹೇಗೆ ನಾಲ್ವಡಿ ಅವರಿಗೆ ಹೋಲಿಕೆ ಮಾಡುತ್ತಿದ್ದಾರೋ ತಿಳಿಯದು ಎಂದು ಸಾ.ರಾ.ಮಹೇಶ್ ಹೇಳಿದರು.

ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘದ ವಾರ್ಷಿಕ ಮಹಾಸಭೆ



ಮೈಸೂರು ಕೊಡವ ಸಮಾಜದಲ್ಲಿ ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘದ 6ನೇ ವಾರ್ಷಿಕ ಮಹಾಸಭೆ ನಡೆಯಿತು.

ಮೈಸೂರು,ಆ.24(ಎಂಕೆ)–ಮೈಸೂರಿನ ವಿಜಯನಗರದಲ್ಲಿರುವ ಕೊಡವ ಸಮಾಜದಲ್ಲಿ ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘದ 6ನೇ ವಾರ್ಷಿಕ ಮಹಾಸಭೆ ಭಾನುವಾರ ನಡೆಯಿತು.

ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸಂಘದ ಅಧ್ಯಕ್ಷ ಪಿ.ಕೆ.ಸೋಮಣ್ಣ, ಸಂಘದ ಅಭಿವೃದ್ಧಿ ದೃಷ್ಟಿಯಿಂದ ಹಾಲಿ ನಡೆಯುತ್ತಿರುವ ಯೋಜನೆಗಳನ್ನು ಮುಂದುವರೆಸಿಕೊಂಡು ಹೋಗುವುದರ ಜೊತೆಗೆ ಇದುವರೆಗಿನ ಸಂಘದ ಸಾಧನೆಯನ್ನು ವಿವರಿಸಿದರು. ಮರಣ ನಿಧಿ ಸೌಲಭ್ಯವನ್ನು 20 ಸಾವಿರ ರೂ.ಗಳಿಂದ 30 ಸಾವಿರ ರೂ.ಗಳಿಗೆ ಏರಿಕೆ ಮಾಡುವುದಾಗಿ ತಿಳಿಸಿದ ಅವರು, ಹೊಸದಾಗಿ ವಿದ್ಯಾನಿಧಿ ಸ್ಥಾಪನೆ ಹಾಗೂ ಈಗಾಗಲೇ ವಿದ್ಯಾನಿಧಿ ಯೋಜನೆಗೆ ಧನ ಸಹಾಯ ಮಾಡಿರುವ ದಾನಿಗಳನ್ನು ಸ್ಮರಿಸಿ, ಸಂಘದ ಅಭಿವೃದ್ಧಿಗೆ ಸರ್ವ ಸದಸ್ಯರ ಸಹಕಾರ ಅತ್ಯಗತ್ಯ ಎಂದು ತಿಳಿಸಿದರು.

ನಂತರ ವೈದ್ಯೆ ಡಾ.ಸೋನಿಯಾ ಮಂದಪ್ಪ ಹಾಗೂ ನಿವೃತ್ತ ಅಧಿಕಾರಿ ರಾಜೇಂದ್ರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘದ ಉಪಾಧ್ಯಕ್ಷ ಕೆ.ಡಿ.ಕಾರ್ಯಪ್ಪ ಸ್ವಾಗತಿಸಿದರು. ನಿರ್ದೇಶಕರಾದ ಎ.ಕೆ. ಕುಶಾಲಪ್ಪ, ಎಂ.ಎಂ.ನಾಣಯ್ಯ, ಎಂ.ಎಂ. ಹೊನ್ನಪ್ಪ, ಎಂ.ಎಸ್.ಸುಬ್ರಮಣಿ, ಎ.ಜಿ. ಸೋಮಣ್ಣ, ಸಿ.ಪಿ.ಸರಳ, ಸಿ.ಪಿ.ಪಾವನ, ಕಾನೂನು ಸಲಹೆಗಾರರಾದ ಪಿ.ಕೆ.ಪೊನ್ನಯ್ಯ, ಎಂ.ಪಿ.ಬೆಳ್ಳಿಯಪ್ಪ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಯು.ನಂಜಪ್ಪ ಮತ್ತಿತರರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು,ಆ.24– ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಬಹುಮಾಧ್ಯಮ ಕೇಂದ್ರ (ಇಎಂಆರ್‌ಸಿ) ನಿರ್ದೇಶಕರ ಹುದ್ದೆಗೆ ನೇಮಕ ಮಾಡುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಆಗಸ್ಟ್ 22ರಿಂದ ಸೆಪ್ಟಂಬರ್ 11 ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿ ಮತ್ತು ಅರ್ಜಿಯ ನಮೂನೆ ಬಗ್ಗೆ ಮೈಸೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uni-mysore.ac.inನಲ್ಲಿ ಲಭ್ಯವಿರುತ್ತದೆ. ಆಸಕ್ತ ಅಭ್ಯರ್ಥಿಗಳು ವಿವರಗಳನ್ನು ಮತ್ತು ನಿಗದಿತ ಅರ್ಜಿ ನಮೂನೆಗಳನ್ನು ಮೇಲ್ಕಂಡ ವೆಬ್‌ಸೈಟ್‌ನಿಂದ ಪಡೆಯಬಹುದು.

ಚಿತ್ರಕಲೆ, ನೃತ್ಯ ಸ್ಪರ್ಧೆಯಲ್ಲಿ ಮಕ್ಕಳ ಪ್ರತಿಭೆ ಅನಾವರಣ



ಹಬ್ಬಗಳ ಮಾಸಾಚರಣೆ ಅಂಗವಾಗಿ ನಡೆದ ಚಿತ್ರಕಲೆ, ನೃತ್ಯ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು,ಆ.24(ಎಂಕೆ)– ಮೈಸೂರಿನ ನಿವೇದಿತಾನಗರದ ಉದ್ಯಾನವನದಲ್ಲಿ ಹಬ್ಬಗಳ ಮಾಸಾಚರಣೆ ಅಂಗವಾಗಿ ಚಿತ್ರಕಲೆ ಹಾಗೂ ನೃತ್ಯ ಸ್ಪರ್ಧೆ ನಡೆಯಿತು.

ಮಾ ಫೌಂಡೇಷನ್ ವತಿಯಿಂದ ಹಮ್ಮಿಕೊಂಡಿದ್ದ ವಿವಿಧ ಸ್ಪರ್ಧೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿದ್ದ ಮಕ್ಕಳು ಚಿತ್ರಕಲೆ ಸ್ಪರ್ಧೆಯಲ್ಲಿ ತೊಡಗಿಸಿಕೊಂಡರು. ಹಬ್ಬಗಳ ಕುರಿತು ಚಿತ್ರ ಬಿಡಿಸಿ, ನೃತ್ಯ ಸ್ಪರ್ಧೆಯಲ್ಲಿ ಭಾಗವಹಿಸಿದರು.

6ರಿಂದ 8 ವರ್ಷ, 9ರಿಂದ 11 ವರ್ಷ ಹಾಗೂ 12ರಿಂದ 14 ವರ್ಷ ವಯೋಮಾನದ ಮಕ್ಕಳಿಗೆ ನಡೆದ ನೃತ್ಯ ಸ್ಪರ್ಧೆಯಲ್ಲಿ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರತಿ ವಿಭಾಗದಲ್ಲಿ ವಿಜೇತ ಮಕ್ಕಳಿಗೆ ಪ್ರಥಮ, ದ್ವಿತೀಯ ತೃತೀಯ ಹಾಗೂ ಸಮಾಧಾನಕರ ಬಹುಮಾನಗಳನ್ನು ವಿತರಿಸಲಾಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಯಳಂದೂರು ತಾಲೂಕು ತಹಸೀಲ್ದಾರ್ ಎಸ್.ಎಲ್.ನಯನಾ ಮಾತನಾಡಿ, ಪಠ್ಯೇತರ ಚಟುವಟಿಕೆಗಳು ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಮಕ್ಕಳು ಶಾಲೆಗಳಲ್ಲಿ ಕಲಿಯುವ ಶಿಕ್ಷಣದಂತೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಮುಖ್ಯವಾಗಿದೆ. ಇದರಿಂದ ಮಕ್ಕಳ ವ್ಯಕ್ತಿತ್ವ ರೂಪುಗೊಳ್ಳುತ್ತದೆ ಎಂದು ತಿಳಿಸಿದರು.

ಸ್ಪರ್ಧೆಗಳಲ್ಲಿ ಜಯಶಾಲಿಯಾಗುವುದಕ್ಕಿಂತ ಭಾಗವಹಿಸುವಿಕೆ ಬಹಳ ಮುಖ್ಯ. ಅಂತೆಯೇ ಪೋಷಕರು ಮಕ್ಕಳನ್ನು ನಾನಾ ಕ್ಷೇತ್ರಗಳಲ್ಲಿ ತೊಡಗಿಸುವ ಮೂಲಕ ಪ್ರತಿಭೆಗಳನ್ನು ಗುರುತಿಸಿಕೊಳ್ಳಲು ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.

ಪಾಲಿಕೆ ಮಾಜಿ ಸದಸ್ಯ ಜಗದೀಶ್, ಆರ್‌ಜೆ ಸುನೀಲ್, ಸಮಾಜ ಸೇವಕ ಆರ್ಯನ್ ಗಂಧದಗುಡಿ, ಚಿತ್ರಕಲಾ ಕಲಾವಿದೆ ಅನುರಾಧಾ, ಬಿಯಾಂಡ್ ತಾಳಾಸ್ ಸಂಸ್ಥೆ ಸಿಇಒ ಪೂಜಾ ಜೋಶಿ, ನೈಪುಣ್ಯ ಶಾಲೆಯ ಉಪಪ್ರಾಂಶುಪಾಲೆ ಶೀನಾ ಗುರಾನಿ, ಮಾ ಫೌಂಡೇಶನ್ ಅಧ್ಯಕ್ಷೆ ಡಿ.ಅನಿತಾ, ಕಾರ್ಯದರ್ಶಿ ರೂಪಾ, ಖಜಾಂಚಿ ಮನು ಹೊಯ್ಸಳ, ನಿರ್ದೇಶಕ ಆರ್.ಚಂದ್ರಕಾಂತ್, ಎಸ್.ವಿ. ರವಿಕುಮಾರ್ ಉಪಸ್ಥಿತರಿದ್ದರು.

ಸಂಗೀತ ಕಾರ್ಯಕ್ರಮ...



ಪರಕಾಲ ಸ್ವಾಮಿ ಮಠದಲ್ಲಿ ಚಾತುರ್ಮಾಸ್ಯ ಅಂಗವಾಗಿ ವಿದುಷಿ ದೀಪ್ತಿ ಮೋಹನ್ ತಂಡದವರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಸಂಗೀತಗಾರರಿಗೆ ಶ್ರೀ ಮಠದಿಂದ ಗೌರವಿಸಲಾಯಿತು. ಈ ವೇಳೆ ಮಾಜಿ ಕಾರ್ಪೋರೇಟರ್ ಪ್ರಮೀಳಾ ಭರತ್, ಹೊಯ್ಸಳ ಕರ್ನಾಟಕ ಬ್ರಾಹ್ಮಣ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಅನಿಲ್‌ಕುಮಾರ್, ರಾಜ್ಯ ಜಂಟಿ ಕಾರ್ಯದರ್ಶಿ ಟಿ.ಎಸ್.ಅರುಣ್, ಮಾಲೋಲ ಉಪಸ್ಥಿತರಿದ್ದರು.

ಭರತನಾಟ್ಯ ಜೂನಿಯರ್ ವಿಭಾಗದಲ್ಲಿ ವಚನ ಉನ್ನತ ದರ್ಜೆಯಲ್ಲಿ ತೇರ್ಗಡೆ



ಮೈಸೂರು: ಮೈಸೂರಿನ ನಾಟ್ಯ ಸಂಸ್ಕೃತಿ ಕಲಾನಿಕೇತನದ ಸಂಸ್ಥಾಪಕಿ ವಿದುಷಿ ಎಸ್.ಎನ್.ಮೇಘನ ಅವರ ಮಾರ್ಗದರ್ಶನದಲ್ಲಿ, ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕರಾದ ವಚನ ಕುಮಾರಸ್ವಾಮಿ–ರೂಪಾ ಕುಮಾರಸ್ವಾಮಿ ದಂಪತಿ ಪುತ್ರಿ ಸಿ.ಕೆ.ವಚನ ಭರತನಾಟ್ಯ ಜೂನಿಯರ್ ವಿಭಾಗದಲ್ಲಿ 90.25% ಅಂಕ ಪಡೆದು ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾಳೆ.

ಮಾದಕ ವಸ್ತುಗಳ ಸೇವನೆಯಿಂದ ದೂರವಿರಿ




ಮೈಸೂರಿನ ಯುವರಾಜ ಕಾಲೇಜಿನಲ್ಲಿ ಅಭಿವಿನ್ಯಾಸ ಕಾರ್ಯಕ್ರಮ ನಡೆಯಿತು.

ಮೈಸೂರು,ಆ.24–ಮೈಸೂರಿನ ಯುವರಾಜ ಕಾಲೇಜಿನಲ್ಲಿ ಅಭಿವಿನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ಲಕ್ಕಪ್ಪ ಮಾತನಾಡಿ, ವಿದ್ಯಾರ್ಥಿಗಳು ಸತತ ಅಧ್ಯಯನದಿಂದ ಜ್ಞಾನ ಸಂಪಾದಿಸಿ ಉದ್ಯೋಗ ಪಡೆಯುವತ್ತ ಗಮನಕೊಡಬೇಕು. ಕೆಟ್ಟವರ ಪ್ರಭಾವದಿಂದ ದುಶ್ಚಟಗಳಿಗೆ ಬಲಿಯಾಗಬೇಡಿ, ಪ್ರತಿದಿನ ನಿಮ್ಮ ತಂದೆ–ತಾಯಿ, ಕುಟುಂಬ ನಿಮ್ಮ ಭವಿಷ್ಯಕ್ಕಾಗಿ ಪಡುವ ಶ್ರಮವನ್ನು ಅರ್ಥಮಾಡಿಕೊಂಡು ಶ್ರದ್ಧೆಯಿಂದ ವಿದ್ಯಾಭ್ಯಾಸ ಮುಗಿಸಿ, ಗುರು–ಹಿರಿಯರ ಬಗ್ಗೆ ಗೌರವದಿಂದ ನಡೆದುಕೊಳ್ಳಿ. ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಓದಿದ ಕಾಲೇಜು, ಬೋಧಿಸಿದ ಅಧ್ಯಾಪಕರ ಬಗ್ಗೆ ಪ್ರೀತಿ ಮತ್ತು ಅಭಿಮಾನ ಇರಲಿ ಎಂದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಪ್ರೊ.ಎಸ್.ಮಹಾದೇವಮೂರ್ತಿ, ಆಡಳಿತಾಧಿಕಾರಿ ಪ್ರೊ.ಕೆ.ಅಜಯ ಕುಮಾರ್, ಪರೀಕ್ಷಾಂಗ ನಿಯಂತ್ರಣಾಧಿಕಾರಿ ಪ್ರೊ.ನಾಗೇಶ್ ಬಾಬು, ಅಭಿವಿನ್ಯಾಸ ಕಾರ್ಯಕ್ರಮದ ಸಂಯೋಜಕ ಪ್ರೊ.ಕೃಷ್ಣಮೂರ್ತಿ, ಡಾ.ಮಂಜುಳಾ, ಡಾ.ಶೇಖರ್ ನಾಯಕ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.08.2025 ಸೋಮವಾರ, ಮಳೆ ನಕ್ಷತ್ರ: ಮಖ 17.08.2025 ರಿಂದ 30.08.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ವರ್ಷಾ ಬಸ್ತಿ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಹೈಪೋಥೈರಾಯ್ಡಿಸಮ್‌ಗೆ ಚಿಕಿತ್ಸಾ ಶಿಬಿರ, ಮೈಗ್ರೇನ್‌ಗೆ ಪರಿಹಾರ ಹಾಗೂ ಆಕ್ಯುಪಂಕ್ಚರ್ ಚಿಕಿತ್ಸೆ, ಮಧುಮೇಹದ ಗಾಯಗಳಿಗೆ ಚಿಕಿತ್ಸೆ, ಕುತ್ತಿಗೆ ನೋವು ಮತ್ತು ಭುಜದ ನೋವು, ಸಯಾಟೀಕ್/ಗೃಧ್ರಸಿ ರೋಗಕ್ಕೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಬೀಜ ಗ್ರಂಥಿ ದೋಷ, ಮಕ್ಕಳಲ್ಲಿ ಕಂಡು ಬರುವ ಕೆಮ್ಮು, ಅಸ್ತಮಾ, ಬೆನ್ನುನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.

■ **ಡಾ.ಜಿ. ಪರಮೇಶ್ವರ್ ಅಭಿಮಾನಿಗಳ ಬಳಗ, ಮೈಸೂರು :** ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರ 74ನೇ ಜನ್ಮದಿನದ ಅಂಗವಾಗಿ 'ಪರಮೋತ್ಸವ' ಅಭಿಮಾನದ ಸಂಭ್ರಮ, ದಿವ್ಯ ಸಾನ್ನಿಧ್ಯ: ಮೈಸೂರಿನ ಗಾಂಧಿನಗರದ ಉರಿಲಿಂಗ ಪೆದ್ದಿಮಠದ ಪೀಠಾಧ್ಯಕ್ಷ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ವಿಧಾನಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್, ಉಪಸ್ಥಿತಿ: ಗೃಹ ಸಚಿವ ಡಾ.ಜಿ.ಪರಮೇಶ್ವರ, ತುಮಕೂರಿನ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಸದಸ್ಯರಾದ ಶ್ರೀಮತಿ ಕನ್ನಿಕಾ ಪರಮೇಶ್ವರಿ, ಅಧ್ಯಕ್ಷತೆ: ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಭಿನಂದನಾ ಗ್ರಂಥ ಲೋಕಾರ್ಪಣೆ: ಆಹಾರ, ನಾಗರಿಕ ಸರಬರಾಜು ಸಚಿವ ಡಾ.ಕೆ.ಹೆಚ್.ಮುನಿಯಪ್ಪ, ಸಾಕ್ಷ್ಯಚಿತ್ರ ಲೋಕಾರ್ಪಣೆ: ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಅಭಿನಂದನಾ ಗೀತ ಲೋಕಾರ್ಪಣೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ: ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಅಭಿನಂದನಾ ನುಡಿ: ಶಾಸಕ ತನ್ವೀರ್ ಸೇಠ್, ಸ್ಥಳ: ಕಲಾಮಂದಿರ, ಹುಣಸೂರು, ಬೆಳಗ್ಗೆ 10.30 ಗಂಟೆಗೆ.

■ **ಸಮಾಜ ಸೇವಾ ವಿಭಾಗ (ಆರ್‌ಇಆರ್‌ಎಸ್), ಬ್ರಹ್ಮಾಕುಮಾರೀಸ್ ಲಯನ್ಸ್ ಕ್ಲಬ್, ಐಎಸ್‌ಬಿಟಿಐ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವಾಲಯ :** ವಿಶ್ವ ಸಹೋದರತ್ವ ದಿನಾಚರಣೆ ಅಂಗವಾಗಿ ರಕ್ತದಾನ ಅಭಿಯಾನ–2025, ಸ್ಥಳ: ಬ್ರಹ್ಮಾಕುಮಾರೀಸ್, ಯಾದವಗಿರಿ, ಮೈಸೂರು, ಬೆಳಗ್ಗೆ 11 ಗಂಟೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, ಡಾ.ಸಂಜೀವ್ ಕುಲಕರ್ಣಿ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ, ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40–ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ.ವಿಶ್ವನಾಥ್, ದೀಪಿಕಾ ಪಾಂಡುರಂಗಿ, ವ್ಯಾಖ್ಯಾನ–ಡಾ.ಜ್ಯೋತಿ ಶಂಕರ್, 6.50–ರೈತರಿಗೆ ಸಲಹೆ, 7.15 ಭಾವಗೀತೆಗಳು, ಎನ್.ಅರ್ಪಣ, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 10.00–ಕರ್ನಾಟಕ ಶಾಸ್ತ್ರೀಯ ಸಂಗೀತ, ಕೆ.ಭಾರ್ಗವಿ–ಹಾಡುಗಾರಿಕೆ, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಗೇಮ್ ಷೋ, ಪ್ರಸ್ತುತಿ–ಬಿ.ದಿಗ್ವಿಜಯ್, 12.05–ವನಿತಾ ವಿಹಾರ, **ಮಧ್ಯಾಹ್ನ:** 12.35–ದೇವರನಾಮ, 12.45–ನಮ್ಮ ಆರೋಗ್ಯ–ರಾಷ್ಟ್ರೀಯ ನೇತ್ರದಾನ ಪಾಕ್ಷಿಕದ ಸಂದರ್ಭದಲ್ಲಿ ನೇತ್ರದಾನದ ಮಹತ್ವ ಮತ್ತು ಕಣ್ಣುಗಳ ಆರೋಗ್ಯ ರಕ್ಷಣೆ ಕುರಿತು ನೇತ್ರತಜ್ಞರಾದ ಡಾ.ಪಲ್ಲವಿ ಪ್ರಭು ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಡಾ.ಕುಲದೀಪ್.ಎನ್, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, 1.20–ಭಾವಗೀತೆಗಳು, ಮುಕ್ತಾ ಮುರಳಿ, 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ.ಎನ್.ರಮಣಿ–ವೇಣುವಾದನ, 4.00 ಮಹಿಳಾರಂಗ, ಭಾವಸಂಗಮ–ಭಾವಗೀತೆಗಳನ್ನಾಧರಿಸಿದ ಕಾರ್ಯಕ್ರಮ, ಪ್ರಸ್ತುತಿ: ಜೋಶಿಲಾ.ಆರ್, 4.45–ಹಿಂದಿ ಪಾಠ ಪ್ರಸ್ತುತಿ: ಮಾಧವಿ ಭಂಡಾರಿ, 5.05– ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50– ಕೃಷಿರಂಗ: ಪೀಡೆ ನಾಶಕಗಳ ಸುರಕ್ಷಿತ ಬಳಕೆ ಕುರಿತು ಮೈಸೂರು ತಾಲೂಕು ಯಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ.ಜಿ.ಕೆ.ರಾಮೇಗೌಡ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45–ವಿಧಾನಮಂಡಲದಲ್ಲಿ ಇಂದು, 8.00–ಯುವವಾಣಿ, ಯುವ ಸೆಲೆಬ್ರಿಟಿ ಕನ್ನಡ ಚಿತ್ರರಂಗದಲ್ಲಿ ಗುರುತಿಸಿಕೊಂಡಿರುವ ಯುವ ನಟಿ ಧರಣಿ ಅವರೊಂದಿಗೆ ಸಂದರ್ಶನ. ಸಂದರ್ಶಕರು: ದಿಗ್ವಿಜಯ್.ಬಿ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ರಾಘವೇಂದ್ರ–ಹಾಡುಗಾರಿಕೆ, 10.00–ಯಕ್ಷಸಂಪದ–ಬಡಗುತಿಟ್ಟಿನ ಯಕ್ಷಗಾನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ, ಪ್ರಸ್ತುತಿ: ದಿವಾಕರ ಹೆಗಡೆ, 10.30–ಸವಿನೆನಪು.

ಚಾಮರಾಜ ಕ್ಷೇತ್ರದಲ್ಲಿ 3.90 ಕೋಟಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಮೈಸೂರು, ಆ.24– ಮೈಸೂರಿನ ಚಾಮರಾಜ ಕ್ಷೇತ್ರದಲ್ಲಿ 2024–25ನೇ ಸಾಲಿನ ಎಸ್‌ಎಫ್‌ಸಿ ವಿಶೇಷ ಅನುದಾನದಡಿ ಕೈಗೊಂಡಿರುವ 3.90 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್ ಗೌಡರು ಗುದ್ದಲಿ ಪೂಜೆ ನೆರವೇರಿಸಿದರು.

ನಗರದ ವಾರ್ಡ್ ನಂ.21ರ ಜನತಾನಗರ 8ನೇ ಕ್ರಾಸ್, ಗಂಗೋತ್ರಿ ಬಡಾವಣೆಯ 5, 10 ಮತ್ತು 12ನೇ ಕ್ರಾಸ್, ವಾಗ್ದೇವಿನಗರ, ಮಾರುತಿ ದೇವಸ್ಥಾನದಿಂದ ಗಂಗೋತ್ರಿ ಗಣಪತಿ ದೇವಸ್ಥಾನದವರೆಗೆ 400 ಎಂ.ಎಂ ವ್ಯಾಸದ ಹಾಗೂ ಮಾರುತಿ ದೇವಸ್ಥಾನ ಜಂಕ್ಷನ್‌ನಿಂದ ಕಾಮಾಕ್ಷಿ ಆಸ್ಪತ್ರೆ ರಸ್ತೆವರೆಗೆ 600 ಎಂ.ಎಂ. ವ್ಯಾಸದ ಒಳಚರಂಡಿ ಕೊಳವೆ ಮಾರ್ಗ ಸೇರಿದಂತೆ 1.98 ಲಕ್ಷ ರೂ.ಗಳಲ್ಲಿ ವಿವಿಧ ಕಾಮಗಾರಿ, ವಾರ್ಡ್ ನಂ.6 ರ ಕೆಆರ್‌ಎಸ್ ಮುಖ್ಯ ರಸ್ತೆಯಿಂದ ಆದಿತ್ಯ ಆಸ್ಪತ್ರೆವರೆಗೆ 1.27 ಕೋಟಿ ವೆಚ್ಚದಲ್ಲಿ ಒಳಚರಂಡಿ ಕೊಳವೆಮಾರ್ಗ ಅಳವಡಿಸುವ ಕಾಮಗಾರಿ ಮತ್ತು ವಾರ್ಡ್ ನಂ.40ರ ನಜರ್‌ಬಾದ್ ಹೈದರಗುಂಟೆ ಪಾರ್ಕ್‌ನಿಂದ ಅರಸು ಬೋರ್ಡಿಂಗ್ ಶಾಲೆ ವರೆಗೆ 65 ಲಕ್ಷ ರೂ. ವೆಚ್ಚದಲ್ಲಿ ಒಳಚರಂಡಿ ಪೈಪ್‌ಲೈನ್ ಅಳವಡಿಸುವ ಕಾಮಗಾರಿಗೆ ಶಾಸಕರು ಚಾಲನೆ ನೀಡಿದರು.

ಈ ವೇಳೆ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ವಾರ್ಡ್ ಅಧ್ಯಕ್ಷರಾದ ವಿಶ್ವ, ದಿನೇಶ್, ಮಾಜಿ ಮೇಯರ್‌ಗಳಾದ ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಟಿ.ಬಿ.ಚಿಕ್ಕಣ್ಣ, ನಗರ ಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ, ಮುಖಂಡರಾದ ಭಾಸ್ಕರ್ ಎಲ್.ಗೌಡ, ಶ್ರೀನಿವಾಸ್, ರಾಜಣ್ಣ, ಸಂತೋಷ್, ರಾಮಕೃಷ್ಣ, ಲಾಯರ್ ಶ್ರೀನಿವಾಸ್, ಟೆಂಟ್ ಶ್ರೀನಿವಾಸ್, ಸುಶೀಲ ಮರೀಗೌಡ, ಗಾಯತ್ರಿ ನಾರಾಯಣಗೌಡ, ತೇಜಸ್, ಡಾ.ಲೋಕೇಶ್, ರಾಮಣ್ಣ, ಮರಿಲಿಂಗಣ್ಣ, ಚಿಕ್ಕರಂಗ ನಾಯಕ, ನರಸೇಗೌಡ, ಗಿರೀಶ್, ದಿನೇಶ್, ಶಿವು, ಕಾರ್ತಿಕ್, ಕಿಶೋರ್, ನಿತಿನ್, ಪಾಲಿಕೆ ಅಧಿಕಾರಿಗಳಾದ ಶುಶ್ರುತ್, ಮುಸ್ತಫಾ ಮತ್ತಿತರರು ಉಪಸ್ಥಿತರಿದ್ದರು.

ಅಮೃತ ವಿಶ್ವವಿದ್ಯಾಪೀಠಂನ 15ನೇ ಪದವಿ ಪ್ರದಾನ ಸಮಾರಂಭ

ಪರಿಪೂರ್ಣತೆಯನ್ನು ಬೆನ್ನಟ್ಟಿದರೆ ಶ್ರೇಷ್ಠತೆ ನಿಮ್ಮನ್ನು ಹಿಂಬಾಲಿಸುತ್ತದೆ

ಇನ್ಫೋಸಿಸ್ ಕ್ಯಾಂಪಸ್‌ನ ಹಿರಿಯ ಉಪಾಧ್ಯಕ್ಷ ವಿನಾಯಕ ಹೆಗಡೆ ಅಭಿಮತ



ಅಮೃತ ವಿಶ್ವವಿದ್ಯಾಪೀಠಂನ ಮೈಸೂರು ಕ್ಯಾಂಪಸ್‌ನಲ್ಲಿ ಭಾನುವಾರ 15ನೇ ಪದವಿ ಪ್ರದಾನ ಸಮಾರಂಭ ನಡೆಯಿತು.

ಮೈಸೂರು, ಆ.24– ನೀವು ಪರಿಪೂರ್ಣತೆಯನ್ನು ಬೆನ್ನಟ್ಟಿದರೆ ಶ್ರೇಷ್ಠತೆ ನಿಮ್ಮನ್ನು ಹಿಂಬಾಲಿಸುತ್ತದೆ ಎಂದು ಮೈಸೂರು ಇನ್ಫೋಸಿಸ್ ಕ್ಯಾಂಪಸ್‌ನ ಹಿರಿಯ ಉಪಾಧ್ಯಕ್ಷ ಹಾಗೂ ಮುಖ್ಯಸ್ಥ ವಿನಾಯಕ ಹೆಗಡೆ ನೂತನ ಪದವೀಧರರಿಗೆ ಕಿವಿಮಾತು ಹೇಳಿದರು.

ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನಲ್ಲಿ ನಡೆದ 15ನೇ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಪದವೀಧರರಾಗುವ ಹಾದಿಯಲ್ಲಿ ನೆರವಾದ ಪೋಷಕರೊಂದಿಗೆ ಗುರುಗಳನ್ನೂ ಸದಾ ಸ್ಮರಿಸಿಕೊಳ್ಳಬೇಕು. ಘಟಿಕೋತ್ಸವ ಉನ್ನತ ಅಧ್ಯಯನ ಅಥವಾ ವೃತ್ತಿಜೀವನ ಪ್ರವೇಶಿಸುವ ಘಟ್ಟ ಮಾತ್ರವಲ್ಲ, ಇದು ನಿಜವಾದ ಜೀವನಕ್ಕೆ ತಮ್ಮನ್ನು ಆಹ್ವಾನಿಸುವ ಹಂತ ಎಂದರು.

ಪದವಿ ಪಡೆಯುವುದೇ ಅಧ್ಯಯನದ ಕೊನೆಯಲ್ಲ, ಆರಂಭ ಎನ್ನುವುದು ನೆನಪಿನಲ್ಲಿರಲಿ. ಜೀವನದಲ್ಲಿ ಯಶಸ್ಸು ಎನ್ನುವುದು ಸುಂದರ ಕಲ್ಪನೆ, ಗೆಲ್ಲುವ ಗೀಳು, ವೇಗ, ಕಾರ್ಯಗತಗೊಳಿಸುವ ಬದ್ಧತೆ ಮತ್ತು ಶ್ರೇಷ್ಠತೆಯ ಮೇಲೆ ಅವಲಂಬಿತವಾಗಿದೆ. ದೊಡ್ಡ ಕನಸಿನೊಂದಿಗೆ ಸಾಧನೆಯ ಸ್ಥಿತಿಸ್ಥಾಪಕತ್ವ ಕಾಯ್ದುಕೊಳ್ಳಬೇಕು. ಉತ್ತಮರ ಸಹವಾಸವನ್ನು ಆಯ್ಕೆ ಮಾಡಿಕೊಳ್ಳಬೇಕು. ಜೀವನಪರ್ಯಂತ ಕಲಿಯುತ್ತಲೇ ಇರಬೇಕು. 'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂದರೆ ತಾಯಿ ಮತ್ತು ಮಾತೃಭೂಮಿ ಸ್ವರ್ಗಕ್ಕಿಂತಲೂ ಶ್ರೇಷ್ಠ ಎನ್ನುವುದನ್ನು ಎಂದಿಗೂ ಮರೆಯಬಾರದು ಎಂದು ತಿಳಿಸಿದರು.

ಮಾತಾ ಅಮೃತಾನಂದಮಯಿ ಮಠದ ಪ್ರಧಾನ ಕಾರ್ಯದರ್ಶಿ ಸ್ವಾಮಿ ಪೂರ್ಣಾಮೃತಾನಂದ ಪುರಿ ಅವರು ಆಶೀರ್ವಚನ ನೀಡಿ, ಜೀವನವು ಇಚ್ಛಾ ಶಕ್ತಿ, ಜ್ಞಾನ ಶಕ್ತಿ ಮತ್ತು ಕ್ರಿಯಾ ಶಕ್ತಿ ಎಂಬ ಮೂರು ದೈವಿಕ ಶಕ್ತಿಗಳ ಸಮನ್ವಯವಾಗಿದೆ. ಯಾವುದೇ ಮಾಹಿತಿ ಆಂತರಿಕ ಪರಿವರ್ತನೆಗೆ ಕಾರಣವಾಗಬೇಕು. ವೈಯಕ್ತಿಕ ಮತ್ತು ವೃತ್ತಿಪರ ಜೀವನದ ಸಮಗ್ರ ಯಶಸ್ಸಿಗೆ ಬುದ್ಧಿವಂತಿಕೆ, ತಿಳುವಳಿಕೆ ಜೊತೆಗೆ ಸಾಮಾಜಿಕ ಅಂಶವನ್ನು ಸಮತೋಲನಗೊಳಿಸುವುದು ಬಹಳ ಮುಖ್ಯ ಎಂದರು.

ನಿಜವಾದ ಶಿಕ್ಷಣ ಹಾಗೂ ಬುದ್ಧಿವಂತಿಕೆಯು ವಿನಮ್ರತೆಯನ್ನು ನೀಡುತ್ತದೆ. ಪದವಿಗಳಿಗಿಂತ ವ್ಯಕ್ತಿತ್ವ ಬಹಳ ಮುಖ್ಯ. ಪ್ರತಿಯೊಬ್ಬ ವ್ಯಕ್ತಿಯು ಎದುರಿಸುವ ಆಂತರಿಕ ಯುದ್ಧ ಮತ್ತು ಅಜ್ಞಾನವನ್ನು ಜಯಿಸಲು ಅಗತ್ಯವಿರುವ ಅರಿವನ್ನು ಪಡೆದುಕೊಳ್ಳಬೇಕು. ಪದವೀಧರರು ಮಾತಾ ಅಮೃತಾನಂದಮಯೀ ಅಮ್ಮನವರ ಅನುಗ್ರಹದಿಂದ ದಕ್ಕಿರುವ ಮೌಲ್ಯಾಧಾರಿತ ಶಿಕ್ಷಣವನ್ನು ಸಾಕಾರಗೊಳಿಸಬೇಕು. ಕರುಣೆಯುಳ್ಳ ಜವಾಬ್ದಾರಿಯುತ ನಾಯಕರಾಗಿ ಮುಂದುವರಿಯಬೇಕು ಎಂದು ಆಶಿಸಿದರು.

ಅಮೃತ ವಿಶ್ವವಿದ್ಯಾಪೀಠಂನ ಕುಲಸಚಿವ ಡಾ.ಪಿ.ಅಜಿತ್‌ಕುಮಾರ್ ಮಾತನಾಡಿ, ಎಲ್ಲಾ ಸಂಶೋಧನೆ ಮತ್ತು ಶಿಕ್ಷಣವು ಸಹಾನುಭೂತಿಯಲ್ಲಿ ಬೇರೂರಿ ಸಮಾಜಕ್ಕೆ ಸೇವೆ ಸಲ್ಲಿಸುವ ಗುರಿ ಹೊಂದಿರಬೇಕು ಎಂಬುದು ಅಮ್ಮನವರ ದೃಷ್ಟಿಕೋನವಾಗಿದೆ. ಕೆಲಸವನ್ನು ಪೂಜೆಯಂತೆ ಭಾವಿಸಿ ಯಶಸ್ಸು ಮತ್ತು ವೈಫಲ್ಯವನ್ನು ಸಮಾನವಾಗಿ ಸ್ವೀಕರಿಸುವ ಮೂಲಕ ಸ್ಥಿತಿಸ್ಥಾಪಕತ್ವ ಮತ್ತು ಸಮಚಿತ್ತತೆಯನ್ನು ಬೆಳೆಸಿಕೊಳ್ಳಬೇಕು. ಜೀವನದ ಪ್ರತಿಯೊಂದು ಹಂತವನ್ನೂ ಸಹಾನುಭೂತಿಯಿಂದ ಮುನ್ನಡೆಸಬೇಕು ಎಂದು ಅಮ್ಮಾ ಹೇಳಿದ್ದಾರೆ ಎಂದು ತಿಳಿಸಿದರು.

ಪದವಿ ಪ್ರದಾನ: ಅಮೃತ ವಿಶ್ವವಿದ್ಯಾಪೀಠಂನ 15ನೇ ಪದವಿ ಪ್ರದಾನ ಸಮಾರಂಭದಲ್ಲಿ ಪಿಹೆಚ್‌ಡಿ, ಪದವಿ ಹಾಗೂ ಸ್ನಾತಕೋತ್ತರ ಪದವಿಯ ಒಟ್ಟು 661 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ವಿವಿಧ ಪದವಿಗಳ 61 ವಿದ್ಯಾರ್ಥಿಗಳು ರ‍್ಯಾಂಕ್ ಹಾಗೂ ಪದಕ ಸ್ವೀಕರಿಸಿದರು. 13 ಚಿನ್ನದ ಪದಕ ಹಾಗೂ 12 ಬೆಳ್ಳಿ ಪದಕಗಳನ್ನು ರ‍್ಯಾಂಕ್ ವಿಜೇತರಿಗೆ ವಿತರಿಸಲಾಯಿತು.

ಸಮಾರಂಭದಲ್ಲಿ ಅಮೃತ ವಿಶ್ವವಿದ್ಯಾಪೀಠಂನ ಪರೀಕ್ಷಾ ನಿಯಂತ್ರಕ ಡಾ.ಪಿ.ಕೃಷ್ಣಕುಮಾರ್, ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನ ನಿರ್ದೇಶಕ ಬ್ರಹ್ಮಚಾರಿ ಅನಂತಾನಂದ ಚೈತನ್ಯ, ಸಂಚಾಲಕ ಬ್ರಹ್ಮಚಾರಿ ಮುಕ್ತಿಧಾಮೃತ ಚೈತನ್ಯ, ಅಸೋಸಿಯೇಟ್ ಡೀನ್ ಡಾ.ಶೇಖರ್ ಬಾಬು, ಪ್ರಾಂಶುಪಾಲ ಡಾ.ಜಿ.ರವೀಂದ್ರನಾಥ್ ಮತ್ತಿತರರು ಉಪಸ್ಥಿತರಿದ್ದರು.

ಕೊನೆಯ ಎಸೆತದಲ್ಲಿ ಸಿಕ್ಸರ್ ಬಾರಿಸಿ ಶಿವಮೊಗ್ಗ ಲಯನ್ಸ್‌ಗೆ ಮೊದಲ ಗೆಲುವು ತಂದುಕೊಟ್ಟ ಡಿ.ಅವಿನಾಶ್

ಮೈಸೂರು, ಆ.24(ವಿವಿಹೆಚ್)– ಆಲ್‌ರೌಂಡರ್ ಡಿ.ಅವಿನಾಶ್ ಅವರ ಕೊನೆಯ ಬಾಲ್ ಸಿಕ್ಸ್ ಹೊಡೆಯುವ ಮೂಲಕ ಶಿವಮೊಗ್ಗ ಲಯನ್ಸ್‌ಗೆ ಮಹಾರಾಜ ಟ್ರೋಫಿ 2025ರಲ್ಲಿ ಮೊದಲ ಗೆಲುವು ದಾಖಲಿಸಲು ಸಹಕರಿಸಿತು. ಸತತ ಸೋಲಿನಿಂದ ಕಂಗೆಟ್ಟಿದ್ದ ಶಿವಮೊಗ್ಗ ಲಯನ್ಸ್ ಮೊದಲ ಗೆಲುವು ದಾಖಲಿಸಿದರೆ, ಟೂರ್ನಿಯ ಕೊನೆಯ ಪಂದ್ಯದಲ್ಲಿಯೂ ಮೈಸೂರು ವಾರಿಯಸ್ 3 ವಿಕೆಟ್‌ಗಳ ಸೋಲು ಅನುಭವಿಸಿತು.

ಇಲ್ಲಿನ ಗ್ಲೇಡ್ಸ್ ಮೈದಾನದಲ್ಲಿ ಭಾನುವಾರ ಸಂಜೆ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಮೈಸೂರು ವಾರಿಯರ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 180 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಿದ ಶಿವಮೊಗ್ಗ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 181 ರನ್ ಬಾರಿಸಿ 3 ವಿಕೆಟ್‌ಗಳ ಅಂತರದಿಂದ ಗೆದ್ದು, ಟೂರ್ನಿಯಲ್ಲಿ ಮೊದಲ ಗೆಲುವು ದಾಖಲಿಸಿತು.

ಮೈಸೂರು ವಾರಿಯರ್ಸ್ ಇನ್ನಿಂಗ್ಸ್: ಮೊದಲು ಬ್ಯಾಟ್ ಮಾಡಿದ ವಾರಿಯರ್ಸ್‌ಗೆ ಆರಂಭಿಕ ಬ್ಯಾಟರ್ ಎಸ್.ಯು.ಕಾರ್ತಿಕ್ ಉತ್ತಮ ಆರಂಭ ಒದಗಿಸಿದರು. 34 ಎಸೆತಗಳಲ್ಲಿ 53ರನ್ ಗಳಿಸಿ ನಿರ್ಗಮಿಸಿದರು.



ಮೊದಲ ಗೆಲುವಿನ ಸಂಭ್ರಮದಲ್ಲಿ ಶಿವಮೊಗ್ಗ ಲಯನ್ಸ್ ಆಟಗಾರರಾದ ಡಿ.ಅವಿನಾಶ್ ಮತ್ತು ಭರತ್ ಧುರಿ

ಎಂ.ವೆಂಕಟೇಶ್ 3(9), ಎಸ್.ಶರತ್ 8(14), ಕೆ.ಎಸ್.ಲಂಕೇಶ್ 24(20), ನಾಯಕ ಮನೀಶ್ ಪಾಂಡೆ 7(6), ಯಶೋವರ್ಧನ್ ಪರಂತಪ್ 12(11) ರನ್ ಗಳಿಸಿ ಔಟಾದರು. ಕೊನೆಯಲ್ಲಿ ಅಬ್ಬರಿಸಿದ ಹರ್ಷಿಲ್ ಧರ್ಮಾನಿ ಅಜೇಯ 37(16), ಸಾಗರ್ ಗೌತಮ್ ಔಟಾಗದೇ 30(11) ರನ್ ಕಲೆಹಾಕಿದರು.

ಶಿವಮೊಗ್ಗ ಪರ ಎಂ.ಬಿ.ದರ್ಶನ್, ಧ್ರುವ್ ಪ್ರಭಾಕರ್ ತಲಾ 2ವಿಕೆಟ್ ಪಡೆದರು. ಆನಂದ್ ದೊಡ್ಮನಿ, ಹಾರ್ದಿಕ್ ರಾಜ್ ಒಂದೊಂದು ವಿಕೆಟ್ ಕಿತ್ತರು.

ಶಿವಮೊಗ್ಗ ಇನ್ನಿಂಗ್ಸ್: 181ರನ್ ಬೆನ್ನಟ್ಟಿದ ಲಯನ್ಸ್‌ಗೆ ಆರಂಭಿಕ ಆಘಾತ ಎದುರಾಯಿತು. ತುಷಾರ್ ಸಿಂಗ್ 2(3), ನಾಯಕ ನಿಹಾಲ್ ಉಲ್ಲಾಳ್ 4(4) ಹಾಗೂ ಧ್ರುವ್ ಪ್ರಭಾಕರ್ 2(3) ಬೇಗನೇ ಔಟಾದರು. ಪವರ್ ಪ್ಲೇನಲ್ಲೇ ಪ್ರಮುಖ ಮೂರು ವಿಕೆಟ್ ಕಳೆದುಕೊಂಡ ಲಯನ್ಸ್‌ಗೆ ಅನೀಶ್ವರ್ ಗೌತಮ್ 49(35) ಹಾಗೂ ರೋಹಿತ್ ಕುಮಾರ್ 46(33)ಅಲ್ಪ ಹೋರಾಟ ನಡೆಸಿದರು.

ಕೊನೆಯಲ್ಲಿ ಅಬ್ಬರಿಸಿದ ಡಿ.ಅನಿವಾಶ್ ಕೊನೆಯ ಎಸೆತದಲ್ಲಿ ಸಿಕ್ಸರ್ ಬಾರಿಸುವ ಮೂಲಕ ತಂಡಕ್ಕೆ ಗೆಲುವು ತಂದುಕೊಟ್ಟರು. ಅವರು ತಮ್ಮ ಇನ್ನಿಂಗ್ಸ್‌ನಲ್ಲಿ 45(21) ರನ್ ಗಳಿಸಿ ಅಜೇಯರಾಗಿ ಉಳಿದು ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು. ಇವರಿಗೆ ಹಾರ್ದಿಕ್ ರಾಜ್ 21(14), ಭರತ್ ಧೂರಿ ಅಜೇಯ 9(7) ಸಾಥ್ ನೀಡಿದರು.

ವಾರಿಯರ್ಸ್ ಪರ ಎಂ.ವೆಂಕಟೇಶ್ 3, ಪ್ರಸಿದ್ಧ್ ಕೃಷ್ಣ 2 ವಿಕೆಟ್ ಉರುಳಿಸಿದರು.

ಮಂಗಳೂರು ಡ್ರ್ಯಾಗನ್ಸ್‌ಗೆ 9 ವಿಕೆಟ್‌ಗಳ ಭರ್ಜರಿ ಗೆಲುವು

ಮೈಸೂರು, ಆ.24(ವಿವಿಹೆಚ್)– ಬಿ.ಆರ್.ಶರತ್ ಹಾಗೂ ಲೋಚನ್ ಗೌಡ ಅವರ ಅರ್ಧಶತಕದಾಟದ ಬಲದಿಂದ ಮಂಗಳೂರು ಡ್ರ್ಯಾಗನ್ಸ್, ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ 9 ವಿಕೆಟ್‌ಗಳ ಅಂತರದ ಭರ್ಜರಿ ಗೆಲುವು ದಾಖಲಿಸಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಭಾನುವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ಶುಭಾಂಗ್ ಹೆಗ್ಡೆ 39(29) ಹಾಗೂ ಸೂರಜ್ ಅಹುಜಾ 36(26) ಆಟದ ಬಲದಿಂದ 9 ವಿಕೆಟ್ ನಷ್ಟಕ್ಕೆ 146 ರನ್ ಗಳಿಸಿತು. ಉಳಿದಂತೆ ಭುವನ್ ರಾಜು 25(25), ವಿದ್ಯಾಧರ್ ಪಾಟೀಲ್ 25(9), ಎಲ್.ಆರ್.ಚೇತನ್ 2(2), ಮಯಾಂಕ್ ಅಗರ್ವಾಲ್ 5(5),



ಎಂ.ಜಿ.ನವೀನ್ 6(8), ಮಾಧವ್ ಪ್ರಕಾಶ್ ಬಜಾಜ್ 5(9) ರನ್ ಗಳಿಸಿದರು.

ಡ್ರ್ಯಾಗನ್ಸ್ ಪರ ಉತ್ತಮವಾಗಿ ಬೌಲಿಂಗ್ ಮಾಡಿದ ನಾಯಕ ಶ್ರೇಯಸ್ ಗೋಪಾಲ್ 3 ವಿಕೆಟ್, ಅಭಿಲಾಷ್ ಶೆಟ್ಟಿ 2 ವಿಕೆಟ್ ಕಬಳಿಸಿ ಮಿಂಚಿದರು. ಮ್ಯಾಕ್ನಿಲ್, ಸಚಿನ್ ಸಿಂಧೆ ತಲಾ ಒಂದೊಂದು ವಿಕೆಟ್ ಪಡೆದರು.

ಬೆಂಗಳೂರು ನೀಡಿದ 147 ರನ್ ಬೆನ್ನತ್ತಿದ ಮಂಗಳೂರಿಗೆ ಲೋಚನ್ ಗೌಡ ಹಾಗೂ ಬಿ.ಆರ್.ಶರತ್ ಉತ್ತಮ ಜೊತೆಯಾಟ ಆಡುವ ಮೂಲಕ ಎದುರಾಳಿ ತಂಡದ ಬೌಲರ್‌ಗಳನ್ನು ಕಾಡಿದರು. ಲೋಚನ್ 32 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸರ್ ಸಹಿತ 55 ರನ್ ಗಳಿಸಿ ಔಟಾದರೆ, ಬಿ.ಆರ್.ಶರತ್ 47 ಎಸೆತ ಎದುರಿಸಿ 9 ಬೌಂಡರಿ, 1 ಸಿಕ್ಸರ್ ಸಹಿತ 72 ರನ್ ಗಳಿಸಿ ಅಜೇಯರಾಗಿ ಉಳಿದು ತಂಡಕ್ಕೆ ಗೆಲುವು ತಂದುಕೊಡುವ ಮೂಲಕ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು. ಆಶೀಶ್ ಮಹೇಶ್ ಔಟಾಗದೇ 16(19)ರನ್ ಗಳಿಸಿದರು.

ಬೆಂಗಳೂರು ಪರ ರೋಹನ್ ರಾಜು ಒಂದು ವಿಕೆಟ್ ಪಡೆದರು.

ಇಂದಿನ ಪಂದ್ಯ

ಪಂದ್ಯ–29: ಶಿವಮೊಗ್ಗ ಲಯನ್ಸ್ vs ಹುಬ್ಬಳ್ಳಿ ಟೈಗರ್ಸ್ (ಮಧ್ಯಾಹ್ನ 3.15)

ಪಂದ್ಯ–30; ಮಂಗಳೂರು ಡ್ರ್ಯಾಗನ್ಸ್ vs ಗುಲ್ಬರ್ಗಾ ಮಿಸ್ಟಿಕ್ಸ್ (ಸಂಜೆ 7.15)

ಯುವ ಸಮುದಾಯ ಓದಿನ ಜೊತೆಗೆ ಕ್ರೀಡಾ ಚಟುವಟಿಕೆ ರೂಢಿಸಿಕೊಳ್ಳಬೇಕು

ಮಾಜಿ ಶಾಸಕ ಎಂ.ಕೆ.ಸೋಮಶೇಖರ ಕಿವಿಮಾತು



ಮೈಸೂರು ಜಿಲ್ಲಾ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಹಾಗೂ ಅಪೋಲೋ ವ್ಯಾಯಾಮ ಶಾಲೆ ಸಹಯೋಗದಲ್ಲಿ ನಡೆದ ಜಿಲ್ಲಾ ಮಟ್ಟದ ಬೆಂಚ್ ಪ್ರೆಸ್ ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್‌ನಲ್ಲಿ ವಿಜೇತರಾದವರಿಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಬಹುಮಾನ ವಿತರಿಸಿದರು.

ಮೈಸೂರು, ಆ.24– ಯುವ ಸಮುದಾಯ ಮೊಬೈಲ್ ಗೀಳಿನಿಂದ ಹೊರಬಂದು ಓದಿನ ಜೊತೆಗೆ ಕ್ರೀಡಾ ಚಟುವಟಿಕೆಗಳನ್ನು ರೂಢಿಸಿಕೊಳ್ಳಬೇಕು ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹೇಳಿದರು.

ಮೈಸೂರು ಜಿಲ್ಲಾ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಹಾಗೂ ಅಪೋಲೋ ವ್ಯಾಯಾಮ ಶಾಲೆ ಸಹಯೋಗದಲ್ಲಿ ಓವಲ್ ಕ್ರೀಡಾಂಗಣ ಪಕ್ಕದ ಲಯನ್ಸ್‌ಕ್ಲಬ್ ಆಫ್ ಮೈಸೂರು ಸೆಂಟ್ರಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಬೆಂಚ್ ಪ್ರೆಸ್ ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್–2025ರ ವಿವಿಧ ವಿಭಾಗಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಹಣ, ಆಸ್ತಿ–ಅಂತಸ್ತಿಗಿಂತ ಆರೋಗ್ಯ ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಬದಲಾದ ಆಹಾರ ಪದ್ಧತಿ, ಜೀವನ ಶೈಲಿಯಿಂದಾಗಿ ಅತ್ಯಂತ ಚಿಕ್ಕ ವಯಸ್ಸಿನಲ್ಲೇ ರೋಗಗಳಿಗೆ ತುತ್ತಾಗುವುದು ಹೆಚ್ಚಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಯುವ ಸಮುದಾಯ ಮೊಬೈಲ್ ಗೀಳನ್ನು ಬಿಟ್ಟು ಓದಿನ ಜೊತೆಗೆ ಕ್ರೀಡಾಸಕ್ತಿ ಮೈಗೂಡಿಸಿಕೊಳ್ಳಬೇಕು ಎಂದರು.


ಪವರ್ ಲಿಫ್ಟಿಂಗ್ ಕೂಡ ಒಂದು ದೇಹದಾರ್ಢ್ಯ ಮತ್ತು ಕೌಶಲ್ಯ ಕ್ರೀಡೆ. ನಿರಂತರ ತರಬೇತಿ ಆಧಾರಿತ ಸ್ಪರ್ಧೆಗೆ ದೇಹದ ಮೈಕಟ್ಟನ್ನು ಸದೃಢಗೊಳಿಸಿಕೊಳ್ಳಬೇಕು. ಆದರೆ ಕೆಲವರು ಇದಕ್ಕಾಗಿ ರಾಸಾಯನಿಕಯುಕ್ತ ಪೌಡರ್‌ಗಳನ್ನು ಅವಲಂಬಿಸುತ್ತಾರೆ. ಬೇಗ ಬಲಾಢ್ಯನಾಗಬೇಕೆಂಬ ಧಾವಂತದಲ್ಲಿ ಹೃದಯಾಘಾತ ಇನ್ನಿತರ ರೋಗಗಳಿಗೆ ಹಠಾತ್ ತುತ್ತಾಗುತ್ತಿದ್ದಾರೆ. ಈ ಬಗ್ಗೆ ಎಚ್ಚರಿಕೆ ವಹಿಸಿ, ನೈಸರ್ಗಿಕ ಆಹಾರ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು. ನಿಧಾನವಾದರೂ ಸರಿಯಾದ ರೀತಿಯಲ್ಲಿ ಯಶಸ್ಸು ಸಾಧಿಸಬೇಕು ಎಂದು ಕಿವಿಮಾತು ಹೇಳಿದರು.

ಅಪೋಲೋ ವ್ಯಾಯಾಮ ಶಾಲೆಯ ಎನ್.ಭಾಸ್ಕರ್, ವೇಣುಗೋಪಾಲ್, ಶಿವಕುಮಾರ್, ಶರತ್‌ಕುಮಾರ್, ಪ್ರಜ್ವಲ್, ಪ್ರವೀಣ, ರೇಣು, ಕರ್ನಾಟಕ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಮಂಗಳೂರು ತೀರ್ಪುಗಾರರಾದ ಎಂ.ಜಯರಾಮ್ ಮತ್ತಿತರರು ಉಪಸ್ಥಿತರಿದ್ದರು.

ವಿಜೇತರು: ಸಬ್ ಜೂನಿಯರ್ ವಿಭಾಗದಲ್ಲಿ ಶಾಹಿದ್ ಪಾಷಾ, ಸೀನಿಯರ್ ವಿಭಾಗದಲ್ಲಿ ಜೀಸನ್ ಪ್ರಶಸ್ತಿ ಪಡೆದರೆ, ಭೀಮಾ ಫಿಟ್ನೆಸ್‌ಗೆ ಟೀಮ್ ಚಾಂಪಿಯನ್ ಶಿಪ್ ದಕ್ಕಿತು. ಮಹಿಳಾ ವಿಭಾಗದ ಭೂಮಿಕಾ 'ಸ್ಟ್ರಾಂಗ್ ವಿಮೆನ್' ಪ್ರಶಸ್ತಿ ಪಡೆದರು.

ಒಳಮೀಸಲಾತಿ ಹಿನ್ನೆಲೆಯ ವಿದ್ಯಮಾನಗಳ ನೋಡಿದರೆ ದಲಿತರ ಒಡಲು ಮಮತೆಯಿಂದ ಕೂಡಿಲ್ಲವೆಂದೆನಿಸುತ್ತದೆ

ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಕಳವಳ



'ಬೋಧಿ ವೃಕ್ಷದ ಹಾಡು' ಕವನ ಸಂಕಲನವನ್ನು ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಬಿಡುಗಡೆಗೊಳಿಸಿದರು.

> ಏನನ್ನು ಬೊಟ್ಟು ಮಾಡಿ ತೋರಿಸಿ, ಪ್ರತಿಭಟಿಸುತ್ತಿದ್ದೇವೋ ಅದೆಲ್ಲವೂ ನಮ್ಮ ಒಡಲನ್ನು ಸೇರುತ್ತಿದೆ. 50 ವರ್ಷದ ಪ್ರಜ್ಞೆ, ಸಂವೇದನೆ, ಸಮಕಾಲಿನ ಸಂದರ್ಭದಲ್ಲಿ ಬೇರೆ ಏನನ್ನೋ ಬೇಡುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಿದೆ. ಮೈಕ್ರೋ ಫ್ಯಾಸಿಸಮ್ ಹೆಚ್ಚಿದೆ. ಹೇಳಬೇಕೆಂದರೆ ಈಗ ನಾಲಿಗೆ ಸತ್ತು ಹೋಗಿದೆ.
>
> –ಕೋಟಿಗಾನಹಳ್ಳಿ ರಾಮಯ್ಯ, ಸಾಹಿತಿ

ಮೈಸೂರು, ಆ.24(ಎಂಕೆ)–ಒಳಮೀಸಲಾತಿಯ ಹಿನ್ನಲೆಯಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಪ್ರಜ್ಞೆಯಿಂದ ಕಣ್ತೆರೆದು ನೋಡಿದರೆ ದಲಿತರ ಒಡಲು ಮಮತೆಯಿಂದ ಕೂಡಿಲ್ಲ. ಒಡಲಿನಲ್ಲಿ ಏನೋ ದೋಷ ಕಾಣುತ್ತಿದೆ ಎಂದು ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಕಳವಳ ವ್ಯಕ್ತಪಡಿಸಿದರು.

ಮೈಸೂರು ರಂಗಾಯಣದ ಶ್ರೀರಂಗ ವೇದಿಕೆಯಲ್ಲಿ ಜೋಳಿಗೆ ಪ್ರಕಾಶನ ಮತ್ತು ಅಭ್ಯಾಸಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಲೇಖಕ ಮಂಜು ಕೋಡಿಉಗನೆ ರಚಿತ 'ಬೋಧಿ ವೃಕ್ಷದ ಹಾಡು' ಕವನ ಸಂಕಲನ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಲೇಖಕರು ದಲಿತರ ಒಡಲು, ತಾಯಿ ಮಮತೆಯ ಒಡಲು ಎಂದು ಬರೆದಿದ್ದಾರೆ. ಆದರೆ, ಈ ಒಳಮೀಸಲಾತಿ ವಿದ್ಯಮಾನಗಳನ್ನು ನೋಡುತ್ತಿದ್ದರೆ ದಲಿತರ ಒಡಲು ಮಮತೆಯಿಂದ ಕೂಡಿಲ್ಲ ಎಂದೆನಿಸುತ್ತಿದ್ದು ಕಲ್ಮಶವಿಲ್ಲದ ಒಡಲಿನಲ್ಲಿ ನಾವಿಲ್ಲ ಎಂದರು.

ನಾವೂ ದಲಿತರ ಒಡಲು ತಾಯಿಯ ಮಡಿಲು ಎಂದು ಭ್ರಮಿಸಿದ್ದೆವು. ಆದರೆ, ಬಾಬಾ ಸಾಹೇಬರು ಹೇಳಿದಂತೆ ಒಂದೇ ದೋಣಿಯಲ್ಲಿ ಪ್ರಯಾಣಿಸುವ ನಮ್ಮನ್ನು ಜಾತಿ ಹಿತಾಸಕ್ತಿಯೆಂಬ ನಮ್ಮದೇ ತೂತುಗಳು ದೋಣಿಯನ್ನು ಮುಳುಗಿಸುತ್ತದೆಯೇ ಹೊರತು, ಮುಂದುವರೆಯಲು ಅಥವಾ ದಡ ಸೇರಲು ಬಿಡುವುದಿಲ್ಲ ಎಂದು ವಿಶ್ಲೇಷಿಸಿದರು.

ನಮ್ಮ ಸಹೋದರರ ತಟ್ಟೆ ಬರಿದಾಗಿದ್ದು, ನಮ್ಮ ತಟ್ಟೆಯ ತುಂಬ ಅನ್ನವಿದ್ದರೂ ಹಂಚಿಕೊಳ್ಳಲಾಗದ ಪರಿಸ್ಥಿತಿಗೆ ಬಂದಿದ್ದೇವೆ. ಒಂದು ಕಡೆ ಒಳ ಮೀಸಲಾತಿ ಘೋಷಣೆಯಾದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಟೌಟ್‌ಗೆ ಕ್ಷೀರಾಭಿಷೇಕ ಮಾಡುವ ಚಿತ್ರದ ಜೊತೆಗೆ ಕೇಪಮಾರಿಸ್ ಎಂಬ ಕೆಲವೇ ಕೆಲವು ಜನಸಂಖ್ಯೆ ಇರುವ ಸಮುದಾಯದ ಹೆಣ್ಣು ಮಗಳೊಬ್ಬಳು ಮಣ್ಣು ತೆಗೆದು ಈ ಪ್ರಭುತ್ವಕ್ಕೆ ಧಿಕ್ಕಾರ ಹಾಕುವ ಚಿತ್ರಣವೂ ಕಾಣಿಸುತ್ತಿದೆ ಎಂದು ಹೇಳಿದರು.

ಸೃಜನಶೀಲ ಕೃತಿ: ಯಾವುದೇ ಕೃತಿಯು ಸೃಜನಶೀಲ ಕೃತಿ ಎಂದು ಕರೆಸಿಕೊಳ್ಳಬೇಕಾದರೆ, ಸಮಕಾಲೀನವಾಗಿರಬೇಕು. ನಮ್ಮ ಕಣ್ಣೆದುರು ನಡೆಯುವ ಸಂಗತಿಗಳನ್ನು ಪ್ರತಿಬಿಂಬಿಸುವಂತಿರಬೇಕು. 'ಬೋಧಿ ವೃಕ್ಷದ ಹಾಡು' ಕೃತಿಯು ಪ್ರಸ್ತುತ ಕಾಲಘಟ್ಟದ ಹಲವು ಪ್ರಶ್ನೆಗಳನ್ನು ನಮ್ಮನ್ನೇ ನಾವು ಕೇಳಿಕೊಳ್ಳುವಂತಹ ನಿಟ್ಟಿನಲ್ಲಿ ಮಂಡನೆಯಾಗಿದೆ. ಕೃತಿಯಲ್ಲಿ ಬುದ್ಧ, ಅಂಬೇಡ್ಕರರು ಈ ಸಂಕಲನದ ಸೂತ್ರ. ಅವರ ಪ್ರೀತಿ, ಕರುಣೆ, ಮೈತ್ರಿ ತತ್ವಗಳನ್ನು ನೆನಪಿಸುವ ಸಾಲುಗಳಿವೆ ಎಂದು ಲೇಖಕರು ಉಲ್ಲೇಖಿಸಿದ್ದಾರೆ ಎಂದರು.

ಸಮುದಾಯದ ಭಾಷೆ ಮತ್ತು ಅನುಭವ ಕಾವ್ಯವಾಗುವುದು, ಅರಿವು ಮತ್ತು ಅನುಭವಗಳ ಅನುಸಂಧಾನದಿಂದ. ಈ ಸಂಕಲನದಲ್ಲಿ ಹಸಿವು, ಅವಮಾನ ಮತ್ತು ಬಡತನ ಬೇರು ಬಿಟ್ಟಿದ್ದ ನೆಲದಲ್ಲಿ ಅಕ್ಷರ, ಬುದ್ಧ, ಅಂಬೇಡ್ಕರ್ ಮತ್ತು ಹೋರಾಟ ನೆಲೆಯೂರುತ್ತಿವೆ ಎಂಬುದನ್ನು ಲೇಖಕರು ಕಾವ್ಯಶಿಲ್ಪದ ಮೂಲಕ ನೀಡಿದ್ದಾರೆ ಎಂದರು. ಸಂಸ್ಕೃತಿ ಚಿಂತಕ ಬಿ.ಮಹೇಶ್ ಹರವೆ, ವಿಮರ್ಶಕ ವಿ.ಎಲ್. ನರಸಿಂಹ ಮೂರ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಡಾ.ರವಿಕುಮಾರ್ ಬಾಗಿ, ಅಭ್ಯಾಸಿ ಟ್ರಸ್ಟ್ ಕಿರಣ್ ಗಿರ್ಗಿ ಉಪಸ್ಥಿತರಿದ್ದರು.

ಅಭಿಮನ್ಯು ನೇತೃತ್ವದ ಗಜಪಡೆ ತಾಲೀಮು ಕಣ್ತುಂಬಿಕೊಂಡ ಪ್ರವಾಸಿಗರು

ಗಜಪಡೆಯೊಂದಿಗೆ ಹೆಜ್ಜೆ ಹಾಕಿದ ಮ್ಯಾರಥಾನ್ ಸ್ಪರ್ಧಿಗಳು



ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ತಾಲೀಮಿಗೆ ಬರುತ್ತಿದ್ದ ಗಜಪಡೆಯನ್ನು ಕಣ್ತುಂಬಿಕೊಂಡು ಸಂಭ್ರಮಿಸುತ್ತಿರುವ ಜನ

ಮೈಸೂರು, ಆ.24(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆ ಭಾನುವಾರ ನೂರಾರು ಜನರ ಸಮ್ಮುಖದಲ್ಲಿ ತಾಲೀಮು ನಡೆಸುವ ಮೂಲಕ ಎಲ್ಲರ ಪ್ರೀತಿಗೆ ಪಾತ್ರವಾಯಿತು.

ಅರಮನೆಯಿಂದ ಬಂಬೂ ಬಜಾರ್ ವರೆಗೆ ಮೊದಲ ತಂಡದ 9 ಆನೆಗಳು ಇಂದು ಬೆಳಿಗ್ಗೆ ತಾಲೀಮು ನಡೆಸಿದವು. ಕೋಟೆ ಆಂಜನೇಯಸ್ವಾಮಿ ದೇವಾಲಯದ ಪಕ್ಕದ ಬಲರಾಮ ದ್ವಾರದಿಂದ ಗಜಪಡೆ ಹೊರಗೆ ಬರುತ್ತಿದ್ದಂತೆ ಅಪಾರ ಸಂಖ್ಯೆಯ ಜನರು ತಮ್ಮ ಮೊಬೈಲ್‌ಗಳಲ್ಲಿ ಗಜಪಡೆಯನ್ನು ಚಿತ್ರೀಕರಿಸಿಕೊಂಡು ಭವ್ಯ ಸ್ವಾಗತ ನೀಡಿದರು.

ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮದ ಬಗ್ಗೆ ಜಾಗೃತಿ ಮೂಡಿಸಲು ಆಯೋಜಿಸಿದ್ದ ಮ್ಯಾರಾಥಾನ್‌ನಲ್ಲಿ ಪಾಲ್ಗೊಳ್ಳಲು ಬಂದಿದ್ದ ಓಟಗಾರರರು ಗಜಪಡೆಯೊಂದಿಗೆ ಸ್ವಲ್ಪ ದೂರ ಹೆಜ್ಜೆ ಹಾಕಿ ಸಂಭ್ರಮಿಸಿದರು. ಬಳಿಕ ಭದ್ರತಾ ದೃಷ್ಟಿಯಿಂದ ಪೊಲೀಸರು ಹಾಗೂ ಅರಣ್ಯ ಸಿಬ್ಬಂದಿ ಗಜಪಡೆಯೊಂದಿಗೆ ಬರುತ್ತಿದ್ದ ಮ್ಯಾರಾಥಾನ್ ಓಟದ ಸ್ಪರ್ಧಿ ಮತ್ತು ಸಾರ್ವಜನಿಕರನ್ನು ದೂರಕ್ಕೆ ಸರಿಸಿ ನಂತರ ಆನೆಗಳನ್ನು ತಾಲೀಮಿಗೆ ಕರೆದೊಯ್ದರು.

ಇಂದು ಭಾನುವಾರವಾಗಿರುವ ಹಿನ್ನೆಲೆಯಲ್ಲಿ ಬೆಂಗಳೂರು ಸೇರಿದಂತೆ ವಿವಿಧೆಡೆಯಿಂದ ಗಜಪಡೆಯನ್ನು ನೋಡಲು ಸಾಕಷ್ಟು ಮಂದಿ ಅರಮನೆಯತ್ತ ಧಾವಿಸಿದ್ದರು. ಗಜಪಡೆ ಅರಮನೆಯಿಂದ ಹೊರಬರುತ್ತಿದ್ದಂತೆ ಸೀಟಿ ಊದಿ ಚಪ್ಪಾಳೆ ಹೊಡೆದು ಸ್ವಾಗತಿಸಿದರು. ದಾರಿಯುದ್ದಕ್ಕೂ ನೂರಾರು ಮಂದಿ ಪ್ರವಾಸಿಗರು ಮತ್ತು ಪ್ರಾಣಿಪ್ರಿಯರು ತಾಲೀಮಿಗಾಗಿ ಹೋಗುತ್ತಿದ್ದ ಗಜಪಡೆಯನ್ನು ಕಣ್ತುಂಬಿಕೊಂಡು ಸಂಭ್ರಮಿಸಿದರು.

ನಿರಾಸೆ: ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ದಸರಾ ಗಜಪಡೆ ತಾಲೀಮು ನಡೆಸಲಿವೆ ಎಂಬ ಮಾಹಿತಿ ಪಡೆದು ಹಲವಾರು ಮಂದಿ ಪಂಜಿನ ಕವಾಯತು ಮೈದಾನದ ಬಳಿ ನೆರೆದಿದ್ದರು. ಆದರೆ ಆನೆಗಳ ತಾಲೀಮು ಆರ್‌ಎಂಸಿ ವೃತ್ತದ ಬಳಿಗೆ ಸೀಮಿತವಾಗಿದ್ದರಿಂದ ಕವಾಯತು ಮೈದಾನದಲ್ಲಿ ನೆರೆದಿದ್ದವರು ಬೇಸರದಿಂದ ವಾಪಸ್ಸು ಹೋಗುವಂತಾಯಿತು.

ನಕ್ಕರೆ ಅದೇ ಸ್ವರ್ಗ

ತಿಮ್ಮ ಮೊದಲ ಬಾರಿ ವಿಮಾನ ಹತ್ತಿ ಕುಳಿತ. ಮೊದಲ ಪ್ರಯಾಣವಾದ್ದರಿಂದ ಭಯಗೊಂಡಿದ್ದ. ಕೆಲವೇ ಕ್ಷಣಗಳಲ್ಲಿ ವಿಮಾನ ರನ್‌ವೇಯಿಂದ ಓಡಿತು. ನಿಧಾನಕ್ಕೆ ಅದರ ಮುಂದಿನ ಗಾಲಿಗಳು ಮೇಲಕ್ಕೆದ್ದಿತು. ತಕ್ಷಣ ತಿಮ್ಮ ಓಡಿ ಹೋಗಿ ಪೈಲಟ್‌ಗೆ ಚೆನ್ನಾಗಿ ತದುಕಿ ಅಂದ: ಮೊದಲೇ ಹೆದರಿ ಸಾಯ್ತಾ ಇದ್ದೀನಿ. ನೀನು ನೋಡುದ್ರೆ, ವ್ಹೀಲಿಂಗ್ ಮಾಡ್ತ ಇದೀಯಲ್ಲ ಮಾರಾಯ...

ಮೈಸೂರು ಮಿತ್ರ

ಸೋಮವಾರ, 25 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ಗೋಡೆಗಳಲ್ಲಿ ಬಿರುಕು ಬಿಟ್ಟರೆ ಗೋಡೆಗಳು ಬಿದ್ದು ಹೋಗುತ್ತವೆ.
ಸಂಬಂಧಗಳಲ್ಲಿ ಬಿರುಕು ಬಿಟ್ಟಾಗ ಗೋಡೆಗಳು ಹುಟ್ಟಿಕೊಳ್ಳುತ್ತವೆ!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಲಾಭ ನೋಡಿ ಬಾಳೆಹಣ್ಣು ತಿಂದಂತೆ

ನಿಮ್ಮ ಪತ್ರಗಳು

■ ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡಿದವರಿಗೆ ಶೀಘ್ರ ಶಿಕ್ಷೆಯಾಗಲಿ

ಮಾನ್ಯರೆ,

ನಮ್ಮ ರಾಜ್ಯದ ಅತ್ಯಂತ ಪವಿತ್ರ ಕ್ಷೇತ್ರಗಳಲ್ಲಿ ಒಂದೆಂದು ಪರಿಗಣಿಸಲಾಗಿರುವ, ಕೋಟ್ಯಂತರ ಜನರ ಭಕ್ತಿ ಕೇಂದ್ರವೂ ಆಗಿರುವ ಧರ್ಮಸ್ಥಳವು ಕೆಲವು ಪಟ್ಟಭದ್ರ ಹಿತಾಸಕ್ತರ ಕೀಳುಮಟ್ಟದ ಸ್ವಾರ್ಥಕ್ಕಾಗಿ ಬಲಿಯಾಗುವ ಲಕ್ಷಣಗಳು ಕಂಡುಬರುತ್ತಿವೆ.

ಕೇವಲ ಒಬ್ಬ ಏನೂ ಅಲ್ಲದ 'ಯಕಶ್ಚಿತ್' ವ್ಯಕ್ತಿಯೂ ಕೂಡ ಇಂಥ ಒಂದು ಪ್ರಮುಖ ಕ್ಷೇತ್ರವನ್ನು ಜನರು ಬಾಯಿಗೆ ಬಂದಂತೆ ಮಾತಾಡುವ ಹಾಗೆ ಮಾಡಿರುವುದು ಖಂಡನೀಯ.ಹಾಗೆಂಯೇ 'ಅನಾಮಿಕ'ನೊಬ್ಬ ನೀಡಿದ ದೂರೊಂದು ಸಮಾಜದಲ್ಲಿ ಅಲ್ಲೋಲಕಲ್ಲೋಲ ಉಂಟಾಗುವಂತೆ ಮಾಡಿದ್ದು, ರಾಜಕೀಯ ಆರೋಪ ಪ್ರತ್ಯಾರೋಪಗಳಿಗೆ ಕಾರಣವಾಗಿದ್ದು, ಸರ್ಕಾರವೇ ಇಕ್ಕಟ್ಟಿಗೆ ಸಿಲುಕುವಂತಾಗಿದ್ದು, ಕೋಟ್ಯಂತರ ಜನರ ಭಕ್ತಿಯೇ ಪ್ರಶ್ನಾರ್ಹವಾಗುವಂತೆ ಮಾಡಿದ್ದು, ಬಹುಸಂಖ್ಯಾತರ ಧರ್ಮದ ಅವಹೇಳನಕ್ಕೂ ಕಾರಣವಾಗಿದ್ದು, ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾದ ವಿಚಾರವಾಗಿದೆ. ಈ ಅನಾಮಿಕ ಯಾರೆಂದು ಇದೀಗ ಒಂದೊಂದೇ ಮಾಹಿತಿಗಳು ಹೊರಬರುತ್ತಿವೆ. ಇವನಿಗೆ ನಮ್ಮ ಕಾನೂನು ವ್ಯವಸ್ಥೆಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಬೇಗ ವಿಚಾರಣೆ ನಡೆಸಿ ಸೂಕ್ತ ಶಿಕ್ಷೆ ವಿಧಿಸುವುದಲ್ಲದೆ ಇವನ ಹಿಂದೆ ಯಾರೆಲ್ಲ ಇದ್ದಾರೆ ಎಂದು ತನಿಖೆ ನಡೆಸಿ ಅವರಿಗೂ ಆದಷ್ಟು ಬೇಗ ಸೂಕ್ತ ಕಠಿಣ ಶಿಕ್ಷೆ ವಿಧಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುವ ಮೂಲಕ ಇಂಥವರಿಗೆ ಕಠಿಣ ಸಂದೇಶ ರವಾನಿಸಬೇಕಿದೆ.

–ರಾಜಶೇಖರಮೂರ್ತಿ, ಬೆಳಗನಹಳ್ಳಿ, ಹೆಚ್.ಡಿ.ಕೋಟೆ ತಾಲೂಕು, ಮೈಸೂರು.

■ ಉಪರಾಷ್ಟ್ರಪತಿ ಹುದ್ದೆಯನ್ನ ವಿರೋಧ ಪಕ್ಷಗಳಿಗೆ ಬಿಟ್ಟುಕೊಡಬಹುದಿತ್ತು

ಮಾನ್ಯರೆ,

ಉಪರಾಷ್ಟ್ರಪತಿ ಚುನಾವಣೆಗೆ ಎನ್‌ಡಿಎ ಹಾಗೂ ಇಂಡಿಯಾ ಬ್ಲಾಕ್ ಮೈತ್ರಿಕೂಟಗಳು ತಮ್ಮ ತಮ್ಮ ಅಭ್ಯರ್ಥಿಗಳನ್ನು ಘೋಷಿಸುವುದರೊಂದಿಗೆ ಉಪರಾಷ್ಟ್ರಪತಿ ಚುನಾವಣೆಗೆ ವೇದಿಕೆ ಸಜ್ಜಾಗಿದೆ. ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಸಿ.ಪಿ.ರಾಧಾಕೃಷ್ಣನ್ ಹಾಗೂ ಇಂಡಿಯಾ ಮೈತ್ರಿಕೂಟದ ಅಭ್ಯರ್ಥಿಯಾಗಿ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಜಸ್ಟೀಸ್ ಬಿ.ಸುದರ್ಶನ್ ರೆಡ್ಡಿ ಪರಸ್ಪರ ಸೆಣಸಲಿದ್ದಾರೆ. ಈ ಚುನಾವಣೆಯಲ್ಲಿ ಲೋಕಸಭೆ ಹಾಗೂ ರಾಜ್ಯಸಭೆಯ ಸದಸ್ಯರು ಮತ ಚಲಾಯಿಸಿ, ದೇಶದ ಎರಡನೇ ದೊಡ್ಡ ಸಾಂವಿಧಾನಿಕ ಹುದ್ದೆಯಾದ ಉಪರಾಷ್ಟ್ರಪತಿಯನ್ನು ಆಯ್ಕೆ ಮಾಡಲಿದ್ದಾರೆ. ಈ ಹುದ್ದೆಯನ್ನು ವಿರೋಧ ಪಕ್ಷಗಳಿಗೆ ಬಿಟ್ಟುಕೊಟ್ಟಿದ್ದರೆ ನಮ್ಮ ಪ್ರಜಾಪ್ರಭುತ್ವಕ್ಕೆ ಹೆಚ್ಚಿನ ಮೆರುಗು ಬರುತ್ತಿತ್ತು. ಸಂಖ್ಯಾಬಲದ ದೃಷ್ಟಿಯಿಂದ ಎನ್‌ಡಿಎ ಅಭ್ಯರ್ಥಿ ಸುಲಭವಾಗಿ ಜಯಗಳಿಸಬಹುದಾದರೂ, ವಿರೋಧ ಪಕ್ಷಗಳು ಸಾಂಕೇತಿಕವಾಗಿ ಅಭ್ಯರ್ಥಿಯನ್ನು ನಿಲ್ಲಿಸಿರುವುದು ಸ್ವಾಗತಾರ್ಹವಾಗಿದೆ. ಅಭ್ಯರ್ಥಿಗಳಿಗೆ ಮುಂಗಡ ಶುಭಾಶಯ.

–ಕೆ.ವಿ.ವಾಸು, ವಕೀಲರು–ನೋಟರಿ, ವಿವೇಕಾನಂದನಗರ, ಮೈಸೂರು.

■ ರಿಯಲ್ ಎಸ್ಟೇಟ್ ಉದ್ಯಮಿಗಳ ಗಿಮಿಕ್

ಮಾನ್ಯರೆ,

ಕಳೆದ ಶುಕ್ರವಾರ, ಮೈಸೂರು ಅಭಿವೃದ್ಧಿ ಪ್ರಾಧಿಕಾರವು(ಎಂ.ಡಿ.ಎ), ಹರಾಜು ಹಾಕಿದ ವಿಜಯನಗರದ 4ನೇ ಹಂತದ, 2ನೇ ಫೇಸ್‌ನ, ಕೇವಲ 600 ಚದರಡಿಯ (20X30), ಖಾಲಿ ನಿವೇಶನವು 2 ಕೋಟಿ ರೂಪಾಯಿಗಳ ಬೃಹತ್ ಮೊತ್ತಕ್ಕೆ ಹರಾಜು ಆಗಿರುವುದು ಮೈಸೂರಿನ ನಾಗರಿಕರಿಗೆ ಅಚ್ಚರಿ ಮೂಡಿಸಿದೆ, ತಮ್ಮ ಖಾಲಿ ನಿವೇಶನಗಳನ್ನು ಮಾರ್ಕೆಟಿಂಗ್ ಮಾಡಲು, ರಿಯಲ್ ಎಸ್ಟೇಟ್ ಉದ್ಯಮಿಗಳು ಈ ಗಿಮಿಕ್ ಮಾಡಿರಬಹುದೆಂದು, ಸಾರ್ವಜನಿಕರಿಗೆ ಅನುಮಾನವಿದೆ.

ಇದರ ಬೆಲೆ, ಪ್ರತಿ ಒಂದು ಅಡಿಗೆ ರೂ. 34 ಸಾವಿರ ರೂಪಾಯಿಗಳಾಗದೆ, ಮೈಸೂರಿನ ಹೃದಯ ಭಾಗದಲ್ಲಿರುವ ಅಶೋಕ ರಸ್ತೆ, ಅರಸು ರಸ್ತೆ, ಸಯ್ಯಾಜಿ ರಾವ್ ರಸ್ತೆಯಲ್ಲೂ ಇಷ್ಟು ದುಬಾರಿ ಬೆಲೆ ಇಲ್ಲದಿರುವಾಗ, ಮೈಸೂರಿನಿಂದ ಸುಮಾರು 8 ಕಿ.ಮೀ. ದೂರದಲ್ಲಿರುವ ಈ ನಿವೇಶನಕ್ಕೇಕೆ, ಇಷ್ಟೊಂದು ದುಬಾರಿ ಬೆಲೆ ಎಂದು ಸಾರ್ವಜನಿಕರು ತಲೆಕೆಡಿಸಿಕೊಂಡಿದ್ದಾರೆ. ಈ ನಿವೇಶನದಲ್ಲೇನಾದರೂ, ಚಿನ್ನ ನಿಕ್ಷೇಪ ಇದೆಯಾ? ಈ ನಿವೇಶನ ಕೊಂಡುಕೊಂಡಿರುವ ವ್ಯಕ್ತಿಯ ಹಣದ ಮೂಲ ಯಾವುದು? ತಮ್ಮಲ್ಲಿರುವ ಕಪ್ಪು ಹಣವನ್ನು, ವೈಟ್ ಮಾಡಲು ಈ ರೀತಿ ಮಾಡಿರಬಹುದು ಎಂದು ಸಾರ್ವಜನಿಕರಲ್ಲಿ ಅನುಮಾನವಿದೆ. ಇದಕ್ಕೆ ತೆರಿಗೆ ಅಧಿಕಾರಿಗಳೇ ಸ್ಪಷ್ಟನೆ ನೀಡಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

■ ಕಾಡಿನಿಂದ ನಾಡಿಗೆ ಪ್ರಾಣಿಗಳು ಬರದಂತೆ ಕ್ರಮ ವಹಿಸಿ

ಮಾನ್ಯರೆ,

ಮೈಸೂರಿನ ರಿಂಗ್ ರೋಡ್‌ನಿಂದ ಕೇವಲ 55 km ದೂರದಲ್ಲಿ ನಾಗರಹೊಳೆ ರಾಷ್ಟ್ರೀಯ ಉದ್ಯಾನವನವಿದೆ. ಈಗಾಗಲೇ ಜಯಪುರದವರೆಗೂ ಖಾಸಗಿ ಬಡಾವಣೆಗಳನ್ನು ನಿರ್ಮಿಸಲು ಅನುಮತಿ ನೀಡಿ ರೈತರ ಜಮೀನನ್ನು ಕಸಿದುಕೊಂಡಿದ್ದಾರೆ. ವಾಹನ ದಟ್ಟಣೆ ಹಾಗೂ ಕಬಿನಿ ಜಲಾಶಯದ ಸುತ್ತ ಮುತ್ತ ಹಲವಾರು ಖಾಸಗಿ ರೆಸಾರ್ಟ್‌ಗಳನ್ನು ನಿರ್ಮಿಸಿರುವುದರಿಂದ ಕಾಡು ಪ್ರಾಣಿಗಳು ಜಯಪುರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಾಣಿಸಿಕೊಂಡಿದ್ದು ಕೆಲವನ್ನು ಅರಣ್ಯ ಇಲಾಖೆ ಹಿಡಿದು ಅವುಗಳ ಸಂರಕ್ಷಿಸಿದೆ. ಇದೇ ರೀತಿ ಖಾಸಗಿ ರೆಸಾರ್ಟ್‌ಗಳು ಹಾಗೂ ವಾಹನ ದಟ್ಟಣೆ, ರೈತರ ಜಮೀನನ್ನು ಖಾಸಗಿ ಲೇಔಟ್ ನಿರ್ಮಿಸಿ ಅಧಿಕ ಲಾಭಕ್ಕೆ ಮಾರಿಕೊಳ್ಳುತ್ತಿದ್ದಾರೆ. ಮೈಸೂರು ಜಿಲ್ಲಾಧಿಕಾರಿಗಳಲ್ಲಿ ಕಳಕಳಿಯ ಮನವಿ, ರೈತರ ಜಮೀನನ್ನು ಖರೀದಿಸಿ ಲೇಔಟ್ ನಿರ್ಮಿಸಲು ಅನುಮತಿ ನೀಡದೆ, ರೈತರ ಹಾಗೂ ಕಾಡುಪ್ರಾಣಿಗಳ ಹಿತರಕ್ಷಣೆ ದೃಷ್ಟಿಯಿಂದ ಸೂಕ್ತ ಕ್ರಮವಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.


–ರೈತಾಪಿ ಬಾಂಧವರು, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಕಷ್ಟಗಳಿಗೆ ಕಲ್ಲುಬಂಡೆಯಾಗಬೇಕು; ಮಂಜುಗಡ್ಡೆಯಾಗಬಾರದು...!



> "ಇಂದು ಬಹುತೇಕ ಪೋಷಕರು ಅನುಭವಿಸಿದ ಕಷ್ಟಗಳನ್ನು ತಮ್ಮ ಮಕ್ಕಳು ಅನುಭವಿಸಬಾರದು ಎಂದು ಭಾವಿಸಿ, ಅವರನ್ನು ಅತಿಯಾದ ಕಾಳಜಿ ಮಾಡಿ, ಅವರು ಬಿಸಿಲಿಗೆ ಹೋಗದಂತೆ, ಬೆವರದಂತೆ, ಕಷ್ಟಗಳಿಗೆ ಮೈಒಡ್ಡಿ ನಿಲ್ಲದಂತೆ ಬೆಳೆಸುತ್ತಾರೆ. ಆದರೆ ಅದು ಅವರಿಗೆ ವರವಾಗಿರದೆ ಶಾಪವಾಗಿಬಿಡುತ್ತದೆ. ಮಕ್ಕಳನ್ನು ಸಹಜವಾಗಿ ಬೆಳೆಸಬೇಕು. ಅವರಿಗೆ ಕಷ್ಟಗಳ ಅರಿವನ್ನು ಮೂಡಿಸಬೇಕು. ಬದುಕು ಎಂದರೆ ನೆಟ್ಟಗಿರುವ, ನುಣುಪಾಗಿರುವ, ವಿಶಾಲವಾಗಿರುವ, ಸುರಕ್ಷಿತವಾದ ಹೆದ್ದಾರಿಯಲ್ಲ ; ಬದುಕು ಅನೇಕ ಅಂಕು–ಡೊಂಕುಗಳ, ದಿಣ್ಣೆ–ಇಳಿಜಾರುಗಳ, ಕಲ್ಲು–ಮುಳ್ಳುಗಳ ಕಠಿಣ ಹಾದಿಯೂ ಆಗಿರುತ್ತದೆ. ಆದ್ದರಿಂದ ಕಠಿಣ ರಸ್ತೆಗಳನ್ನು ಕ್ರಮಿಸುವ ಕಲೆಯನ್ನು ಮಕ್ಕಳಿಗೆ ಕಲಿಸಬೇಕು. ಇಲ್ಲವಾದಲ್ಲಿ ಮಕ್ಕಳು ಮುಂದೆ ಬರಬಹುದಾದ ಅನಿರೀಕ್ಷಿತ ಕಷ್ಟಗಳನ್ನು ಎದುರಿಸಲಾಗದೆ ಮಂಡಿಯೂರಿ ಶರಣಾಗಿಬಿಡುತ್ತಾರೆ. ಕಷ್ಟಗಳ ಮುಂದೆ ಸೋತು ಸುಣ್ಣವಾಗಿಬಿಡುತ್ತಾರೆ.

ಕಷ್ಟ ಅನ್ನೋದು ಮನುಷ್ಯನಿಗೆ ಬರದೆ ಮರಕ್ಕೆ ಬರುತ್ತದೆಯೇ? ಎಂಬ ನಾಣ್ನುಡಿಯೊಂದು ಇದೆ. ಕಷ್ಟವು ಮನುಷ್ಯನಿಗೂ ಬರುತ್ತದೆ. ಹಾಗೆಯೇ ಮರಕ್ಕೂ ಬರುತ್ತದೆ. ಮರದ ಬುಡಕ್ಕೆ ಕೊಡಲಿ ಹಾಕಿದ್ದರೂ, ಕಾಲಾನಂತರ ಚಿಗುರಿದ ಉದಾಹರಣೆ ಅನೇಕ ಇವೆ. ಆದರೆ ನಿರೀಕ್ಷಿಸದೇ ಇರದ ಕಷ್ಟವೊಂದು ಕಾಣಿಸಿಕೊಂಡಾಗ ಮನುಷ್ಯ ಅದನ್ನು ಎದುರಿಸದೇ, ಕಷ್ಟಕ್ಕೆ ಹೆದರಿ ಜಗತ್ತಿನಿಂದಲೇ ಪಲಾಯನ ಮಾಡಿದ ಉದಾಹರಣೆಗಳು ಸಹ ಇವೆ. ಕಷ್ಟ ಎಂಬುದು ಬರಲೇಬಾರದ ಸಂಗತಿಯಲ್ಲ. ಅದು ಬದುಕಿನ ಒಂದು ಭಾಗ. ಸುಖ ಬಂದಾಗ ಸುಖಾಸುಮ್ಮನೆ ಅನುಭವಿಸಿಬಿಡುವ ಮನುಷ್ಯ, ಕಷ್ಟ ಬಂದಾಗ ಕುಗ್ಗಿಹೋದರೆ ಹೇಗೆ? ಅದನ್ನು ಸಹ ದೃಢ ಮನಸ್ಸಿನಿಂದ ಸ್ವೀಕರಿಸಿ, ಸೂಕ್ತ ರೀತಿಯಲ್ಲಿ ನಿಭಾಯಿಸಿದರೆ ಕಷ್ಟ ಕಣ್ಮರೆಯಾಗುತ್ತದೆ. ಕಷ್ಟ ಎದುರಾದಾಗ ಮನುಷ್ಯ ಕಲ್ಲುಬಂಡೆಯಂತೆ ಗಟ್ಟಿಯಾಗಿ ನಿಲ್ಲಬೇಕು, ಮಂಜುಗಡ್ಡೆಯಂತೆ ಕರಗಿಹೋಗಬಾರದು. ಸರಿಯಾದ ರೀತಿಯಲ್ಲಿ ಕಷ್ಟವನ್ನು ಎದುರಿಸಿದರೆ ಕಷ್ಟವೇ ಮಂಜುಗಡ್ಡೆಯಂತೆ ಕರಗಿ ಹೋಗುತ್ತದೆ.

ಒಬ್ಬೊಬ್ಬರ ಮನಸ್ಥಿತಿ ಒಂದೊಂದು ರೀತಿ ಇರುತ್ತದೆ. ಒಂದು ಸಣ್ಣ ಕಷ್ಟ ಕೆಲವರಿಗೆ ದೊಡ್ಡ ಪರ್ವತದಂತೆ ಕಂಡರೆ, ತುಂಬಾ ದೊಡ್ಡ ಕಷ್ಟವೊಂದು ಕೆಲವರಿಗೆ ಮಣ್ಣಿನ ಹಿಂಟೆಯಂತೆ ಕಾಣಬಹುದು. ಕಷ್ಟಗಳನ್ನು ನಿಭಾಯಿಸುವುದು ಒಂದು ಕಲೆ. ಅನೇಕರು ಕಷ್ಟಗಳು ಎದುರಾದಾಗ, ಇಲ್ಲಸಲ್ಲದ ಊಹೆಗಳಿಂದಲೇ ಅರ್ಧ ಸೋತು ಹೋಗಿರುತ್ತಾರೆ; ಯುದ್ಧ ಪ್ರಾರಂಭವಾಗುವ ಮುನ್ನ ಶಸ್ತ್ರಾಸ್ತ್ರ ತ್ಯಾಗ ಮಾಡಿದ ಹಾಗೆ. ಯಾವುದೇ ರೀತಿ ವಿಚಲಿತರಾಗದೆ, ಕಷ್ಟಕ್ಕೆ ಪರಿಹಾರ ಹುಡುಕಿದರೆ ಹತ್ತಾರು ಮಾರ್ಗಗಳು ಕಾಣುತ್ತವೆ. ಕಷ್ಟ ಎರಗಿ ಬಂದಾಗ ಅದೊಂದು ಅನಿಷ್ಟ ಎಂದು ಭಾವಿಸಬಾರದು. ಅದನ್ನು ಸ್ವೀಕರಿಸಿ ಸರಿಯಾಗಿ ಸತ್ಕರಿಸಿದರೆ ಅನಿಷ್ಟವು ತೊಡಗಿ ಹೋಗುತ್ತದೆ. ಹಾಗೆಯೇ ಕಷ್ಟಗಳೇ ಬರಲಿಲ್ಲ ಸುಖದ ಮಹತ್ವ ತಿಳಿಯುವುದೇ ಇಲ್ಲ. ಕಷ್ಟ ಕಾಣದವರಿಗೆ ಸುಖವೂ ಸಹ ಕಾಣುವುದಿಲ್ಲ. ಸುಖ ಸಿಹಿ ಎನಿಸಬೇಕಾದರೆ ಕಷ್ಟದ ಕಹಿ ಉಂಡಿರಬೇಕು. ಮನುಷ್ಯನನ್ನು ಗಟ್ಟಿಗೊಳಿಸುವುದು ಕಷ್ಟಗಳೇ ಹೊರತು ಸುಖಗಳಲ್ಲ.

ದೊಡ್ಡ ಆಲದಮರದ ಅಡಿಯಲ್ಲಿ ಮೊಳಕೆ ಒಡೆಯುತ್ತಿದ್ದ ಗಿಡವೊಂದು ಮರದ ಪರಿಧಿಯ ಆಚೆ ಮೊಳಕೆ ಒಡೆಯುತ್ತಿದ್ದ ಮತ್ತೊಂದು ಗಿಡಕ್ಕೆ ಗೇಲಿ ಮಾಡುತ್ತಿತ್ತು. ನಾನು ಸದಾ ನೆರಳಿನಲ್ಲಿ ಇರುತ್ತೇನೆ. ಆದರೆ ನಿನಗೋ ಬಿಸಿಲಿನ ಝಳ, ಗಾಳಿ ಮಳೆಯಿಂದ ತೊಂದರೆ ಉಂಟಾಗುತ್ತದೆ, ನಾನಂತೂ ಸೇಫಾಗಿದ್ದೇನೆ ಎಂದು ಬೀಗುತ್ತಿತ್ತಂತೆ. ಆಚೆಯಿಂದ ಎಳೆಯ ಗಿಡವು ಸಹ ತನ್ನ ದುರದೃಷ್ಟದ ಬಗ್ಗೆ ಬೈದುಕೊಂಡು, ನಾನು ಸಹ ಆಲದಮರದ ಕೆಳಗೆ ಇದ್ದಿದ್ದರೆ ನೆಮ್ಮದಿಯಾಗಿ ಬೆಳೆಯಬಹುದಿತ್ತು ಎಂದು ಭಾವಿಸಿತಂತೆ. ಆದರೆ ಅದು ಆಗಲಿಲ್ಲ, ತನ್ನ ವಿಧಿ ಬರಹ ಎಂದು ಭಾವಿಸಿ ಗಾಳಿ, ಬಿಸಿಲು ಹಾಗೂ ಮಳೆಗೆ ಮೈಒಡ್ಡಿ ಬೆಳೆಯುತ್ತಾ ಇತ್ತಂತೆ. ಕಾಲಾನಂತರ ಮರದ ಕೆಳಗೆ ಇದ್ದ ಗಿಡಕ್ಕೆ ಮರದ ಹೊರಗೆ ಇದ್ದ ಗಿಡದ ಬೆಳವಣಿಗೆ ನೋಡಿ ಈರ್ಷೆ ಉಂಟಾಯಿತಂತೆ. ಆ ಗಿಡವು ಹಲವು ಅಡಿಗಳಷ್ಟು ಬೆಳೆದು ಮರವಾಗುತ್ತಾ ಇತ್ತು, ಆದರೆ ಮರದ ಕೆಳಗೆ ಇದ್ದ ತಾನು ಮಾತ್ರ ಕೆಲವು ಇಂಚುಗಳಷ್ಟೇ ಬೆಳೆಯಲು ಸಾಧ್ಯವಾಗಿದೆ? ಏಕೆ ಹೀಗೆ ಎಂದು ಪ್ರಶ್ನಿಸಿಕೊಂಡು ತನ್ನ ಆಶ್ರಯದಾತ ಆಲದಮರಕ್ಕೆ ಪ್ರಶ್ನೆ ಕೇಳಿತಂತೆ. ಆಗ ಆಲದ ಮರ–ಗಿಡವು ಮರವಾಗಿ ಬೆಳೆಯಲು ನೆರಳಿನಲ್ಲಿ ಸಾಧ್ಯವಿಲ್ಲ, ಅದಕ್ಕೆ ಸೂರ್ಯನ ಬೆಳಕು ಬೇಕು. ನೀನು ನೆರಳು ಒಂದು ವರ ಎಂದು ಭಾವಿಸಿದೆ, ಆದರೆ ನಿನ್ನ ಬೆಳವಣಿಗೆಗೆ ಅದೇ ಶಾಪವಾಗಿದೆ. ಆದರೆ ಅದು ಬಿಸಿಲು, ಮಳೆ ಹಾಗೂ ಗಾಳಿಗೆ ಮೈಒಡ್ಡಿದ್ದರಿಂದ ಪ್ರಕೃತಿ ನಿಯಮದಂತೆ ದೊಡ್ಡದಾಗಿ ಬೆಳೆಯುತ್ತಿದೆ? ಎಂದು ಹೇಳಿದಾಗ ಆ ಸಣ್ಣ ಗಿಡಕ್ಕೆ ನಿಜಸಂಗತಿ ಅರ್ಥವಾಯಿತಂತೆ.

ಹೀಗೆ ಅನೇಕ ಪೋಷಕರು ತಮ್ಮ ಮಕ್ಕಳನ್ನು ಆಲದಮರದ ಕೆಳಗಿನ ಗಿಡದಂತೆ ಬೆಳೆಸಲು ಇಚ್ಛಿಸುತ್ತಾರೆ. ಅವರಿಗೆ ಕಷ್ಟಗಳು ಬರದಂತೆ ಎಲ್ಲವನ್ನೂ ತಾವೇ ಅನುಭವಿಸಿ ಅವರನ್ನು ಸುಖದ ಸುಪ್ಪತ್ತಿಗೆಯಲ್ಲಿರಿಸಿ ಬೆಳೆಸಲು ಯತ್ನಿಸುತ್ತಾರೆ. ತಾವು ಅನುಭವಿಸಿದ ಕಷ್ಟಗಳನ್ನು ತಮ್ಮ ಮಕ್ಕಳು ಅನುಭವಿಸಬಾರದು ಎಂದು ಭಾವಿಸಿ, ಅವರನ್ನು ಅತಿಯಾದ ಕಾಳಜಿ ಮಾಡಿ, ಅವರು ಬಿಸಿಲಿಗೆ ಹೋಗದಂತೆ, ಬೆವರದಂತೆ, ಕಷ್ಟಗಳಿಗೆ ಮೈಒಡ್ಡಿ ನಿಲ್ಲದಂತೆ ಬೆಳೆಸುತ್ತಾರೆ. ಆದರೆ ಅದು ಅವರಿಗೆ ವರವಾಗಿರದೆ ಶಾಪವಾಗಿಬಿಡುತ್ತದೆ. ಮಕ್ಕಳನ್ನು ಸಹಜವಾಗಿ ಬೆಳೆಸಬೇಕು. ಅವರಿಗೆ ಕಷ್ಟಗಳ ಅರಿವನ್ನು ಮೂಡಿಸಬೇಕು. ಬದುಕು ಎಂದರೆ ನೆಟ್ಟಗಿರುವ, ನುಣುಪಾಗಿರುವ, ವಿಶಾಲವಾಗಿರುವ, ಅತಿ ಸುರಕ್ಷಿತವಾದ ಹೆದ್ದಾರಿಯಲ್ಲ; ಬದುಕು ಅನೇಕ ಅಂಕು–ಡೊಂಕುಗಳ, ದಿಣ್ಣೆ–ಇಳಿಜಾರುಗಳ, ಕಲ್ಲು–ಮುಳ್ಳುಗಳ ಕಠಿಣ ಹಾದಿಯೂ ಆಗಿರುತ್ತದೆ. ರಸ್ತೆಯಲ್ಲಿ ಏರುಪೇರು ಇಲ್ಲದಿದ್ದಲ್ಲಿ ವಾಹನ ಚಾಲಕ ನಿದ್ರೆ ಮಂಪರಿಗೆ ಜಾರಿ ವಾಹನ ಅಪಘಾತವಾಗುವ ಸಾಧ್ಯತೆ ಇರುತ್ತದೆ. ಬದಲಿಗೆ ಅಂಕುಡೊಂಕು, ರಸ್ತೆ ದುಬ್ಬಗಳು ಇದ್ದಲ್ಲಿ ಜಾಗರೂಕರಾಗಿ ವಾಹನ ಚಲಾವಣೆ ಮಾಡುತ್ತಾರೆ. ಆಗ ಅಪಘಾತವಾಗುವ ಸಂಭವವೂ ಕಡಿಮೆ ಇರುತ್ತದೆ. ಆದ್ದರಿಂದ ಕಠಿಣ ರಸ್ತೆಗಳನ್ನು ಕ್ರಮಿಸುವ ಕಲೆಯನ್ನು ಮಕ್ಕಳಿಗೆ ಕಲಿಸಬೇಕು. ಇಲ್ಲವಾದಲ್ಲಿ ಮಕ್ಕಳು ಮುಂದೆ ಬರಬಹುದಾದ ಅನಿರೀಕ್ಷಿತ ಕಷ್ಟಗಳನ್ನು ಎದುರಿಸಲಾಗದೆ ಮಂಡಿಯೂರಿ ಶರಣಾಗಿಬಿಡುತ್ತಾರೆ. ಮಕ್ಕಳಿಗೆ ಕಷ್ಟಗಳ ನೆರಳು ಬೀಳಬಾರದು ಎಂದು ಅತಿಯಾಗಿ ರಕ್ಷಿಸಿದರೆ, ನಾಳೆ ಅವರಿಗೆ ಎದುರಾಗುವ ಸಣ್ಣ ಸಣ್ಣ ಕಷ್ಟಗಳು ದೊಡ್ಡ ಭೂತಗಳಾಗಿ ಕಾಣುತ್ತವೆ.

ದೇವಸ್ಥಾನದಲ್ಲಿಯೇ ಆಗಲಿ, ದೇವರ ಕೋಣೆಯಲ್ಲಿಯೇ ಆಗಲಿ ಬಹುತೇಕರು ಭಗವಂತ ನನಗೆ ಕಷ್ಟಗಳನ್ನೇ ಕೊಡಬೇಡಪ್ಪ, ಸಾಧ್ಯವಾದಷ್ಟು ಸುಖವನ್ನು ಕರುಣಿಸು ಎಂದು ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಅದು ಸರಿಯಾದ ಪ್ರಾರ್ಥನೆಯಲ್ಲ. ಭಗವಂತ ಬದುಕಿನಲ್ಲಿ ಬರುವ ಕಷ್ಟಗಳನ್ನು ಎದುರಿಸುವ, ಮೆಟ್ಟಿನಿಲ್ಲುವ ಶಕ್ತಿಯನ್ನು ಕರುಣಿಸು, ಕಷ್ಟಗಳಿಂದ ಪಾರಾಗುವ ಯುಕ್ತಿಯನ್ನು ನೀಡು? ಅಂತಲೂ ಕೋರಬೇಕು. ಆಗ ಧೈರ್ಯ ಉಂಟಾಗುತ್ತದೆ. ಬದುಕಿನಲ್ಲಿ ಚೈತನ್ಯ ಮೂಡುತ್ತದೆ. ಕಷ್ಟಗಳು ಬಂದಾಗ ನೀನು ಹೆಚ್ಚೋ, ನಾನು ಹೆಚ್ಚೋ ಒಂದು ಕೈ ನೋಡೇ ಬಿಡೋಣ ಎಂಬ ಧನಾತ್ಮಕ ಮನೋಭಾವ ಉಂಟಾಗಿ ಒಂದು ಸವಾಲಿನ ರೀತಿಯಲ್ಲಿ ಕಷ್ಟಗಳನ್ನು ಎದುರಿಸಿ ಹಿಮ್ಮೆಟ್ಟಿಸಬಹುದಾಗಿದೆ. ಒಂದೆರಡು ಬಾರಿ ಕಷ್ಟಗಳನ್ನು ಎದುರಿಸುವ ಎದೆಗಾರಿಕೆ ತೋರಿದಲ್ಲಿ, ಕಷ್ಟಗಳನ್ನು ನಿಭಾಯಿಸುವ ಕಲೆ ಕರಗತವಾಗಿ, ಮುಂದೆ ಕಷ್ಟಗಳು ಇಲ್ಲದಿದ್ದರೆ ಬದುಕು ನೀರಸ ಎನಿಸಬಹುದು.

ಕಷ್ಟಗಳನ್ನು ಎದೆಗುಂದದೆ ಎದುರಿಸುವವನಿಗೆ ಕಷ್ಟಗಳಿಗೆ ಉಳಿಯಲು ಕಷ್ಟವಾಗುತ್ತದೆ. ಆದರೆ ಕಷ್ಟಗಳನ್ನು ಎದುರಿಸದೆ ಬೆನ್ನು ತೋರಿಸುವವನಿಗೆ ಕಷ್ಟಗಳು ಹೆಗಲೇರಿ ಬೇತಾಳದಂತೆ ಕಾಡುತ್ತಲೇ ಇರುತ್ತವೆ. ಕಷ್ಟಗಳು ಬರುವುದೇ ನಮ್ಮನ್ನು ಗಟ್ಟಿಗೊಳಿಸಲು ಎಂದು ನಂಬಿದರೆ ಕಷ್ಟಗಳು ಒಂದು ರೀತಿಯಲ್ಲಿ ಇಷ್ಟವಾಗುತ್ತಾ ಹೋಗುತ್ತದೆ. ಅಂದ ಮಾತ್ರಕ್ಕೆ ಕಷ್ಟಗಳು ಬರಲಿ ಎಂದು ಬಯಸಬೇಕು ಅಂತಲ್ಲ. ಕಷ್ಟಗಳು ಬಂದಾಗ ಹಿಂಜರಿಯದೆ ಅವುಗಳನ್ನು ಹಿಮ್ಮೆಟ್ಟಿಸುವ ಪ್ರಯತ್ನ ಮಾಡಬೇಕು ಎಂಬದಾಗಿದೆ. ಕೆಲವು ಕಷ್ಟಗಳನ್ನು ಅನಿವಾರ್ಯವಾಗಿ ಅನುಭವಿಸಬೇಕಾದಾಗ ನನಗೆ ಮಾತ್ರ ಕಷ್ಟಗಳು ಬರಬೇಕೆ? ಎಂದು ಗೊಣಗದೆ ಪ್ರಪಂಚದಲ್ಲಿ ಇತರರಿಗೆ ಇರುವ ದೊಡ್ಡ ಕಷ್ಟಗಳಿಗೆ ಹೋಲಿಸಿಕೊಂಡರೆ ನನಗೆ ಬಂದಿರುವ ಕಷ್ಟ ತುಂಬಾ ಚಿಕ್ಕದು ಎಂದು ಧೈರ್ಯ ಮೂಡುತ್ತದೆ. ಅಂತಹ ಮನೋಭಾವವನ್ನು ರೂಢಿಸಿಕೊಳ್ಳಬೇಕು. ನಗುಮುಖದಿಂದಲೇ ಕಷ್ಟಗಳನ್ನು ಸ್ವೀಕರಿಸಬೇಕು. ಅಳುಮುಖದಿಂದ ಅನುಭವಿಸುತ್ತಿದ್ದರೆ ನಮ್ಮನ್ನು ಕಷ್ಟಗಳು ತೊರೆದು ಬಿಡುತ್ತವೆಯೇ? ಅಂದ ಹಾಗೆ ನಾನು ಧೈರ್ಯಶಾಲಿ ಎಂದು ಅತಿಯಾದ ಆತ್ಮವಿಶ್ವಾಸದಲ್ಲಿ ಇಲ್ಲಸಲ್ಲದ ಕಷ್ಟಗಳನ್ನು ಮೈಮೇಲೆ ಎಳೆದುಕೊಳ್ಳಬಾರದು. ಕೆಲವು ಕಷ್ಟಗಳು ಸೂಜಿಯಲ್ಲಿ ಹೋಗುತ್ತವೆ. ಅವುಗಳಿಗೆ ಕೊಡಲಿಯನ್ನು ಬಳಸಿ ಹೆಚ್ಚು ಗಾಯವನ್ನು ಮಾಡಬಾರದು. ಪ್ರಾಣಿಪಕ್ಷಿಗಳಿಗೆ ಹೋಲಿಸಿಕೊಂಡರೆ ಮನುಷ್ಯನಿಗೆ ಅನಾರೋಗ್ಯದಂತಹ ಕಷ್ಟಗಳು ಎದುರಾದಾಗ, ಚಿಕಿತ್ಸೆ ಪಡೆಯಲು ಒಂದು ವ್ಯವಸ್ಥೆಯಾದರೂ ಇರುತ್ತದೆ ಎಂಬ ಸಮಾಧಾನ ಇರಬೇಕು.

ಪರೀಕ್ಷೆಗಳು ಮುಗಿದ ಮೇಲೆ ಒಂದು ನಿರಾಳತೆ ಮೂಡುವಂತೆ, ಗರ್ಭವತಿಯು ಮಗುವಿಗೆ ಜನ್ಮ ನೀಡಿದ ಮೇಲೆ ಅವರ್ಣನೀಯವಾದ ಆನಂದ ಅನುಭವಿಸುವಂತೆ, ಕಷ್ಟಗಳು ನೀಗಿದ ಮೇಲೆ ಒಂದು ಅಮಿತಾನಂದವು ಉಂಟಾಗುತ್ತದೆ. ಅದನ್ನು ಅನುಭವಿಸುವುದಕ್ಕಾದರೂ ಕಷ್ಟಗಳನ್ನು ಎದುರಿಸಬೇಕು. ಗರಿಕೆ ಹುಲ್ಲಿನ ಮೇಲೆ ಹಾಕುವ ಟಾರುರಸ್ತೆಯನ್ನು ಭೇದಿಸಿ ಬೆಳೆಯುವುದನ್ನು ಗಮನಿಸಬಹುದು. ಒಂದು ಗರಿಕೆ ಹುಲ್ಲಿಗೆ ಅಷ್ಟು ಸಾಮರ್ಥ್ಯ ಇರಬೇಕಾದರೆ, ಮನುಷ್ಯ ಮನಸ್ಸು ಮಾಡಿದರೆ ಕಷ್ಟಗಳನ್ನು ಜಯಿಸುವುದು ಕಷ್ಟವೇ?

ಕಷ್ಟಗಳು ಚಿಕ್ಕದು ಅಥವಾ ದೊಡ್ಡದು ಎಂಬುದು ಕಷ್ಟದ ಪ್ರಮಾಣದ ಮೇಲೆ ನಿರ್ಧಾರವಾಗುವುದಿಲ್ಲ. ನಾವು ಕಷ್ಟವನ್ನು ಸ್ವೀಕರಿಸಿ, ನಿಭಾಯಿಸುವ ರೀತಿಯಿಂದ ಕಷ್ಟದ ಪ್ರಮಾಣ ನಿರ್ಧಾರವಾಗುತ್ತದೆ. ನಾನು ಹುಟ್ಟಿರುವುದೇ ಕಷ್ಟಗಳನ್ನು ಎದುರಿಸಲು ಎಂದು ಭಾವಿಸಿದರೆ, ಕಷ್ಟಗಳು ವೀರರನ್ನು ಮಾತ್ರ ಹುಡುಕಿಕೊಂಡು ಬರುತ್ತವೆ ಎಂದು ಭಾವಿಸಿದರೆ ಕಷ್ಟಗಳನ್ನು ಅರ್ಧ ಗೆದ್ದಂತೆ. ಕಷ್ಟಗಳನ್ನು ಗೆಲ್ಲುತ್ತೇನೆ ಎಂಬ ವಿಶ್ವಾಸ, ಆತ್ಮಸ್ಥೈರ್ಯ, ಧನಾತ್ಮಕ ಆಲೋಚನೆ, ಉತ್ತಮ ಬಂಧುಬಳಗ ಇದ್ದಲ್ಲಿ ಕಷ್ಟಗಳು ಕಷ್ಟಗಳಾಗಿ ಗೋಚರಿಸುವುದಿಲ್ಲ. ಅದಮ್ಯವಾದ ಜೀವನಪ್ರೀತಿ ಇದ್ದರೆ ಕಷ್ಟಗಳು ಗಣನೆಗೆ ಬರುವುದೇ ಇಲ್ಲ. ಏನಂತೀರಿ?

ಹೂರಣ: ಕಷ್ಟ ಎಂಬುದು ಹೇಡಿಗಳಿಗೆ ಅನಿಷ್ಟ; ವೀರರಿಗೆ ಅದೃಷ್ಟ!

ಸಹಕಾರ ಕ್ಷೇತ್ರ ಪ್ರಜಾಪ್ರಭುತ್ವ ಉಳಿಸುವ ಕೆಲಸ ಮಾಡಲಿದೆ

● ಕೆ.ಆರ್.ಬ್ಯಾಂಕ್‌ನಿಂದ ಹಿರಿಯ ಸಹಕಾರಿಗಳಿಗೆ ಸಹಕಾರ ರತ್ನ ಪ್ರಶಸ್ತಿ ಪ್ರದಾನ ● ಬ್ಯಾಂಕ್ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದನೆ

ಮೈಸೂರು, ಆ.24(ಜಿಎ)–ಭವಿಷ್ಯದ ಭಾರತಕ್ಕೆ ಸಹಕಾರಿಗಳು ಸಿದ್ಧರಾಗಿ. ಮುಂದಿನ ದಿನಗಳಲ್ಲಿ ಸಹಕಾರ ಕ್ಷೇತ್ರದಲ್ಲಿ ಯುವಕರ ಪಾತ್ರ ದೊಡ್ಡದಿದ್ದು, ಪ್ರಜಾಪ್ರಭುತ್ವವನ್ನು ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.



ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಚಿತ್ರದಲ್ಲಿ ಸಂಸದ ಯದುವೀರ್ ಒಡೆಯರ್ ಇನ್ನಿತರರನ್ನು ಕಾಣಬಹುದು.

ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ವತಿಯಿಂದ ಆಯೋಜಿಸಿದ್ದ ಹಿರಿಯ ಸಹಕಾರಿಗಳಿಗೆ ಸನ್ಮಾನ ಮತ್ತು ಬ್ಯಾಂಕಿನ ಸದಸ್ಯರ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭಗೊಂಡ ಸಂಸ್ಥೆಯಾಗಿದ್ದು, ಜನರಿಗೆ ಉತ್ತಮ ರೀತಿಯಲ್ಲಿ ಸಾಲ ನೀಡುವ ನಿಟ್ಟಿನಲ್ಲಿ ಬ್ಯಾಂಕ್ ಕಾರ್ಯನಿರ್ವಹಿಸುತ್ತಿದೆ ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಂದೆ 10ನೇ ಚಾಮರಾಜೇಂದ್ರ ಒಡೆಯರ್ ಅವರು ಸಹಕಾರಿ ಕ್ಷೇತ್ರವನ್ನು ಆರಂಭಿಸಿದರು. ಆ ಮೂಲಕ ಸ್ವಾಯತ್ತ ಸಂಸ್ಥೆಯಂತೆ ಜನರಿಗೆ ಸ್ವಾತಂತ್ರ್ಯ ನೀಡಿ ಚಟುವಟಿಕೆಯಿಂದ ಇರಲು ಬ್ಯಾಂಕ್ ಇಂದಿಗೂ ಸಹಕಾರಿಯಾಗಿದೆ ಎಂದು ಅವರು ಹೇಳಿದರು.

ಅನೇಕ ಮೈಲುಗಲ್ಲುಗಳನ್ನು ಮಾಡಿದ್ದು, ಇತ್ತೀಚೆಗೆ 106ನೇ ವರ್ಷದ ಕಾರ್ಯಕ್ರಮವನ್ನು ಅದ್ಭುತವಾಗಿ ಮಾಡಿದ್ದಾರೆ. ಒಂದು ಸಂಸ್ಥೆ ಶತಮಾನೋತ್ಸವ ಆಚರಿಸಲು ಸಾವಿರಾರು ಜನರ ಶ್ರಮವಿದೆ. ನಾಲ್ವಡಿ ಅವರ ಹೆಸರನ್ನು ಉಳಿಸಿಕೊಂಡು ಹೋಗುತ್ತಿರುವುದಕ್ಕೆ ಧನ್ಯವಾದ ತಿಳಿಸಿದರು.

ಅಗ್ರಹಾರ ವೃತ್ತದಲ್ಲಿರುವ ಪಾರಂಪರಿಕ ಕಟ್ಟಡದಲ್ಲಿ ಆಡಳಿತ ನಡೆಸುತ್ತಿದ್ದು, ಅದನ್ನು ಉಳಿಸಿ, ರಕ್ಷಣೆ ಮಾಡಿ. ಅದಕ್ಕೆ ನಾನು ಸಹಕಾರ ನೀಡುತ್ತೇನೆ. ಕಟ್ಟಡ ಒಂದು ಭಾಗದಲ್ಲಿರುವ ಆಯುರ್ವೇದ ಆಸ್ಪತ್ರೆ ಉಳಿವಿಗಾಗಿ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು.

ಕೇಂದ್ರ ಸರ್ಕಾರ ಸಹಕಾರ ಮಂತ್ರಾಲಯವನ್ನು ಆರಂಭಿಸಿದ್ದು, ಗೃಹಮಂತ್ರಿ ಅಮಿತ್ ಶಾ ನೇತೃತ್ವ ವಹಿಸಿಕೊಂಡಿದ್ದಾರೆ. 2025ರಲ್ಲಿ ನ್ಯಾಷನಲ್ ಕೋಆಪರೇಟಿವ್ ಪಾಲಿಸಿಯನ್ನು ಸಂಸತ್ತಿನಲ್ಲಿ ಮಂಡಿಸಲಾಗುವುದು. ಭಾರತೀಯ ಸಹಕಾರಿ ಆಧುನಿಕ ಕಾಲಕ್ಕೆ ತಕ್ಕಂತೆ ತಂತ್ರಜ್ಞಾನ ಬಳಸಿಕೊಂಡು ಮಂತ್ರಾಲಯದ ಮೂಲಕ ಆರಂಭವಾಗುತ್ತಿದ್ದು, ಆ ಕಾಯ್ದೆಗೆ ನಾನು ಸಹಮತ ಸೂಚಿಸಿದ್ದೇನೆ ಎಂದರು.

ಪ್ರತಿಭಾ ಪುರಸ್ಕಾರ ನೀಡುತ್ತಾರೆ ಎಂದು ಯುವಕರು ಬಂದಿದ್ದಾರೆ. ಆದರೆ, ಭವಿಷ್ಯದಲ್ಲಿ ಯುವಕರ ಪಾತ್ರ ಸಹಕಾರದಲ್ಲಿ ಪ್ರಮುಖವಾಗಲಿದೆ. ಭಾರತದ ಪ್ರಜಾಪ್ರಭುತ್ವವನ್ನು ಉಳಿಸುವಲ್ಲಿ ಯುವಕರು, ಯುವತಿಯರ ಪಾತ್ರ ದೊಡ್ಡದಾಗಿರಬೇಕಾಗಿದೆ. ಅದಕ್ಕೆ ಅವರು ಕೂಡ ಇದು ಒಂದು ಬಹಳ ಮುಖ್ಯವಾದ ಮಹತ್ವವಾದಂತಹ ಸ್ತಂಭ ಆಗಿ ಗುರುತಿಸಿದೆ ಎಂದು ತಿಳಿಸಿದರು.

ಹಿರಿಯ ಸಹಕಾರಿಗಳಾದ ನಾಗಮಣಿ, ಚಾಮುಂಡಮ್ಮ, ಪಿ.ಸತ್ಯನಾರಾಯಣ, ಮಹದೇವಮ್ಮ, ಎಂ.ಬಿ.ದಾಕ್ಷಾಯಣಿ, ಬಿ.ಎಸ್.ಕೃಷ್ಣರಾವ್, ಜಯಂತಿ, ಬಿ.ಓಂಕಾರ್ ಪ್ರಸಾದ್, ಚಿಕ್ಕವೀರಮ್ಮ, ಎಂ.ನಾಗರತ್ನಮ್ಮ, ಜಗದೀಶ್, ಟಿ.ಎಸ್.ವೆಂಕಟೇಶ್, ಹೆಚ್.ಪಿ.ಛಾಯ, ಎಂ.ಕೃಷ್ಣಪ್ಪ, ಬಿ.ಎನ್.ಪ್ರೇಮಕುಮಾರಿ, ಎಂ.ಶಿವಶಂಕರಸ್ವಾಮಿ, ಎನ್.ಶ್ರೀನಿವಾಸ್‌ಮೂರ್ತಿ ಅವರಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಿದರು. ಈ ವೇಳೆ ಬ್ಯಾಂಕ್ ಅಧ್ಯಕ್ಷ ಡಿ.ಬಸವರಾಜು(ಬಸಪ್ಪ), ಉಪಾಧ್ಯಕ್ಷೆ ಹೆಚ್.ಎನ್.ಸರ್ವಮಂಗಳ, ಪ್ರಧಾನ ವ್ಯವಸ್ಥಾಪಕ ಡಿ.ಅನಂತ ವೀರಪ್ಪ ನಿರ್ದೇಶಕರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಧರ್ಮಸ್ಥಳ ಪ್ರಕರಣ ಎನ್ಐಎ ತನಿಖೆಗೆ ಆಗ್ರಹಿಸಿ ಪ್ರತಿಭಟನಾ ರ್‍ಯಾಲಿ



ಧರ್ಮಸ್ಥಳದ ವಿರುದ್ಧ ಅಪ್ರಚಾರವನ್ನು ಖಂಡಿಸಿ, ಜಯಕರ್ನಾಟಕ ಸಂಘಟನೆಯ ರಾಜ್ಯಾಧ್ಯಕ್ಷ ಬಿ.ಎನ್.ಜಗದೀಶ್ ನೇತೃತ್ವದಲ್ಲಿ ಮೈಸೂರಿಂದ ಧರ್ಮಸ್ಥಳಕ್ಕೆ ಪ್ರತಿಭಟನಾ ರ್‍ಯಾಲಿ ನಡೆಸಿದರು.

ಮೈಸೂರು, ಆ.24(ಎಸ್‌ಪಿಎನ್)– ಧರ್ಮಸ್ಥಳ ದೇವಸ್ಥಾನದ ವಿರುದ್ಧ ಅಪ ಪ್ರಚಾರ ಮಾಡುತ್ತಿರುವವರ ಬಗ್ಗೆ ರಾಜ್ಯ ಸರ್ಕಾರ ಕಠಿಣ ಕ್ರಮಗೊಳ್ಳಬೇಕು. ಈ ಘಟನೆ ಕುರಿತು ಹೆಚ್ಚಿನ ತನಿಖೆಗೆ ಎನ್ಐಎ ತನಿಖೆಗೆ ವಹಿಸುವಂತೆ ಒತ್ತಾಯಿಸಿ ಜಯ ಕರ್ನಾಟಕ ಸಂಘಟನೆ ಪದಾಧಿಕಾರಿಗಳು ಮೈಸೂರಿಂದ ಧರ್ಮಸ್ಥಳದವರೆಗೂ ಪ್ರತಿಭಟನಾ ರ್‍ಯಾಲಿ ನಡೆಸಿದರು.

ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಧರ್ಮ ಸ್ಥಳದ ವಿರುದ್ಧ ಅಪ್ರಚಾರವನ್ನು ಖಂಡಿಸಿ, ಜಯಕರ್ನಾಟಕ ಸಂಘಟನೆಯ ರಾಜ್ಯಾಧ್ಯಕ್ಷ ಬಿ.ಎನ್.ಜಗದೀಶ್ ನೇತೃತ್ವದಲ್ಲಿ 200ಕ್ಕೂ ಅಧಿಕ ಕಾರುಗಳ ಮೂಲಕ ಧರ್ಮ ಸ್ಥಳಕ್ಕೆ 'ನಮ್ಮ ನಡೆ ಧರ್ಮಸ್ಥಳದ ಕಡೆ' ಶೀರ್ಷಿಕೆಯಡಿ ಪ್ರತಿಭಟನಾ ರ್‍ಯಾಲಿ ಹೊರಟು ಧರ್ಮಸ್ಥಳದಲ್ಲಿ ಮಂಜು ನಾಥಸ್ವಾಮಿಗೆ ಪೂಜೆ ಸಲ್ಲಿಸಿದರು.

ಮೈಸೂರಿಂದ ಧರ್ಮಸ್ಥಳಕ್ಕೆ ತೆರಳುವ ಮುನ್ನ ಮಾಧ್ಯಮಗಳೊಂದಿಗೆ ಮಾತ ನಾಡಿದ ರಾಜ್ಯಾಧ್ಯಕ್ಷ ಜಗದೀಶ್, ಇತ್ತೀಚಿನ ದಿನಗಳಲ್ಲಿ ಹಿಂದೂ ಧರ್ಮವನ್ನು ಅವ ಹೇಳನ ಮಾಡುವವರ ಸಂಖ್ಯೆ ಹೆಚ್ಚಾಗಿದ್ದು, ಇದರ ಭಾಗವಾಗಿ ಕಳೆದ ಹಲವು ವರ್ಷಗಳಿಂದ ಧರ್ಮಸ್ಥಳ ದೇವಸ್ಥಾನದ ವಿರುದ್ಧ ಹಾಗೂ ಅಲ್ಲಿನ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗಡೆ ಮತ್ತು ಅವರ ಕುಟುಂಬದ ವಿರುದ್ಧ ಅಪಪ್ರಚಾರ ಮಾಡುವವರ ವಿರುದ್ಧ ರಾಜ್ಯ ಸರ್ಕಾರ ಕಠಿಣ ಕ್ರಮಕೈಗೊಳ್ಳಬೇಕು. ಈ ಘಟನೆಯ ಹಿಂದೆ ಪ್ರಭಾವಿಗಳ ಕೈವಾಡವಿದ್ದು, ಕೂಲಂಕುಷ ತನಿಖೆಗೆ ರಾಜ್ಯ ಸರ್ಕಾರ ಎನ್ಐಎಗೆ ವಹಿಸಬೇಕೆಂದು ಒತ್ತಾಯಿಸಿದರು.

ಮುಂದಿನ ದಿನಗಳಲ್ಲಿ ಹಿಂದೂಗಳು ಎಚ್ಚೆತ್ತುಕೊಂಡು ನಮ್ಮ ಧರ್ಮ, ಸಂಸ್ಕೃತಿ, ಪರಂಪರೆ ಬಗ್ಗೆ ಅವಹೇಳನ, ಅಪಪ್ರಚಾರ, ಸುಳ್ಳು ಸುದ್ದಿ ತಡೆಯಲು ಸೂಕ್ತ ಕಾನೂನು ರೂಪಿಸುವಂತೆ ಒತ್ತಾಯಿಸಬೇಕು. ಧರ್ಮಸ್ಥಳ ಉಳಿವಿಗಾಗಿ ಎಲ್ಲರೂ ಮಂಜುನಾಥ ಸ್ವಾಮಿ ಕ್ಷೇತ್ರಕ್ಕೆ ಭೇಟಿ ನೀಡಿ, ಶ್ರೀಕ್ಷೇತ್ರದ ಪರವಾಗಿ ಬೆಂಬಲ ಸೂಚಿಸುವಂತೆ ಭಕ್ತರಲ್ಲಿ ಮನವಿ ಮಾಡಿದರು.

ಈ ವೇಳೆ ಜಯಕರ್ನಾಟಕ ಸಂಘಟನೆಯ ಮೈಸೂರು ಜಿಲ್ಲಾಧ್ಯಕ್ಷ ಲಾರಿ ಶ್ರೀನಿವಾಸ್, ಗೌರವಾಧ್ಯಕ್ಷ ಗುರು ಪ್ರಸಾದ್, ರಾಜ್ಯ ಸಂಘಟನಾ ಕಾರ್ಯದರ್ಶಿ ವಿಜಯಗೌಡ, ಜಿಲ್ಲಾ ಉಪಾಧ್ಯಕ್ಷ ಕಾಂತರಾಜು, ನಗರಾಧ್ಯಕ್ಷ ಶ್ರೀಹರ್ಷ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜು, ನಗರ ಸಂಘಟನಾ ಕಾರ್ಯದರ್ಶಿ ಮಧು ಜಟ್ಟಿ, ಪಧಾಧಿಕಾರಿಗಳಾದ ಚೇತನ್, ಸಂಜಯ್ ಸಿಂಗ್, ಸತೀಶ್, ರಮೇಶ್, ಲಿಂಗರಾಜು, ನಂಜಪ್ಪ, ರಾಧಾ, ಪೂರ್ಣಿಮಾ, ವರಲಕ್ಷ್ಮಿ, ಅಭಿಜಿತ್, ನವೀನ್, ರಕ್ಷಿತ್, ಶ್ರೀನಿವಾಸ್, ಕರಿಗೌಡ, ಸುರೇಶ, ರಾಕೇಶ್, ಪುಷ್ಪ, ಹಾಗೂ ಇನ್ನಿತರಿದ್ದರು.

ಜಿ.ಪ್ರಣತಿ ಖೇಲೋ ಇಂಡಿಯಾ ರಾಷ್ಟ್ರೀಯ ಪಂದ್ಯಾವಳಿಗೆ ಆಯ್ಕೆ



ಮೈಸೂರು: ಮೈಸೂರಿನ ಪೊಲೀಸ್ ಪಬ್ಲಿಕ್ ಶಾಲೆಯ ಐದನೇ ತರಗತಿ ವಿದ್ಯಾರ್ಥಿನಿ ಜಿ.ಪ್ರಣತಿ ಇತ್ತೀಚೆಗೆ ಮಂಗಳೂರು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಅಸ್ಮಿತ ವುಶು ಲೀಗ್ 2025–26ರ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದು ಖೇಲೋ ಇಂಡಿಯಾ ರಾಷ್ಟ್ರೀಯ ಪಂದ್ಯಾವಳಿಗೆ ಆಯ್ಕೆಯಾಗಿದ್ದಾಳೆ.

ಒಂದು ವಾರದ ಅವಧಿಯಲ್ಲಿ ಇದು ಪ್ರಣತಿಗೆ 2ನೇ ಚಿನ್ನದ ಪದಕವಾಗಿದೆ. ಗಾಯಿತ್ರಿಪುರಂ ನಿವಾಸಿಗಳಾದ ಸಂಗೀತಾ ಮತ್ತು ಗಿರಿಧರ್ ದಂಪತಿ ಪುತ್ರಿ. ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಪಾರ್ಥಿಪ ಮತ್ತು ದರ್ಶನ್ ಅವರ ಬಳಿ ತರಬೇತಿ ಪಡೆಯುತ್ತಿದ್ದಾಳೆ.

ಸದ್ವಿದ್ಯಾ ಶಾಲೆ ವಿದ್ಯಾರ್ಥಿಗಳಿಗೆ ಬಹುಮಾನ



ಮೈಸೂರು, ಆ.24– ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರದ ವತಿಯಿಂದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಸಿದ ವಲಯ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಮೈಸೂರಿನ ವಿಜಯನಗರ ಶಾಖೆ ಸದ್ವಿದ್ಯಾ ಶಾಲೆಯ 4 ಮತ್ತು 17 ವಯೋಮಾನದ ಬಾಲಕ–ಬಾಲಕಿಯರ ವಿಭಾಗದಲ್ಲಿ ಜಯ ಗಳಿಸಿದ ವಿದ್ಯಾರ್ಥಿಗಳಿಗೆ ಶಾಲೆಯ ಅಧ್ಯಕ್ಷ ಪ್ರೊ.ನರಹರಿಬಾಬು, ಕಾರ್ಯದರ್ಶಿ ಗೋಪಿನಾಥ್, ಉಪಾಧ್ಯಕ್ಷ ಬಾಲಾಜಿ, ಮುಖ್ಯಶಿಕ್ಷಕಿ ಶ್ರೀಮತಿ ಮಮತಾ, ಸಹಾಯಕ ಮುಖ್ಯ ಶಿಕ್ಷಕ ಶ್ರೀಕಾಂತ್ ಅಮರನಾಥ್ ಅಭಿನಂದಿಸಿದರು. ದೈಹಿಕ ಶಿಕ್ಷಕರಾದ ರಮೇಶ್ ಹಾಗೂ ಶಾಲೆಯ ಹಿರಿಯ ಶಿಕ್ಷಕರು ಹಾಜರಿದ್ದರು.

ಮೀಸಲಾತಿ ವಿರೋಧಿಸುವವರು ಸಂವಿಧಾನ ವಿರೋಧಿಗಳು



ಎನ್.ಭಾಸ್ಕರ್

ಮೈಸೂರು,ಆ.24(ಪಿಎಂ)– ಸಹಕಾರ ಕ್ಷೇತ್ರದಲ್ಲಿ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಾತಿ ನೀಡುವುದನ್ನು ವಿರೋಧಿಸಿರುವ ಶಾಸಕ ಜಿ.ಟಿ.ದೇವೇಗೌಡರು ದಲಿತ ವಿರೋಧಿ ಮಾತ್ರವಲ್ಲ, ಸಂವಿಧಾನದ ವಿರೋಧಿಯೂ ಆಗಿದ್ದಾರೆ ಎಂದು ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಕಿಡಿಕಾರಿದ್ದಾರೆ.

ಸಹಕಾರ ಸಂಘಗಳಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಮಹಿಳೆಯರನ್ನು ನಾಮನಿರ್ದೇಶನ ಮಾಡುವ ಸರ್ಕಾರದ ಮಸೂದೆ ವಿರುದ್ಧ ಅಧಿವೇಶನದಲ್ಲಿ ಶಾಸಕ ಜಿ.ಟಿ.ದೇವೇಗೌಡ ವಿರೋಧ ವ್ಯಕ್ತಪಡಿಸಿದ್ದಾರೆ. ಅವರ ಆಕ್ರೋಶ ಭರಿತ ಮಾತುಗಳನ್ನು ಗಮನಿಸಿದರೆ ಅವರಲ್ಲಿನ ದಲಿತ ವಿರೋಧಿ ಮನಸ್ಥಿತಿ ತಿಳಿಯುತ್ತದೆ. ಇದು ಅಸಹನೆಯ ಮಾತುಗಳಷ್ಟೇ.

ಈ ಮಸೂದೆಯನ್ನು ಕಳೆದ ವರ್ಷ ಜಿ.ಟಿ.ದೇವೇಗೌಡರು ವಿರೋಧಿಸಿದ್ದನ್ನು ಖಂಡಿಸಿ ಪ್ರತಿಭಟನೆ ನಡೆಸಿದಾಗ ದಲಿತ ಮುಖಂಡರೇ ಪ್ರತಿಕಾಗೋಷ್ಠಿ ನಡೆಸಿ ಜಿ.ಟಿ.ದೇವೇಗೌಡರ ಪರವಾಗಿ ಹೇಳಿಕೆ ನೀಡಿದ್ದರು. ದಲಿತ ಸಮುದಾಯದ ಕತ್ತು ಹಿಸುಕುವುದಕ್ಕೆ ಅವರೆಲ್ಲರೂ ಕಾರಣರಾಗಿದ್ದಾರೆ. ಈಗಲೂ ಜಿ.ಟಿ.ದೇವೇಗೌಡರ ಮನಸ್ಥಿತಿ ಬದಲಾಗಿಲ್ಲ. ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನ ಜಾರಿಯಲ್ಲಿರುವ ಭಾರತದಲ್ಲಿ ಜಾತಿ ಮನಸ್ಥಿತಿಯ ಆಟ ನಡೆಯುವುದಿಲ್ಲ ಎಂಬುದನ್ನು ಅವರಿಗೆ ತಿಳಿಸುತ್ತಿದ್ದೇನೆ.

ಕಳೆದ ವರ್ಷ ಜಿ.ಟಿ.ದೇವೇಗೌಡರು, 'ನಾನು ದಲಿತರ ಪರ, ಕಾಂಗ್ರೆಸ್ಸಿನವರೇ ದಲಿತ ವಿರೋಧಿಗಳು' ಎಂದು ಹೇಳಿದ್ದರು. ಈಗ ಅವರ ದಲಿತ ವಿರೋಧಿ ಮನಸ್ಥಿತಿಯನ್ನು ಕರ್ನಾಟಕವೇ ತಿಳಿದುಕೊಂಡಿದೆ. ದಲಿತರು, ಮಹಿಳೆಯರು ಎಲ್ಲಾ ಕ್ಷೇತ್ರಗಳಿಗೂ ಪ್ರವೇಶಿಸಲು ಭಾರತದ ಸಂವಿಧಾನದಲ್ಲಿ ಮುಕ್ತ ಅವಕಾಶವನ್ನು ಬಾಬಾ ಸಾಹೇಬ್ ಅಂಬೇಡ್ಕರ್ ನೀಡಿದ್ದಾರೆ. ಅದನ್ನು ಯಾರಿಂದಲೂ ತಡೆಯಲಾಗದು. ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನರು ಮುಂಬರುವ ದಿನಗಳಲ್ಲಿ ಸಹಕಾರ ಕ್ಷೇತ್ರ ಮಾತ್ರವಲ್ಲ, ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಜಾರಿಗೆ ಆಗ್ರಹಿಸಿ ಜಾತಿವಾದಿ ಮನಸ್ಥಿತಿಗಳಿಗೆ ಬುದ್ಧಿಕಲಿಸಬೇಕಿದೆ ಎಂದು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

ಲೈಂಗಿಕ ಕಿರುಕುಳ: ಕೇರಳದ ನ್ಯಾಯಾಧೀಶ, ಐಪಿಎಸ್ ಅಧಿಕಾರಿ ವಿರುದ್ಧ ತನಿಖೆ

ತಿರುವನಂತಪುರ: ಕೇರಳದ ನ್ಯಾಯಾಂಗ ಅಧಿಕಾರಿ ಮತ್ತು ಐಪಿಎಸ್ ಅಧಿಕಾರಿ ಪ್ರತ್ಯೇಕ ಲೈಂಗಿಕ ಕಿರುಕುಳ ಪ್ರಕರಣಗಳಲ್ಲಿ ತನಿಖೆ ಎದುರಿಸುತ್ತಿದ್ದಾರೆ. ಕೊಲ್ಲಂ ಜಿಲ್ಲೆಯ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶ ವಿ.ಉದಯ ಕುಮಾರ್ ಮತ್ತು ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಮರಿನ್ ಜೋಸೆಫ್ ತನಿಖೆ ಎದುರಿಸುತ್ತಿರುವ ಅಧಿಕಾರಿಗಳು. ನ್ಯಾಯಾಧೀಶ ಉದಯಕುಮಾರ್ ಅವರು ತಮ್ಮ ಕೊಠಡಿಯಲ್ಲಿ ಲೈಂಗಿಕ ದುರ್ವರ್ತನೆ ತೋರಿದ್ದಾರೆ ಎಂದು ಆರೋಪಿಸಿ ಮಹಿಳೆಯೊಬ್ಬರು ದೂರು ನೀಡಿದ್ದಾರೆ.

ಸ್ಪೈಡರ್‌ಮ್ಯಾನ್ ವೇಷ ತೊಟ್ಟು ಬೈಕ್‌ನಲ್ಲಿ ಸ್ಟಂಟ್ ಮಾಡಿದವನಿಗೆ ದಂಡ



ಒಡಿಶಾ: ಸ್ಪೈಡರ್‌ಮ್ಯಾನ್ ವೇಷತೊಟ್ಟು ಬೈಕ್‌ನಲ್ಲಿ ಸ್ಟಂಟ್ ಮಾಡಿದ್ದ ವ್ಯಕ್ತಿಗೆ ಟ್ರಾಫಿಕ್ ಪೊಲೀಸರು ಸಂಚಾರ ನಿಯಮ ಉಲ್ಲಂಘನೆಗಾಗಿ 15 ಸಾವಿರ ರೂ. ದಂಡ ವಿಧಿಸಿದ್ದಾರೆ.

ಹೆಲ್ಮೆಟ್ ಧರಿಸದೆ ಬೈಕ್‌ನಲ್ಲಿ ಅಪಾಯಕಾರಿ ಸ್ಟಂಟ್ ಮಾಡಿದ್ದಾರೆಂದು ಆರೋಪಿಸಲಾಗಿದೆ. ಅವರ ಸ್ಟಂಟ್‌ನಿಂದ ಪಾದಚಾರಿಗಳು, ಇತರೆ ವಾಹನ ಸವಾರರು ತೊಂದರೆ ಅನುಭವಿಸಬೇಕಾಯಿತು. ಅಲ್ಲದೆ ಆ ಬೈಕ್‌ನ ಸೈಲೆನ್ಸರ್ ವಿಚಿತ್ರ ಶಬ್ದ ಕೂಡ ಮಾಡುತ್ತಿತ್ತು ಎನ್ನಲಾಗಿದೆ. ಸಂಚಾರ ಪೊಲೀಸರು ಆ ವ್ಯಕ್ತಿಯನ್ನು ಗಮನಿಸಿದ ತಕ್ಷಣ ಆತನನ್ನು ತಡೆದು ದಂಡ ವಿಧಿಸಿದ್ದಾರೆ.

ಮೈಸೂರು ಮಿತ್ರ ಸೋಮವಾರ 25 ಆಗಸ್ಟ್ 2025

ಶಿಕ್ಷಕರು ರಾಜಕೀಯ ಕ್ಷೇತ್ರದಿಂದ ದೂರ ಇರಿ

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು



ಸರ್ವ ಸದಸ್ಯರ ಮಹಾಸಭೆಯನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು.

ಪಾಂಡವಪುರ,ಆ.24– ಶಿಕ್ಷಕ ವೃತ್ತಿ ಪವಿತ್ರವಾದದ್ದು, ಇಲ್ಲಿ ಶಿಕ್ಷಕರು ರಾಜಕೀಯ ಮಾಡಬಾರದು ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸಲಹೆ ನೀಡಿದರು.

ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಘಟಕದಿಂದ ನಡೆದ ತಾಲೂಕು ಮಟ್ಟದ ಶೈಕ್ಷಣಿಕ ಕಾರ್ಯಾಗಾರ ಹಾಗೂ ಸರ್ವ ಸದಸ್ಯರ ಮಹಾಸಭೆಯನ್ನು ಪಟ್ಟಣದ ಕಸಾಪ ಭವನದಲ್ಲಿ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ಶಿಕ್ಷಕ ವೃತ್ತಿಗೆ ಪವಿತ್ರವಾದ ಸ್ಥಾನಮಾನ, ಗೌರವವಿದೆ. ಇಂತಹ ಕ್ಷೇತ್ರದಲ್ಲಿ ಕೆಲಸ ಮಾಡುವ ಶಿಕ್ಷಕರು ರಾಜಕೀಯ ಮಾಡುವ ಕೆಲಸಕ್ಕೆ ಮುಂದಾಗಬಾರದು. ಸಾಧ್ಯವಾದಷ್ಟು ರಾಜಕೀಯ ಕ್ಷೇತ್ರದಿಂದ ದೂರ ಉಳಿದು ಮಕ್ಕಳ ಶೈಕ್ಷಣಿಕ ಪ್ರಗತಿ ಮಾಡುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ಶಿಕ್ಷಕರನ್ನು ಸದೃಢಗೊಳಿಸುವ ಕೆಲಸವನ್ನು ಸರಕಾರಗಳು ಮಾಡಬೇಕು, ರಾಜ್ಯದಲ್ಲಿ ಸರಕಾರಿ ಶಾಲೆಗಳು ಮುಚ್ಚುತ್ತಿವೆ ಎಂದರೆ ಅದಕ್ಕೆ ಸರಕಾರಗಳೇ ಕಾರಣವೇ ಹೊರತು ಶಿಕ್ಷಕರಲ್ಲ, ಸರಕಾರ ಸರಕಾರಿ ಶಾಲೆಗಳನ್ನು ಉನ್ನತೀಕರಣಗೊಳಿಸಿ ಅದಕ್ಕೆ ಬೇಕಿರುವ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲು ಸಾಧ್ಯವಾಗದ ಕಾರಣ ಸರಕಾರಿ ಶಾಲೆಗಳು ಮುಚ್ಚುತ್ತಿವೆ ಎಂದರು.

ಟಿ.ಎಸ್.ಛತ್ರ ಗ್ರಾಮದಲ್ಲಿ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಇ.ಎಸ್.ವೆಂಕಟರಾಮಯ್ಯ ಅವರ ಹೆಸರಿನಲ್ಲಿ ಹೈಕೋರ್ಟ್ ಮಾದರಿಯಲ್ಲಿ ಸರಕಾರಿ ಶಾಲೆ ನಿರ್ಮಾಣ ಮಾಡಲಾಗುತ್ತಿದೆ ಎಂದರು.

ರಾಜ್ಯಾಧ್ಯಕ್ಷ ಸಿದ್ದಬಸಪ್ಪ ಮಾತನಾಡಿ, ಶಿಕ್ಷರ ಹಲವಾರು ಬೇಡಿಕೆಗಳ ಪರವಾಗಿ ನಿರಂತರವಾಗಿ ಹೋರಾಟ ನಡೆಸುವ ಜತೆಗೆ ಸರಕಾರ ಹಾಗೂ ಅಧಿಕಾರಿಗಳೊಂದಿಗೆ ನಿರಂತರವಾಗಿ ಚರ್ಚಿಸಲಾಗುತ್ತಿದೆ, ನಿರಂತರವಾಗಿ ನಿಮ್ಮೊಡನೆ ನಾವು ಹೋರಾಟ ನಡೆಸಲಿದ್ದೇವೆ ಎಂದರು. ಶಿಕ್ಷಕ ಮಾಣಿಕ್ಯನಹಳ್ಳಿ ಜಯರಾಮ್, ತಾಲೂಕು ಅಧ್ಯಕ್ಷ ಕೇಶವಮೂರ್ತಿ, ಸಮಾಜ ಸೇವಕ, ವಕೀಲ ಅರವಿಂದ್ ರಾಘವನ್ ಮಾತನಾಡಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ದೇವರಾಜೇಗೌಡ, ಮಾಜಿ ಅಧ್ಯಕ್ಷ ಎಚ್.ಕೆ.ಮಂಜುನಾಥ್, ರಾಜ್ಯ ಸಂಘಟನಾ ಕಾರ್ಯದರ್ಶಿ ಮಾಣಿಕ್ಯನಹಳ್ಳಿ ಜಯರಾಮ್, ಜಿಲ್ಲಾಧ್ಯಕ್ಷ ರಮೇಶ್, ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ರಮೇಶ್, ಕಾರ್ಯದರ್ಶಿ ವಿಜಯಕುಮಾರ್, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಶಿವಕುಮಾರ್, ಖಂಜಾಚಿ ಯತಿಂದ್ರಕುಮಾರ್, ಕಸಾಪ ಅಧ್ಯಕ್ಷ ಮೇಣಾಗ್ರ ಪ್ರಕಾಶ್, ಹಾಸನ ಮತ್ತು ಮಂಡ್ಯ ಜಿಲ್ಲಾಧ್ಯಕ್ಷರು, ತಾಲ್ಲೂಕು ಅಧ್ಯಕ್ಷರುಗಳು, ಸೇರಿದಂತೆ ಹಲವರು ಇದ್ದರು.

ಪ್ರತ್ಯೇಕ ಪ್ರಕರಣದಲ್ಲಿ ಜಿಲ್ಲೆಯ ಮೂವರ ದುರ್ಮರಣ

ಮಂಡ್ಯ,ಆ.24– ಜಿಲ್ಲೆಯ ವಿವಿಧ ಪ್ರಕರಣಗಳಲ್ಲಿ ಬಾಲಕಿ ಸೇರಿದಂತೆ ಮೂವರು ಮೃತಪಟ್ಟಿರುವ ಘಟನೆ ಜರುಗಿದೆ.

ಕೆ.ಆರ್.ಪೇಟೆ ಪಟ್ಟಣದ ಬಂಡಿಹೊಳೆ ರಸ್ತೆಯ ಶ್ರೀ ಚೌಡೇಶ್ವರಿ ದೇವಸ್ಥಾನದ ಜಲಸೂರು ಹೆದ್ದಾರಿ ರಸ್ತೆಯಲ್ಲಿ ವಾಯು ವಿಹಾರಕ್ಕೆ ತೆರಳಿದ್ದ ವ್ಯಕ್ತಿಯೊಬ್ಬರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಆತ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ.

ಪಟ್ಟಣದ ಹೇಮಾವತಿ ಬಡಾವಣೆಯ ನಂಜಪ್ಪ (80) ಮೃತ ವ್ಯಕ್ತಿಯಾಗಿದ್ದು, ಇವರು ತಮ್ಮ ಸ್ನೇಹಿತ ಕರಿಗೌಡ ಅವರೊಂದಿಗೆ ವಾಯುವಿಹಾರಕ್ಕೆ ತೆರಳಿದ್ದಾಗ ಬೈಕ್‌ನಲ್ಲಿ ಬಂದ ವ್ಯಕ್ತಿಯೊಬ್ಬ ನಂಜಪ್ಪ ಅವರಿಗೆ ಡಿಕ್ಕಿ ಹೊಡೆದಿದ್ದಾನೆ. ಪರಿಣಾಮ ತಲೆಗೆ ತೀವ್ರ ಪೆಟ್ಟಾಗಿದ್ದು, ಕೂಡಲೇ ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಿದರೂ ಮೃತಪಟ್ಟಿದ್ದಾರೆ. ಈ ಸಂಬಂಧ ಅವರ ಸೊಸೆ ಧನಲಕ್ಷ್ಮಿ ನೀಡಿದ ದೂರಿನನ್ವಯ ಕೆ.ಆರ್.ಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೋಟಾರ್ ಗ್ರೇಡರ್ ಹರಿದು ವ್ಯಕ್ತಿ ಸಾವು: ಚಾಲಕನೊಬ್ಬ ಮಣ್ಣು ಮಟ್ಟ ಮಾಡುವ ಮೋಟಾರ್ ಗ್ರೇಡರ್‌ನ್ನು ಅಜಾಗರೂಕತೆಯಿಂದ ಚಲಾಯಿಸಿದ ಪರಿಣಾಮ ಕೂಲಿ ಕೆಲಸ ಮಾಡುತ್ತಿದ್ದ ವ್ಯಕ್ತಿಯೊಬ್ಬನ ಮೇಲೆ ಹರಿದಿದ್ದು, ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ಕೆಎನ್‌ಆರ್ ಕನ್‌ಸ್ಟ್ರಕ್ಷನ್‌ನಲ್ಲಿ 9 ವರ್ಷಗಳಿಂದ ಕೆಲಸ ಮಾಡುತ್ತಿದ್ದ ತಾತಾರಾವ್ (62) ಸಾವನ್ನಪ್ಪಿದ ವ್ಯಕ್ತಿಯಾಗಿದ್ದು, ಶ್ರೀರಂಗಪಟ್ಟಣ–ಕುಶಾಲನಗರ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿ ಸಮಯದಲ್ಲಿ ಬೀಚನಕುಪ್ಪೆ ಗ್ರಾಮದ ಬಳಿ ಮಣ್ಣನ್ನು ಮಟ್ಟ ಮಾಡಲಾಗುತ್ತಿತ್ತು ಈ ವೇಳೆ ಮೋಟಾರ್ ಗ್ರೇಡರ್ ಚಾಲಕ ಬಿ.ಲಕ್ಷ್ಮಿ ನಾರಾಯಣ ವಾಹನವನ್ನು ನಿರ್ಲಕ್ಷ್ಯತೆಯಿಂದ ಹಿಂಭಾಗಕ್ಕೆ ಚಾಲನೆ ಮಾಡಿದ್ದರಿಂದ ಕೂಲಿ ಕೆಲಸ ಮಾಡುತ್ತಿದ್ದ ತಾತಾರಾವ್ ಅವರಿಗೆ ಡಿಕ್ಕಿ ಹೊಡೆದು ಮೇಲೆ ಹರಿದಿದೆ. ಹೊಟ್ಟೆಯ ಭಾಗಕ್ಕೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಕೂಡಲೇ ಅವರನ್ನು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದಾಗ ಮೃತ ಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿ ನೀರುಪಾಲು: ಸ್ನೇಹಿತರೊಂದಿಗೆ ಈಜಲು ತೆರಳಿದ್ದ ವಿದ್ಯಾರ್ಥಿಯೊಬ್ಬ ನೀರು ಪಾಲಾಗಿರುವ ಘಟನೆ ಬಿ.ಹೊಸೂರು ಕಾಲೋನಿಯ ವಿಶ್ವೇಶ್ವರಯ್ಯ ನಾಲೆ ಬಳಿ ಜರುಗಿದೆ. ಮಂಡ್ಯ ತಾಲೂಕಿನ ಬೆಟ್ಟಹಳ್ಳಿ ಗ್ರಾಮದ ದರ್ಶನ್ (15) ಮೃತ ವಿದ್ಯಾರ್ಥಿ. ಈತ ಹುಲಿವಾನ ಗ್ರಾಮದ ಶ್ರೀ ಕಾಲಭೈರವೇಶ್ವರ ವಿದ್ಯಾ ಸಂಸ್ಥೆಯಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಮೆಟ್ರಿಕ್ ನಂತರದ ಬಾಲಕರ ಹಾಸ್ಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದನು. ಆ.21ರಂದು ಸಂಜೆ ಶಾಲೆ ಮುಗಿಸಿ ಎಲ್ಲಾ ಮಕ್ಕಳನ್ನು ವ್ಯಾನಿನ ಮೂಲಕ ಚಾಲಕ ಶಂಕರ್ ಹಾಸ್ಟೆಲ್ ಬಳಿ ಇಳಿಸದೇ ಹೊಸೂರು ಕಾಲೋನಿ ಗೇಟ್ ಬಳಿ ಇಳಿಸಿ ವಾಪಸ್ ಹೋಗಿದ್ದಾನೆ.

ಈ ವೇಳೆ ದರ್ಶನ್ ಸ್ನೇಹಿತರ ಜೊತೆ ನಾಲೆಯಲ್ಲಿ ಈಜಲು ಹೋಗಿ ಮುಳುಗಿ ಮೃತಪಟ್ಟಿದ್ದಾನೆ. ಈತನ ಸಾವಿಗೆ ವಿದ್ಯಾ ಸಂಸ್ಥೆಯ ಮುಖ್ಯ ಶಿಕ್ಷಕಿ ರಾಜಲಕ್ಷ್ಮಿ ಹಾಗೂ ವಾಹನ ಚಾಲಕ ಶಂಕರ್ ಕಾರಣ ಎಂದು ಆರೋಪಿಸಿ ಮೃತನ ತಾಯಿ ವೇದಾವತಿ ಕೆರೆಗೋಡು ಠಾಣೆಗೆ ದೂರು ನೀಡಿದ್ದಾರೆ.

ವಿದ್ಯಾರ್ಥಿಗಳ ಶುಲ್ಕ ಪಾವತಿಸುತ್ತಿರುವ ಹಳೆಯ ವಿದ್ಯಾರ್ಥಿ ಬಿ.ಎಸ್.ರಾಮು



ಕೆ.ಆರ್.ಪೇಟೆ,ಆ.24–ಸರ್ಕಾರಿ ಶಾಲಾ–ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳ ದಾಖಲಾತಿ ಶುಲ್ಕವನ್ನು ಸ್ವಯಂ ಪಾವತಿಸಿ, ಸಮವಸ್ತ್ರವನ್ನು ನೀಡುವ ಮೂಲಕ ಸರ್ಕಾರಿ ಶಾಲೆಯನ್ನು ಉಳಿಸುವ ಕಾಯಕದಲ್ಲಿ ಶಾಲೆಯ ವಿದ್ಯಾರ್ಥಿ ತೊಡಗಿಸಿಕೊಂಡು ಇತರರಿಗೆ ಮಾದರಿಯಾಗಿದ್ದಾರೆ.

ತಾಲೂಕಿನ ಬೂಕನಕೆರೆ ಹೋಬಳಿಯ ಬಲ್ಲೇನಹಳ್ಳಿ ಗ್ರಾಮದ ಸಿವಿಲ್ ಮತ್ತು ಎಲೆಕ್ಟ್ರಿಕಲ್ಸ್ ಪ್ರಥಮ ದರ್ಜೆ ಗುತ್ತಿಗೆದಾರ, ಬಿಇ ಪದವೀಧರ ಬಿ.ಎಸ್.ರಾಮು ಇಂತಹ ಮಹತ್ತರ ಕಾರ್ಯದಲ್ಲಿ ತೊಡಗಿಸಿಕೊಂಡವರಾಗಿದ್ದಾರೆ.

ಸರ್ಕಾರಿ ಪ್ರೌಢಶಾಲಾ ವಿಭಾಗದ ಉಪಪ್ರಾಂಶುಪಾಲ ಪಿ.ಎನ್.ಶಿವಣ್ಣ ಮಾತನಾಡಿ, ನಮ್ಮ ಶಾಲೆಯ ಹಳೆಯ ವಿದ್ಯಾರ್ಥಿ, ದಾನಿಗಳು ಹಾಗೂ ಪ್ರಥಮ ದರ್ಜೆ ಸಿವಿಲ್ ಮತ್ತು ಎಲೆಕ್ಟ್ರಿಕಲ್ಸ್ ಗುತ್ತಿಗೆದಾರರಾದ ಬಿ.ಎಸ್.ರಾಮು(ಆಡು ನಿಂಗಣ್ಣನ ಸ್ವಾಮೀಗೌಡರ ರಾಮು) ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಸರ್ಕಾರಿ ಪ್ರೌಢಶಾಲೆಯ ಎಲ್ಲಾ ವಿದ್ಯಾರ್ಥಿಗಳ ದಾಖಲಾತಿ ಶುಲ್ಕವನ್ನು ಪಾವತಿಸುವ ಜೊತೆಗೆ ಪಿಯುಸಿ ಓದುವ ಎಲ್ಲಾ ವಿದ್ಯಾರ್ಥಿಗಳಿಗೂ ಸಮವಸ್ತ್ರವನ್ನು ಕೊಡುಗೆಯಾಗಿ ನೀಡಿ ಉದಾರತೆ ಮೆರೆದಿದ್ದಾರೆ ಎಂದು ಶ್ಲಾಘಿಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಟಾಪರ್ಸ್ ಆದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಪ್ರತಿಭಾ ಪುರಸ್ಕಾರ ಮಾಡುವ ಮೂಲಕ ಸರ್ಕಾರಿ ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಗಣನೀಯವಾಗಿ ದಾಖಲಾತಿ ಹೆಚ್ಚಳಕ್ಕೆ ಕಾರಣವಾಗಿದ್ದಾರೆ. ಬಿ.ಎಸ್.ರಾಮು ಅವರಂತಹ ದಾನಿಗಳು ಪ್ರತಿ ಗ್ರಾಮದಲ್ಲಿಯೂ ಇದ್ದರೆ ನಮ್ಮ ಸರ್ಕಾರಿ ಶಾಲೆಗಳು ದಾಖಲಾತಿ ಇಲ್ಲದೆ ಮುಚ್ಚುವ ಸ್ಥಿತಿ ಬರುವುದಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಬಲ್ಲೇನಹಳ್ಳಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಜೆ.ಜಿ.ರಾಜೇಗೌಡ, ಕಾಲೇಜು, ಉಪನ್ಯಾಸಕರಾದ ಬೃಂದಾ, ವೀಣಾ, ಹಿರಿಯ ಶಿಕ್ಷಕರಾದ ಬಿ.ಬಸಪ್ಪ, ಮಮತ, ಅರುಣ್‌ಕುಮಾರ್, ನಟರಾಜು, ಹೆಚ್.ಬಿ.ಮಲ್ಲಿಕಾರ್ಜುನ್, ರವಿ, ಪ್ರೌಢಶಾಲಾ ವಿಭಾಗದ ಉಪಪ್ರಾಂಶುಪಾಲ ಪಿ.ಎನ್. ಶಿವಣ್ಣ ಇತರರು ಇದ್ದರು.

ಹೆಣ್ಣುಭ್ರೂಣ ಹತ್ಯೆ ಬಗ್ಗೆ ಮಾಹಿತಿ ನೀಡಿದ್ದ ಪತ್ರಕರ್ತ ನಾಗೇಗೌಡರಿಗೆ ಪ್ರಶಸ್ತಿ



ಹಿರಿಯ ಪತ್ರಕರ್ತ ಕೆ.ಎನ್.ನಾಗೇಗೌಡ ಅವರಿಗೆ ಮಂಗಲ ಟಿ.ತಿಮ್ಮೇಗೌಡ ಪ್ರತಿಷ್ಠಾನ ಮತ್ತು ಕನ್ನಿಕ ಶಿಲ್ಪ ನವೋದಯ ಟ್ರಸ್ಟ್ ಸಮಾಜ ಸೇವಾ ಪ್ರಶಸ್ತಿ ನೀಡಿ ಗೌರವಿಸಿತು.

ಮಂಡ್ಯ,ಆ.24– ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿದ್ದ ಜಿಲ್ಲೆಯ ಹಲವೆಡೆ ನಡೆದಿದ್ದ ಹೆಣ್ಣು ಭ್ರೂಣ ಹತ್ಯೆಗೆ ಸಂಬಂಧಿಸಿದಂತೆ ಪಾಂಡವಪುರದ ಮನೆಯೊಂದರಲ್ಲಿ ಗೌಪ್ಯವಾಗಿ ನಡೆಯುತ್ತಿದ್ದ ಈ ದಂಧೆಯ ಬಗ್ಗೆ ಆರೋಗ್ಯ ಇಲಾಖೆ ಮತ್ತು ಪೊಲೀಸರಿಗೆ ಮಾಹಿತಿ ನೀಡಿದ್ದ ಜಿಲ್ಲೆಯ ಹಿರಿಯ ಪತ್ರಕರ್ತ ಕೆ.ಎನ್.ನಾಗೇಗೌಡ ಅವರಿಗೆ ಮಂಗಲ ಟಿ.ತಿಮ್ಮೇಗೌಡ ಪ್ರತಿಷ್ಠಾನ ಮತ್ತು ಕನ್ನಿಕ ಶಿಲ್ಪ ನವೋದಯ ಟ್ರಸ್ಟ್ ಸಮಾಜ ಸೇವಾ ಪ್ರಶಸ್ತಿ ನೀಡಿದೆ.

ನಗರದ ಕೆ.ಎಚ್.ಬಿ. ಕಾಲೋನಿಯ ಕೃಷಿಕ್ ನವೋದಯ ಫೌಂಡೇಷನ್ ಸಭಾಂಗಣದಲ್ಲಿ ನಡೆದ ಜಿಲ್ಲೆಯ ಮಹಾನುಭಾವರು ಕೃತಿ ಬಿಡುಗಡೆ, ಪ್ರತಿಭಾ ಪುರಸ್ಕಾರ, ಕನ್ನಿಕ ಶಿಲ್ಪ ಪುಸ್ತಕ ಮತ್ತು ಸಮಾಜ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅಭಿನಂದನೆ ಸಲ್ಲಿಸಲಾಯಿತು.

ಹೆಣ್ಣು ಭ್ರೂಣ ಹತ್ಯೆ ಬಗ್ಗೆ ಸೂಕ್ತ ಮಾಹಿತಿ ನೀಡಿದ್ದ ಹಿನ್ನಲೆಯಲ್ಲಿ ಪತ್ರಕರ್ತ ಕೆ.ಎನ್.ನಾಗೇಗೌಡ ಅವರಿಗೆ ಡಿಎಚ್‌ಓ ಡಾ.ಮೋಹನ್ ನೇತೃತ್ವದಲ್ಲಿ ಒಮ್ಮೆ ಹಾಗೂ ಮಂಡ್ಯ ನಗರದ ಮಿಮ್ಸ್ ಸಭಾಂಗಣದಲ್ಲಿ ಜಿಲ್ಲಾಡಳಿತದಿಂದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ನಗದು ಪುರಸ್ಕಾರ ನೀಡಿ ಗೌರವಿಸಲಾಗಿಯಿತು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ಡಾ.ನಿಶ್ಚಲಾನಂದನಾಥ, ಸ್ವಾಮೀಜಿ, ವಿಶ್ರಾಂತ ಐಎಎಸ್ ಅಧಿಕಾರಿ ಟಿ.ತಿಮ್ಮೇಗೌಡ, ಶಿಕ್ಷಣ ಇಲಾಖೆ ಉಪ ನಿರ್ದೇಶಕ ಜಿ.ಎ.ಲೋಕೇಶ್, ಕಸಾಪ ಮಾಜಿ ಅಧ್ಯಕ್ಷ ಪ್ರೊ.ಜಿ.ಟಿ.ವೀರಪ್ಪ, ಡಾ.ಕೆ.ಎಂ.ಮಹೇಶ್, ಉಪನ್ಯಾಸಕ ಎಸ್.ಕೆ.ಮಹೇಶ್, ಕನ್ನಿಕ ನವೋದಯ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷ ಎಚ್.ಬಿ.ರಾಮಕೃಷ್ಣ ಇತರರು ಉಪಸ್ಥಿತರಿದ್ದರು.

ಪರಿಸರ ಸಂರಕ್ಷಣೆ: ರೋಟರಿ ಕ್ಲಬ್ ಜಾಥಾ



ಶ್ರೀರಂಗಪಟ್ಟಣ: ಸಾರ್ವಜನಿಕರಲ್ಲಿ ಪರಿಸರ ಸಂರಕ್ಷಣೆ ಅರಿವನ್ನು ಮೂಡಿಸುವ ದಿಸೆಯಲ್ಲಿ ರೋಟರಿ ಕ್ಲಬ್ ಹಾಗೂ ಅಚೀವರ್ಸ್ ಅಕಾಡೆಮಿ ವತಿಯಿಂದ ಪರಿಸರ ಸ್ನೇಹಿ ಗಣಪತಿಯ ಪ್ರತಿಷ್ಠಾಪಿಸಿ ಪರಿಸರವನ್ನು ಸಂರಕ್ಷಿಸಬೇಕು ಎಂಬ ಘೋಷವಾಕ್ಯದೊಂದಿಗೆ ಪ್ರಮುಖ ಬೀದಿಗಳಲ್ಲಿ ಕಾಲ್ನಡಿಗೆ ಜಾಥಾವನ್ನು ಭಾನುವಾರ ನಡೆಸಿತು.

ಹಾಗೆಯೇ ರೋಟರಿ ಕ್ಲಬ್ ಹಾಗೂ ಅಚೀವರ್ಸ್ ಅಕಾಡೆಮಿ ಕಾರ್ಯಕರ್ತರು ಮನೆ ಮನೆಗೆ ತೆರಳಿ ಉಚಿತವಾಗಿ ಗಣೇಶ ಮೂರ್ತಿ ಹಾಗೂ ಗೌರಿಯನ್ನು ವಿತರಿಸಿ ದರು.

ರೋಟರಿ ಸಂಸ್ಥೆಯ ಅಧ್ಯಕ್ಷ ಡಾ.ರಾಘವೇಂದ್ರ ಮಾತನಾಡಿ ರಾಸಾಯನಿಕಗಳಿಂದ ತಯಾರಿಸಿದ ಮೂರ್ತಿಗಳಿಂದ ಜಲಮಾಲಿನ್ಯ ಹಾಗೂ ಜಲಚರಗಳ ಪ್ರಾಣಕ್ಕೆ ಕಂಟಕವಾಗುತ್ತದೆ. ಹೀಗಾಗಿ ಜೇಡಿ ಮಣ್ಣಿನಿಂದ ತಯಾರಿಸಿದ ಗಣೇಶನ ಮೂರ್ತಿಯನ್ನು ಪೂಜಿಸುವಂತೆ ಮನವಿ ಮಾಡಿದರು.

ಶಿವರಾಂ ನಿಧನ



ಕೆ.ಆರ್.ಪೇಟೆ, ಆ.24– ಪ್ರಥಮ ದರ್ಜೆ ಗುತ್ತಿಗೆದಾರ ಶಿವರಾಂ (63) ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಕೆಲ ದಿನಗಳಿಂದ ಲೋ ಬಿಪಿಯಿಂದ ಬಳಲುತ್ತಿದ್ದು, ಇಂದು ಅವರಿಗೆ ಹೃದಯಾಘಾತವಾಯಿತೆಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರು ಪತ್ನಿ, ಇಬ್ಬರು ಗಂಡು ಮಕ್ಕಳು ಹಾಗೂ ತಾಪಂ ಮಾಜಿ ಸದಸ್ಯರು ಹಾಗೂ ಪ್ರಥಮ ದರ್ಜೆ ಗುತ್ತಿಗೆದಾರ ಪಿ.ಕೆ.ಜಯಕೃಷ್ಣೇಗೌಡ ಸೇರಿದಂತೆ ಇಬ್ಬರು ಸಹೋದರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸಂಜೆ ತೇಗನಹಳ್ಳಿ ತೋಟದಲ್ಲಿ ನಡೆಯಿತು.

ನಾಳೆ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ

ಮಂಡ್ಯ: ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ ಕಾರ್ಯಕ್ರಮವನ್ನು ಆ.26ರ ಮಂಗಳವಾರ ರಾಯಶೆಟ್ಟಿಪುರ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದೆ. ಗ್ರಾಮಸ್ಥರು ಹಾಗೂ ಭಕ್ತವೃಂದದ ಸಹಯೋಗದೊಂದಿಗೆ ನಡೆಯಲಿದ್ದು, ಅಂದು ಬೆಳಿಗ್ಗೆ 6 ಗಂಟೆಗೆ ಸ್ವಾಮಿಗೆ ರುದ್ರಾಭಿಷೇಕ, ಹೂವಿನ ಅಲಂಕಾರ, ರುದ್ರಹೋಮ, ಪಂಚಬ್ರಹ್ಮ ಹೋಮ ನೆರವೇರಲಿದೆ. ಸಂಜೆ 6 ಗಂಟೆಗೆ ದೇವರ ಮೆರವಣಿಗೆ ಹಾಗೂ ರಾತ್ರಿ 8ಗಂಟೆಗೆ ಅನ್ನದಾಸೋಹ ಏರ್ಪಡಿಸಲಾಗಿದೆ.

ಒಂದನೇ ಪುಟದಿಂದ

ಸ್ವಯಂಚಾಲಿತ ನೀರು ಬಿಡುಗಡೆ

ನೀರು ಬಿಡುಗಡೆ ವ್ಯವಸ್ಥೆಯನ್ನು ಅನುಷ್ಠಾನ ಮಾಡುತ್ತಿದ್ದು, ಕಾಮಗಾರಿ ಭರದಿಂದ ಸಾಗಿದೆ. ವಿಶ್ವ ಬ್ಯಾಂಕ್ ನೆರವಿನಲ್ಲಿ ರಾಜ್ಯ ಸರ್ಕಾರ 63 ಕೋಟಿ ವೆಚ್ಚದಲ್ಲಿ ಈ ಯೋಜನೆ ಅನುಷ್ಠಾನಗೊಳಿಸುತ್ತಿದೆ. 60 ಕೋಟಿ ರೂಪಾಯಿಯನ್ನು ಎಸ್‌ಸಿಎಡಿಎ ವ್ಯವಸ್ಥೆಗೆ ಹಾಗೂ 3 ಕೋಟಿ ರೂಪಾಯಿಗಳನ್ನು ನಾಗರಿಕ ಕಾಮಗಾರಿಗಳಿಗೆ ವಿನಿಯೋಗಿಸಲಾಗುತ್ತಿದೆ. ವಿಶ್ವ ದರ್ಜೆಯ ತಂತ್ರಜ್ಞಾನ ಹೊಂದಿರುವ ಸ್ವಯಂಚಾಲಿತ ನೀರು ಬಿಡುಗಡೆಯ ವ್ಯವಸ್ಥೆ ನವೆಂಬರ್ ವೇಳೆಗೆ ಪೂರ್ಣಗೊಳ್ಳಲಿದೆ.

ಮೇಲ್ವಿಚಾರಣಾ ನಿಯಂತ್ರಣ ಮತ್ತು ದತ್ತಾಂಶ ಸಂಗ್ರಹಣೆ (ಎಸ್‌ಸಿಎಡಿಎ) ವ್ಯವಸ್ಥೆಯು ಜಲಾಶಯಕ್ಕೆ ಬರುವ ಒಳಹರಿವು ಹಾಗೂ ಜಲಾಶಯದಿಂದ ಹೊರಗೆ ಹೋಗುವ ಹೊರ ಹರಿವು ಎರಡನ್ನು ಟ್ರ್ಯಾಕ್ ಮಾಡುತ್ತದೆ. ಇದು ಪ್ರತಿಯೊಂದು ಕ್ರಸ್ಟ್ ಗೇಟ್ ಅಥವಾ ಸ್ಲೂಯಿಸ್ ಕಾರ್ಯಾಚರಣೆಯನ್ನು ಸ್ವಯಂಚಾಲಿತವಾಗಿ ಸಕ್ರಿಯಗೊಳಿಸುತ್ತದೆ.

ಕೆಆರ್‌ಎಸ್ ನಿರ್ಮಾಣವಾದ ಸಂದರ್ಭದಲ್ಲಿ ಎಸ್‌ಸಿಎಡಿಎ ವ್ಯವಸ್ಥೆ ಇತ್ತು. ತರುವಾಯ ಸೂಕ್ತ ನಿರ್ವಹಣೆ ಮಾಡದ ಕಾರಣ ಕ್ರಸ್ಟ್ ಗೇಟ್‌ಗಳು ರಿಪೇರಿಗೆ ಬಂದು ಸ್ವಯಂಚಾಲಿತ ಕಾರ್ಯ ವಿಧಾನಗಳು ಸ್ಥಗಿತವಾಯಿತು. ಇದರಿಂದ ಈಗಲೂ ಕೂಡ ಗೇಟ್ ಗಳನ್ನು ಕೇಬಲ್ ಹಾಗೂ ರಾಟೆಯೊಂದಿಗೆ ಹಸ್ತಚಾಲಿತವಾಗಿ ನಿರ್ವಹಣೆ ಮಾಡಲಾಗುತ್ತಿದೆ ಇದು ಸಮಯ ಗಣನೆ ಮತ್ತು ಕಡಿಮೆ ನಿಖರತೆ ವಿಧಾನವಾಗಿದೆ. ಈ ಹಿನ್ನೆಲೆ ಈಗ ಮೇಲ್ವಿಚಾರಣಾ ನಿಯಂತ್ರಣ ಮತ್ತು ದತ್ತಾಂಶ ಸಂಗ್ರಹಣೆ ವ್ಯವಸ್ಥೆಯನ್ನು 63 ಕೋಟಿ ವೆಚ್ಚದಲ್ಲಿ ಕಾರ್ಯ ರೂಪಕ್ಕೆ ತರಲಾಗುತ್ತಿದೆ.

ವಿಶ್ವದರ್ಜೆ ತಂತ್ರಜ್ಞಾನವಿರುವ ಎಸ್‌ಸಿಎಡಿಎ ಸಾಫ್ಟ್‌ವೇರ್‌ನಿಂದ ದೂರದಿಂದಲೇ ಗೇಟ್‌ಗಳನ್ನು ನಿಯಂತ್ರಿಸಬಹುದು. ಜೊತೆಗೆ ಮೇಲ್ವಿಚಾರಣೆ ಕೂಡ ಮಾಡಬಹುದು. ಇದಲ್ಲದೆ ಲೋಪದೋಷ ಪತ್ತೆ ಹಚ್ಚಬಹುದು, ಕಾರ್ಯಾಚರಣೆ ವೆಚ್ಚ ಕಡಿಮೆ ಮಾಡಬಹುದು, ಸಮಯ ಉಳಿತಾಯ ಮಾಡಬಹುದು ಹಾಗೂ ಅಣೆಕಟ್ಟೆಯ ನಿರ್ವಹಣೆಯ ನಿಖರತೆಯನ್ನು ಹೆಚ್ಚಿಸಬಹುದಾಗಿದೆ.

1911 ರಿಂದ 1932 ಅವಧಿಯಲ್ಲಿ ಕೆಆರ್‌ಎಸ್ ಜಲಾಶಯ ನಿರ್ಮಾಣವಾದಾಗ 172 ಕ್ರಸ್ಟ್ ಗೇಟ್‌ಗಳಿತ್ತು. ಇವೆಲ್ಲವೂ ಹಸ್ತಚಾಲಿತವಾಗಿ ನಿರ್ವಹಣೆ ಮಾಡಲಾಗುತ್ತಿತ್ತು. ಇದರಲ್ಲಿ ಕೆಲವು ಗೇಟ್‌ಗಳು ಬಳಕೆಯಲ್ಲಿ ಇಲ್ಲದ ಕಾರಣ ಮುಚ್ಚಲ್ಪಟ್ಟವು ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪ್ರಸ್ತುತ ಕೆಆರ್‌ಎಸ್ ಜಲಾಶಯದಲ್ಲಿ ವಿವಿಧ ಹಂತಗಳಲ್ಲಿ 153 ಕ್ರಸ್ಟ್ ಗೇಟ್‌ಗಳಿವೆ. 2003 ರಲ್ಲಿ 80 ಅಡಿ ಮಟ್ಟದಲ್ಲಿ 17 ಗೇಟ್ ಬದಲಾಯಿಸಲಾಯಿತು. 106 ಅಡಿಗಳಲ್ಲಿ 40 ಗೇಟ್, 103 ಅಡಿಗಳಲ್ಲಿ 48 ಗೇಟ್, 114 ಅಡಿಗಳಲ್ಲಿ 48 ಗೇಟ್‌ಗಳನ್ನು ಸೇರಿಸಲಾಗಿದ್ದು, ಒಟ್ಟು 153 ಗೇಟ್‌ಗಳಿವೆ ಎಂದ ಹೇಳಿದರು. ಈಗ ಕೆಆರ್ ಎಸ್ ಅಣೆಕಟ್ಟೆಯ ಪುನರ್ವಸತಿ ಮತ್ತು ಸುಧಾರಣಾ ಯೋಜನೆ (DRIP) ಯಲ್ಲಿ ಕ್ರೆಸ್ಟ್ ಗೇಟ್‌ಗಳನ್ನು ಬದಲಾಯಿಸಲಾಗಿದೆ ಎಂದು ತಿಳಿಸಿದರು.

ಫಾರ್ ಗಣೇಶ; ಸೇ ನೋ ಟು ಡ್ರಗ್ಸ್'

ವಿವಿಧ ವಿಭಾಗದ ಸ್ಪರ್ಧೆಯಲ್ಲಿ ಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದು ಬಹುಮಾನ ಪಡೆದವರ ಪಟ್ಟಿ ಪುರುಷರ 5 ಕಿ.ಮೀ: ಪಿ.ಕೆ.ಬಿಡಪ್ಪ, ಶಿವಮಾಲಪ್ಪ, ರಾಜೇಶ್

ಮಹಿಳೆಯರ 5 ಕಿ.ಮೀ: ಎನ್.ಆರ್.ಶೋಭಾ, ಎಸ್.ಎಂ.ಉಮಾ, ದೇವಿಕಾ

15 ವರ್ಷ ಮೇಲ್ಪಟ್ಟವರ ಬಾಲಕರ 5 ಕಿ.ಮೀ: ದೊರೆಸ್ವಾಮಿ ಎನ್.(ಕುರುಬೂರು), ವಿಶ್ವ ಎಂ.(ಕುರುಬೂರು), ಜೀವನ್ ವಿ.(ಕುರುಬೂರು)

15 ವರ್ಷ ಮೇಲ್ಪಟ್ಟ ಬಾಲಕಿಯರ 5 ಕಿ.ಮೀ: ಚೈತ್ರ ಬಿ.(ಕುರುಬೂರು), ಮೋನಿಕಾ ಎಲ್.(ಕುರುಬೂರು), ವಿದ್ಯಾ ಎಲ್.(ಕುರುಬೂರು)

12–15 ವರ್ಷ ವಯಸ್ಸಿನ 5 ಕಿ.ಮೀ ಬಾಲಕರು: ಸುದರ್ಶನ್, ಲೇಖನ್

12–5 ವರ್ಷದ ಬಾಲಕಿಯರ 5 ಕಿ.ಮೀ.: ಹಿತಾ ರಾಜ್ ಸಿ., ಪ್ರಾರ್ಥನಾ

ಸೀನಿಯರ್: ಕೃಷ್ಣ ಕಾಮತ್, ಹರೀಶ್

3–ಕೆ ಪುರುಷರ ವಿಭಾಗ: ದೊರೆ ಹೆಚ್.ಡಿ (ಉಡುಪಿ), ದಿಲೀಪ್ ಕುಂಬಾರ್ (ಕೊಪ್ಪಳ), ಭುವನ್ ಆರ್. ಕುಂಬಾರ್(ಕೊಪ್ಪಳ)

3–ಕೆ ಹುಡುಗಿಯರು: ಅನನ್ಯ ಎಂ ಕುರುಬೂರು, ಅಂಕಿತ ಎಸ್. ಕುರುಬೂರು, ವರ್ಷಿತ ಕುರುಬೂರು

3 ಕಿ.ಮೀ. 12 ವರ್ಷದಿಂದ 15 ವರ್ಷ ವಯಸ್ಸಿನ ಬಾಲಕರು: ಪವನ್ ಕುಮಾರ್ ಸಿ, ವೇದಾಂತ್ ಕೆ, ಸುಮುಖ್ ಎನ್.ಗೌಡ

12 ವರ್ಷದೊಳಗಿನ ಬಾಲಕಿಯರು: ಮೇಘನಾ ಎಂ, ಪ್ರಕೃತಿ, ಸಿಂಚನಾ ಸಿ

3–ಕೆ ಓಪನ್ ಮಹಿಳಾ: ಪಲ್ಲವಿ, ಸಾನ್ವಿ ಆರ್.ಪ್ರಭು, ರಶ್ಮಿ ಬಿ. ಪ್ರಶಸ್ತಿ ಪಡೆದು ಗಮನ ಸೆಳೆದರು.

ಈ ಸಂದರ್ಭದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಕಾಮಾಕ್ಷಿ ಆಸ್ಪತ್ರೆಯ ಮ್ಯಾನೇಜಿಂಗ್ ಟ್ರಸ್ಟಿ ಡಾ.ಮಹೇಶ್ ಶೆಣೈ, ಕಾಮಾಕ್ಷಿ ಆಸ್ಪತ್ರೆ ಟ್ರಸ್ಟಿ ಮನೋಜ್ ಶೆಣೈ, ಕೆ.ಆರ್.ವಿಭಾಗದ ಎಸಿಪಿ ರಾಜೇಂದ್ರ, ಕಾಮಾಕ್ಷಿ ಆಸ್ಪತ್ರೆಯ ಜಂಟಿ ಮ್ಯಾನೇಜಿಂಗ್ ಟ್ರಸ್ಟಿ ಎಂ.ಗಜಾನನ ಶೆಣೈ, ಆಸ್ಪತ್ರೆಯ ಜನರಲ್ ಮ್ಯಾನೇಜರ್ ಎಸ್.ವಿ.ಪ್ರಸನ್ನ ಕುಮಾರ್, ನಂದಿತಾ ಶೆಣೈ, ಶ್ರುತಿ ಅಶೋಕ, ಚಿರಾಗ್.ಆರ್., ಬಿಜೆಪಿ ಮುಖಂಡ ರುದ್ರಮೂರ್ತಿ ಸಿ.ಕೆ, ಪ್ರಕಾಶ್(ಪ್ಯಾಲೇಸ್ ಸ್ಪೋರ್ಟ್ಸ್ ಕ್ಲಬ್) ಚೇತನ್ ಗೌಡ, ಚೇತನ್ ಗೌಡ, ವಿವೇಕ್ ಚಿರಾಗ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಚಿನ್ನಯ್ಯ ಅಂಡ್ ಗ್ಯಾಂಗ್

ಎಸ್‌ಐಟಿ ಸಹ ಆತ ಹೇಳಿದಂತೆ ಕೇಳುತ್ತಿತ್ತು. ಆತ ಹೇಳಿದ್ದ 17 ಜಾಗಗಳಲ್ಲಿ ಗುಂಡಿ ತೋಡಿದ ಬಳಿಕ ಮೂಲ ಬುರುಡೆಯ ಬಗ್ಗೆ ಎಸ್‌ಐಟಿ ಅಧಿಕಾರಿಗಳು ಪ್ರಶ್ನೆ ಮಾಡಿದ್ದರು. ಈ ವೇಳೆ ಆತ ಒಂದೊಂದು ಜಾಗದ ಹೆಸರನ್ನು ಹೇಳಿದ್ದ. ಒಮ್ಮೆ ಬೋಳಿಯಾರ್ ಮತ್ತೊಮ್ಮೆ ಕಲ್ಲೇರಿ ಇನ್ನೊಮ್ಮೆ ಇನ್ಯಾವುದೋ ಜಾಗವನ್ನು ಹೇಳಿದ್ದ. ಈ ಮಧ್ಯೆ ಬುರುಡೆಯಲ್ಲಿದ್ದ ಮಣ್ಣು ಧರ್ಮಸ್ಥಳ ಪರಿಸರದ್ದೇ ಅಲ್ಲ ಎನ್ನುವುದು ವಿಧಿವಿಜ್ಞಾನ ಪ್ರಾಯೋಗಾಲಯದಲ್ಲಿ ದೃಢಪಟ್ಟಿತ್ತು. ಇದು ಪಕ್ಕಾ ಆಗುತ್ತಿದ್ದಂತೆ ಪೊಲೀಸರು ತಮ್ಮ ಶೈಲಿಯಲ್ಲಿ ವಿಚಾರಣೆ ನಡೆಸಿದಾಗ ಆತ ಬೇರೆ ಜಾಗದಿಂದ ಈ ಬುರುಡೆ ತಂದಿದ್ದೇನೆ. ಬೇರೆಯವರು ಹೇಳಿದಂತೆ ನಾನು ಈ ಪ್ರಕರಣಕ್ಕೆ ಬಂದಿದ್ದೇನೆ ಎಂದು ಬಾಯಿಬಿಟ್ಟಿದ್ದ.

ಸಮೀರ್ 5 ಗಂಟೆ ವಿಚಾರಣೆ

ನಾಳೆ (ಸೋಮವಾರ) ಯೂ ವಿಚಾರಣೆಗೆ ಬರುವಂತೆ ಸೂಚಿಸಿದ್ದಾರೆ. ನಾಳೆ ವಿಚಾರಣೆಗೆ ಬರುವಾಗ ವಿವಾದಾತ್ಮಕ ವೀಡಿಯೋ ಶೂಟ್ ಮಾಡಿದ್ದ ಮೊಬೈಲ್ ಹಾಗೂ ವಿಡಿಯೋ ಅಪ್ ಲೋಡ್ ಮಾಡಿದ್ದ ಲ್ಯಾಪ್ ಟ್ಯಾಪ್ ತರುವಂತೆ ಸೂಚನೆ ನೀಡಲಾಗಿದೆ. ಬಹುತೇಕ ನಾಳೆ ಸಮೀರ್‌ನ ಮೊಬೈಲ್ ಹಾಗೂ ಲ್ಯಾಪ್ ಟ್ಯಾಪ್ ಸೀಜ್ ಮಾಡುವ ಸಾಧ್ಯತೆ ಇದೆ.

ಏನಿದು ಪ್ರಕರಣ: ಧರ್ಮಸ್ಥಳ ದೇಗುಲ ವಿರುದ್ಧ ಅಪಪ್ರಚಾರ ಆರೋಪದಲ್ಲಿ 'ದೂತ' ಯೂಟ್ಯೂಬ್ ವಾಹಿನಿಯ ಸಮೀರ್‌ಗೆ ಕೋರ್ಟ್ ಇತ್ತೀಚೆಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು. ಧರ್ಮಸ್ಥಳದಲ್ಲಿ ಅಪಪ್ರಚಾರದ ಆರೋಪ ಎದುರಿಸುತ್ತಿರುವ ಸಮೀರ್, ತಮ್ಮ ವಿಡಿಯೋದಲ್ಲಿ ದಂಗೆ ಏಳುವಂತೆ ಜನರಿಗೆ ಪ್ರಚೋದಿಸಿದ್ದ. ಈ ಹಿನ್ನೆಲೆಯಲ್ಲಿ ಧರ್ಮಸ್ಥಳ ಠಾಣೆಯಲ್ಲಿ ದೊಂಬಿ, ಪ್ರಚೋದನೆ ಸೇರಿದಂತೆ ಹಲವು ಪ್ರಕರಣಗಳ ಅಡಿಯಲ್ಲಿ ಕೇಸ್‌ಗಳು ದಾಖಲಾಗಿತ್ತು. ಈ ಪ್ರಕರಣದಲ್ಲಿ ಜಾಮೀನು ನೀಡಿದ್ದ ಕೋರ್ಟ್ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿತ್ತು. ಕೋರ್ಟ್ ಜಾಮೀನು ಬಳಿಕ ಧರ್ಮಸ್ಥಳದಲ್ಲಿ ತನಗೆ ಜೀವ ಬೆದರಿಕೆ ಇರುವುದಾಗಿ ಹೇಳಿಕೊಂಡಿದ್ದ. ಈ ಹಿನ್ನೆಲೆ ಬೆಳ್ತಂಗಡಿ ಠಾಣೆಗೆ ಹಾಜರಾಗಲು ಪೊಲೀಸರು ಸೂಚಿಸಿದ್ದರು.

ಕಾರು ಬಿದ್ದು ಇಬ್ಬರ ಸಾವು

ಅವರು ಆ.17ರಿಂದ ನಾಪತ್ತೆಯಾಗಿದ್ದು, ಈ ಕುರಿತು ಶಾಂತಿಗ್ರಾಮ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಪೊಲೀಸರು ಕರೆ ಮಾಡಿದಾಗ ಪ್ರೇಮಕುಮಾರ್ ಅವರ ಮೊಬೈಲ್ ಪ್ರಾರಂಭದಲ್ಲಿ ರಿಂಗ್ ಆಗಿದ್ದು, ನಂತರ ಸ್ವಿಚ್ ಆಫ್ ಆಗಿದೆ ಎಂಬ ಮಾಹಿತಿಯಿದೆ. ಇದರಿಂದಾಗಿ ಈ ಕಾರು ಚಾಲಕನ ನಿಯಂತ್ರಣ ತಪ್ಪಿ ನಾಲೆಗೆ ಬಿದ್ದಿದೆಯೇ ಅಥವಾ ಅದ್ದೇಶ ಪೂರ್ವಕವಾಗಿಯೇ ಕಾರನ್ನು ನಾಲೆಗೆ ಬಿಡಲಾಗಿದೆಯೇ ಎಂಬ ಸಂಶಯ ಕಾಡುತ್ತಿದೆ. ಹೊಳೆನರಸೀಪುರ ನಗರ ಪೊಲೀಸ್ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಆದೇಶಿಸಿ ಸರ್ಕಾರ ಎಡವಿದೆ

ಈ ಬಗ್ಗೆ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ರಾಜ್ಯ ಬಿಜೆಪಿ ಘಟಕ, 'ಧರ್ಮಸ್ಥಳ ದೇವಸ್ಥಾನ ವ್ಯಾಪ್ತಿಯಲ್ಲಿ ಶವ ಹೂತಿದ್ದೇನೆ ಎಂದು ದೂರು ನೀಡಲು ಬಂದ ವ್ಯಕ್ತಿಯು ತಂದಿದ್ದ ಬುರುಡೆಯ ಪೂರ್ವಾಪರಗಳನ್ನು ವಿಚಾರಿಸದೆ ತನಿಖೆಗೆ ಆದೇಶಿಸಿದ್ದು ಸರಿಯಾದ ಕ್ರಮವಲ್ಲ ಎಂದು ಸಿದ್ದರಾಮಯ್ಯ ಪರಮಾಪ್ತ, ಮಾಜಿ ಸಚಿವ ರಾಜಣ್ಣ ಅವರು ಕುಟುಕಿದ್ದಾರೆ. ಬಿಜೆಪಿ ಕೂಡಾ ಇದನ್ನೇ ಆರಂಭದಿಂದಲೂ ಪ್ರಶ್ನಿಸಿತ್ತು. ಹೂತು ಹಾಕಿದ್ದ ಶವದ ಬುರುಡೆ ಈ ಷಡ್ಯಂತ್ರಕಾರರಿಗೆ ಸಿಕ್ಕಿದ್ದೆಲ್ಲಿ ಎನ್ನುವುದನ್ನು ಪತ್ತೆಹಚ್ಚಲು ಸರ್ಕಾರ ನಿರ್ದೇಶನ ನೀಡಬೇಕಿತ್ತು. ಆದರೆ ಸರ್ಕಾರ ನಗರ ನಕ್ಸಲರ ತಾಳಕ್ಕೆ ತಕ್ಕಂತೆ ಕುಣಿದಿದ್ದು ದುರಂತವೇ ಸರಿ ಎಂದಿದೆ.

ರಾಹುಲ್ ಗಾಂಧಿ ಮುಂದೆ ಬಲಪ್ರದರ್ಶನ

ಬಿಹಾರ 'ಮತದಾರರ ಅಧಿಕಾರ ಯಾತ್ರೆ'ಗೆ ಶಾಸಕರ ಕರೆದೊಯ್ದ ಡಿ.ಕೆ. ಶಿವಕುಮಾರ್



ಬೆಂಗಳೂರು, ಆ.24– ಬಿಹಾರದಲ್ಲಿ ನಡೆಯುತ್ತಿರುವ 'ಮತದಾರರ ಅಧಿಕಾರ ಯಾತ್ರೆ'ಯಲ್ಲಿ ಭಾಗ ವಹಿಸಲು ವಿಶೇಷ ವಿಮಾನದಲ್ಲಿ ಕರ್ನಾಟಕದ 10 ಕಾಂಗ್ರೆಸ್ ಶಾಸಕರನ್ನು ಕರೆದು ಕೊಂಡು ಹೋದ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್, ರಾಹುಲ್ ಗಾಂಧಿ ಅವರನ್ನು ಮೆಚ್ಚಿಸಲು ಈ ಅವಕಾಶವನ್ನು ಬಳಸಿಕೊಂಡಿದ್ದಾರೆ.

ಶಿವಕುಮಾರ್ ಅವರಿಗೆ ಶಾಸಕರ ಬೆಂಬಲವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನವದೆಹಲಿಯಲ್ಲಿ ಹೇಳಿಕೊಂಡಿದ್ದರ ಹಿನ್ನೆಲೆಯಲ್ಲಿ ಶಾಸಕರನ್ನು ರಾಹುಲ್ ಗಾಂಧಿ ಅವರ ಮುಂದೆ ಹಾಜರುಪಡಿಸಿ ದ್ದಾರೆ. ಉತ್ತಮ ಸಂಘಟಕ ಎಂದು ಪರಿಗಣಿಸಲ್ಪಟ್ಟ ಶಿವಕುಮಾರ್ ಅವರ ಈ ನಡೆ ಪಕ್ಷದ ಮುಖ್ಯಸ್ಥ ರನ್ನು, ವಿಶೇಷವಾಗಿ ರಾಹುಲ್ ಗಾಂಧಿಯನ್ನು ಮೆಚ್ಚಿಸುವ ಉದ್ದೇಶದಿಂದ ನಡೆಸಲಾಗಿದೆ ಎಂದು ವ್ಯಾಖ್ಯಾನಿಸಲಾಗಿದೆ.

ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ 'ಮತ ಕಳ್ಳತನ' ವಿಷಯದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಮತ್ತು ಭಾರತದ ಚುನಾವಣಾ ಆಯೋಗದ ವಿರುದ್ಧ ಹೋರಾಟ ಆರಂಭಿಸಿದ್ದಾರೆ. ಇತ್ತೀಚೆಗೆ ಕರ್ನಾಟಕ ವಿಧಾನ ಸಭೆಯಲ್ಲಿ ಆರ್‌ಎಸ್‌ಎಸ್ ಗೀತೆಯನ್ನು ಪಠಿಸಿದ್ದಕ್ಕಾಗಿ ಅವರ ವಿರೋಧಿ ಗಳಿಂದ ಟೀಕೆಗಳು ಬಂದ ಹಿನ್ನೆಲೆ ಯಲ್ಲಿ, ಅವರು ಪಕ್ಷದ ಸಿದ್ಧಾಂತಕ್ಕೆ ಬದ್ಧರಾಗಿರುತ್ತಾರೆ ಎಂಬ ಸಂದೇಶವನ್ನು ಕಳುಹಿಸುವುದು ಇದರ ಉದ್ದೇಶವಾಗಿದೆ.

ಆ.29ರಂದು ಸಿದ್ದರಾಮಯ್ಯ ತಮ್ಮ ಆಪ್ತ ಮತ್ತು ನಗರಾಭಿವೃದ್ಧಿ ಮತ್ತು ಪಟ್ಟಣ ಯೋಜನಾ ಸಚಿವ ಬೈರತಿ ಸುರೇಶ್ ಸೇರಿದಂತೆ ಇತರ ರೊಂದಿಗೆ ವಿಶೇಷ ವಿಮಾನದಲ್ಲಿ ಹೋಗಲಿದ್ದಾರೆ. ಸಿದ್ದರಾಮಯ್ಯ ಅವರೊಂದಿಗೆ ಯಾರೆಲ್ಲಾ ಬರುತ್ತಾರೆ ಎಂಬುದು ಕುತೂಹಲಕಾರಿಯಾಗಿದೆ ಮತ್ತು ಅದನ್ನು ಶೀಘ್ರದಲ್ಲೇ ನಿರ್ಧರಿಸಲಾಗುವುದು ಎಂದು ಮೂಲ ವೊಂದು ತಿಳಿಸಿದೆ. ಶಿವಕುಮಾರ್ ಅವರೊಂದಿಗೆ ಶಾಸಕರಾದ ಶ್ರೀನಿವಾಸ್ ಮಾನೆ, ಬಾಬಾ ಸಾಹೇಬ್ ಪಾಟೀಲ್, ರಾಜು ಸೇಟ್, ರಿಜ್ವಾನ್ ಅರ್ಷದ್, ಬಿಎಂ ನಾಗರಾಜ್, ನಯನಾ ಮೋಟಮ್ಮ, ಅಶೋಕ್ ಪಟ್ಟಣ, ಆನಂದ ಕಡೂರ್, ವೇಣುಗೋಪಾಲ ನಾಯಕ್, ಡಾ.ಎನ್.ಟಿ.ಶ್ರೀನಿವಾಸ್, ಬಸನಗೌಡ ಬಾದರ್ಲಿ, ಯುವ ಕಾಂಗ್ರೆಸ್ ಮಾಜಿ ರಾಷ್ಟ್ರೀಯ ಅಧ್ಯಕ್ಷ ಬಿ.ವಿ.ಶ್ರೀನಿವಾಸಗೌಡ, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥಗೌಡ ಸೇರಿದಂತೆ ಮುಖಂಡರು ಬಿಹಾರಕ್ಕೆ ತೆರಳಿದ್ದಾರೆ.

ಗೌರಿ ಗಣೇಶ ಹಬ್ಬದ ಅಂಗವಾಗಿ ಸ್ವಚ್ಛತಾ ಸಿಬ್ಬಂದಿಗೆ ಬಾಗಿನ



ಮೈಸೂರು, ಆ.24– ಗೌರಿ–ಗಣೇಶ ಹಬ್ಬದ ಅಂಗವಾಗಿ ಮೈಸೂರಿನ ಅರಮನೆಯಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುವ ಮಹಿಳಾ ಸಿಬ್ಬಂದಿ ಗಳಿಗೆ ಬಾಗಿನ ನೀಡಿ ಗೌರವಿಸಲಾಯಿತು.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ನಡೆದ ಕಾರ್ಯಕ್ರಮದಲ್ಲಿ ಅಥರ್ವ ಲೈಫ್ ಸ್ಕಿಲ್ಸ್ ಫೌಂಡೇಶನ್ ಹಾಗೂ ಕರುಣೆ ಸೇವಾ ಟ್ರಸ್ಟ್ ವತಿಯಿಂದ ಅರಮನೆ ಯಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ ಮಹಿಳೆಯರಿಗೆ ಅರಿಶಿಣ–ಕುಂಕುಮ, ಸೀರೆ, ಬಳೆ ಮೊರದ ಬಾಗಿನ ಅರ್ಪಿಸಲಾಯಿತು. ನಂತರ ಮಾತನಾಡಿದ ಕರುಣೆ ಸೇವಾ ಟ್ರಸ್ಟ್ ಅಧ್ಯಕ್ಷೆ ರುಕ್ಮಿಣಿ, ಯಾವುದೇ ಒಳ್ಳೆಯ ಕೆಲಸ ಪ್ರಾರಂಭಿಸುವ ಮೊದಲು ವಿಘ್ನ ನಿವಾರಕ ಗಣೇಶನ ಪೂಜಿಸುವುದು ಹಿಂದು ಧರ್ಮಿಯರ ಪದ್ಧತಿ. ಇಂತಹ ಪವಿತ್ರ ಪೂಜಾ ಸ್ಥಾನಪಡೆದುಕೊಂಡಿರುವ ಗಣಪತಿಯನ್ನು ಪ್ರತಿಷ್ಠಾಪಿಸಿ ದೇಶದ ಆಚಾರ–ವಿಚಾರ, ಸಂಸ್ಕೃತಿ ಮುಂದುವರಿಸುತ್ತಿರುವುದು ಸಂತಸ ತಂದಿದೆ. ಮೈಸೂರಿನ ಅರಮನೆ ಸುಂದರವಾಗಿ ಹಾಗೂ ಸ್ವಚ್ಛವಾಗಿ ಕಾಣಲು ಸ್ವಚ್ಛತಾ ಸಿಬ್ಬಂದಿಗಳ ಶ್ರಮ ಹೆಚ್ಚು. ಅಂಥವರನ್ನು ಗುರುತಿಸಿ ಬಾಗಿನ ನೀಡಿರುವುದು ನಮಗೂ ಸಂತೋಷ ಉಂಟು ಮಾಡುತ್ತದೆ ಎಂದು ಹೇಳಿದರು.

ಈ ವೇಳೆ ಅಥರ್ವ ಸ್ಕಿಲ್ಸ್ ಫೌಂಡೇಷನ್ ಅಧ್ಯಕ್ಷೆ ಪುಷ್ಪಲತಾ, ಶಿವರಾಜ್, ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಮಂಜುಳಾ ಸೋಮಣ್ಣ, ಜ್ಯೋತಿ, ವರ್ಷಿಣಿ, ಹಾಗೂ ಅರಮನೆ ಸಿಬ್ಬಂದಿ ಉಪಸ್ಥಿತರಿದ್ದರು.

ಭಾಗಮಂಡಲದಲ್ಲಿ ರಂಜಿಸಿದ ರಾಜ್ಯಮಟ್ಟದ ಕೆಸರುಗದ್ದೆ ಕ್ರೀಡಾಕೂಟ





ಭಾಗಮಂಡಲದಲ್ಲಿ ನಡೆದ ರಾಜ್ಯಮಟ್ಟದ ಕೆಸರುಗದ್ದೆ ಕ್ರೀಡಾಕೂಟವನ್ನು ಉದ್ಘಾಟಿಸಿದ ಸಂಸದ ಯದುವೀರ್. ಕೆಸರುಗದ್ದೆ ಕ್ರೀಡಾಕೂಟದಲ್ಲಿ ಹಗ್ಗ ಜಗ್ಗಾಟ ನಡೆಯಿತು. ಕೆಸರುಗದ್ದೆ ಕ್ರೀಡಾಕೂಟದಲ್ಲಿ ಭಾಗವಹಿಸಿರುವ ಕ್ರೀಡಾಭಿಮಾನಿಗಳನ್ನು ಚಿತ್ರದಲ್ಲಿ ಕಾಣಬಹುದು.

ನಾಪೋಕ್ಲು, ಆ.24–ಭಾಗಮಂಡಲದಲ್ಲಿ ನಡೆದ ರಾಜ್ಯಮಟ್ಟದ ಕೆಸರುಗದ್ದೆ ಕ್ರೀಡಾಕೂಟ ಅಪಾರ ವೀಕ್ಷಕರನ್ನು ರಂಜಿಸಿತು. ಕೆಸರುಗದ್ದೆ ಓಟ ಸೇರಿದಂತೆ ಹತ್ತು ಹಲವು ಕ್ರೀಡೆಗಳಲ್ಲಿ ಅಸಂಖ್ಯ ಕ್ರೀಡಾಭಿಮಾನಿಗಳು ಕೆಸರಲ್ಲಿ ಮಿಂದು ಸಂಭ್ರಮಿಸಿದರು

ಜಿಲ್ಲಾ ಪಂಚಾಯಿತಿ, ಜಿಲ್ಲಾಡಳಿತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಡಿಕೇರಿ ನೆಹರು ಯುವ ಕೇಂದ್ರ, ಕೊಡಗು ಜಿಲ್ಲಾ ಯುವ ಒಕ್ಕೂಟ, ಮಡಿಕೇರಿ, ಸೋಮವಾರಪೇಟೆ ಹಾಗೂ ವಿರಾಜಪೇಟೆ ತಾಲೂಕು ಯುವ ಒಕ್ಕೂಟ ಹಾಗೂ ಶ್ರೀ ಕೃಷ್ಣ ಯುವಕ ಸಂಘ ಭಾಗಮಂಡಲ–ಇವುಗಳ ಸಂಯುಕ್ತ ಆಶ್ರಯದಲ್ಲಿ ಭಾಗಮಂಡಲದ ಬಳ್ಳಡ್ಕ ಅಪ್ಪಾಜಿ ಹಾಗೂ ಮನು ಅವರ ಗದ್ದೆಯಲ್ಲಿ 33ನೇ ವರ್ಷದ ರಾಜ್ಯಮಟ್ಟದ ಕೆಸರುಗದ್ದೆ ಕ್ರೀಡಾಕೂಟವನ್ನು ಆಯೋಜಿಸಲಾಗಿತ್ತು.

ಕ್ರೀಡಾಕೂಟವನ್ನು ಉದ್ಘಾಟಿಸಿದ ಸಂಸದ ಯದುವೀರ್ ಮಾತನಾಡಿ, ಜಿಲ್ಲೆಯ ಜನತೆ ಇಲ್ಲಿನ ಪ್ರಕೃತಿ ಹಾಗೂ ಸಂಸ್ಕೃತಿ ಸಂಪ್ರದಾಯಗಳನ್ನು ಸಂರಕ್ಷಿಸಿ ಬೆಳೆಸುವಂತಾಗಬೇಕು ಎಂದರು. ಕಾವೇರಿ ತಾಯಿಯ ತವರಿನಲ್ಲೇ ನಡೆಯುತ್ತಿರುವ ಕ್ರೀಡಾಕೂಟಕ್ಕೆ ಪಾಲ್ಗೊಳ್ಳಲು ಅವಕಾಶ ಸಿಕ್ಕಿದ್ದು ಸಂತೋಷ ತಂದಿದೆ. ಮುಂದೆಯು ಇಂತಹ ಗ್ರಾಮೀಣ ಕ್ರೀಡಾಕೂಟಗಳು ಯಶಸ್ವಿಯಾಗಿ ನಡೆಯಲಿ ಎಂದರು.

ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿದ ಮಾಜಿ ವಿಧಾನಸಭಾಧ್ಯಕ್ಷ ಕೆ.ಜಿ.ಬೋಪಯ್ಯ ಮಾತನಾಡಿ, ಕೊಡಗು ಜಿಲ್ಲೆ, ಕ್ರೀಡಾ ಕ್ಷೇತ್ರಕ್ಕೆ ಹಲವು ಕ್ರೀಡಾಪಟುಗಳನ್ನು ಕೊಡುಗೆಯಾಗಿ ನೀಡಿದೆ. ಕಾವೇರಿ ಉಗಮ ಸ್ಥಾನ ಭಾಗಮಂಡಲದಲ್ಲಿ ಈ ಕ್ರೀಡಾಕೂಟ ನಡೆಯುತ್ತಿರುವುದು ಸಂತಸದ ವಿಷಯ ಎಂದರು.

ಭಾಗಮಂಡಲ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಹೊಸೂರು ಸತೀಶ್ ಕುಮಾರ್ ಮಾತನಾಡಿ ರಾಜ್ಯಮಟ್ಟದ ಕ್ರೀಡಾಕೂಟ ಗ್ರಾಮೀಣ ಭಾಗದಲ್ಲಿ ನಡೆಯುತ್ತಿರುವುದು ಹೆಮ್ಮೆಯ ವಿಚಾರ ಎಂದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಪಿಎಲ್‌ಡಿ ಬ್ಯಾಂಕಿನ ಅಧ್ಯಕ್ಷ ಮನುಮುತ್ತಪ್ಪ ಇದ್ದರು. ಕಾರ್ಯಕ್ರಮದಲ್ಲಿ ದೆಹಲಿಯಲ್ಲಿ ಜರುಗಿದ 79ನೇ ಸ್ವಾತಂತ್ರ ದಿನಾಚರಣೆ ಸಂದರ್ಭದಲ್ಲಿ ರಾಯಭಾರಿಯಾಗಿ ಪ್ರತಿನಿಧಿಸಿದ್ದ ಮೂರ್ನಾಡಿನ ಯಶಸ್ ರೈ ಇವರನ್ನು ಸಂಸದರು ಸನ್ಮಾನಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಭಾಗಮಂಡಲ ಗ್ರಾಮ ಪಂಚಾಯತಿ ಅಧ್ಯಕ್ಷ ಕಾಳನ ರವಿ ವಹಿಸಿದ್ದರು ವೇದಿಕೆಯಲ್ಲಿ ಅಯ್ಯಂಗೇರಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪುಷ್ಪ, ಮಡಿಕೇರಿ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಮಂದ್ರೀರ ಮೋಹನ್ ದಾಸ್, ನೆಹರು ಯುವ ಕೇಂದ್ರದ ಸಮನ್ವಯ ಅಧಿಕಾರಿ ಉಲ್ಲಾಸ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ವಿಸ್ಮಯ, ಮಡಿಕೇರಿ ತಾಲೂಕು ಒಕ್ಕೂಟದ ಅಧ್ಯಕ್ಷ ಬಾಳಾಡಿ ದಿಲೀಪ್ ಕುಮಾರ್, ಜಿಲ್ಲಾ ಕೂಟದ ಖಜಾಂಚಿ ಕುಂಜಿಲನ ಮಧುಮೋಹನ್, ಶ್ರೀ ಕೃಷ್ಣ ಯುವಕ ಸಂಘದ ಅಧ್ಯಕ್ಷರಾದ ಲತೇಶ್, ಸಮಿತಿ ಸಂಚಾಲಕ ಕಾವೇರಿ ಮನೆ ಭರತ್, ಗದ್ದೆಯ ಮಾಲೀಕ ಬಳ್ಳಡ್ಕ ಅಪ್ಪಾಜಿ ಹಾಗೂ ಮನು ಸೇರಿದಂತೆ ಕ್ರೀಡಾಭಿಮಾನಿಗಳು ಉಪಸ್ಥಿತರಿದ್ದರು.

ಕಾರುಗಳ ಮುಖಾಮುಖಿ ಡಿಕ್ಕಿ: ಹಲವರಿಗೆ ಗಾಯ




ನಾಪೋಕ್ಲು– ಮೂರ್ನಾಡು ಮುಖ್ಯರಸ್ತೆಯ ಹೊದವಾಡ ಗ್ರಾಮದ ಬೊಳಿಬಾಣೆ ಎಂಬಲ್ಲಿ ಎರಡು ಕಾರುಗಳು ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಿಂದ ಕಾರುಗಳು ಜಖಂಗೊಂಡಿರುವುದು.

ನಾಪೋಕ್ಲು: ಎರಡು ಕಾರುಗಳು ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಪ್ರಯಾಣಿಕರು ಗಾಯಗೊಂಡಿರುವ ಘಟನೆ ಭಾನುವಾರ ನಾಪೋಕ್ಲು– ಮೂರ್ನಾಡು ಮುಖ್ಯರಸ್ತೆಯ ಹೊದವಾಡ ಗ್ರಾಮದ ಬಳಿ ಬೊಳಿಬಾಣೆ ಎಂಬಲ್ಲಿ ಸಂಭವಿಸಿದೆ.

ಕಕ್ಕಬೆ ಗ್ರಾಮ ಪಂಚಾಯತಿಯ ಕುಂಜಿಲ ಗ್ರಾಮದ ನಿವಾಸಿ ಚಿತ್ರಭಾನು ತಮ್ಮ ಪತ್ನಿ ದಿವ್ಯ ಹಾಗೂ ಮೊಮ್ಮಗಳೊಂದಿಗೆ ಮೂರ್ನಾಡು ಕಡೆಯಿಂದ ನಾಪೋಕ್ಲುವಿಗೆ ಪ್ರಯಾಣಿಸುತ್ತಿದ್ದ ಹುಂಡೈ ಐಟೆನ್ (ಕೆಎ–12 ಝಡ್ 6078) ಕಾರು ಮತ್ತು ಅಭ್ಯತ್ ಮಂಗಳದ ನಿವಾಸಿಗಳಾದ ಕೌಶಿಕ್ ಮಲ್ಲಿಗೆ ತುಷ್ಟಿ ಸೇರಿದಂತೆ 5 ಜನರಿದ್ದ ಮಾರುತಿ ಸ್ವಿಫ್ಟ್ (ಕೆಎ–13 ಝಡ್ 6919) ಕಾರುಗಳು ಬೊಳಿಬಾಣೆ ಎಂಬಲ್ಲಿ ಮುಖಮುಖಿ ಡಿಕ್ಕಿಯಾಗಿದ್ದು, ಪ್ರಯಾಣಿಕರಿಗೆ ಗಂಭೀರ ಗಾಯಗಳಾಗಿವೆ.

ಗಾಯಾಳುಗಳನ್ನು ಆಂಬುಲೆನ್ಸ್ ಮೂಲಕ ಮಡಿಕೇರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ನಾಪೋಕ್ಲು ಗ್ರಾಮ ಪಂಚಾಯಿತಿ ಸದಸ್ಯ ಟಿ.ಎ.ಮೊಹಮ್ಮದ್ ಹನೀಫ್ ಗಾಯಗೊಂಡ ಕುಂಜಿಲ ಗ್ರಾಮದ ನಿವಾಸಿ ಚಿತ್ರ ಭಾನು ಕುಟುಂಬದವರಿಗೆ ನಾಪೋಕ್ಲುನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ತಮ್ಮ ಕಾರಲ್ಲಿ ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ಕೊಂಡೊಯ್ದು ದಾಖಲಿಸಿ ಮಾನವೀಯತೆ ಮೆರೆದಿದ್ದಾರೆ. ಅಪಘಾತದಿಂದ ಎರಡು ಕಾರುಗಳು ತೀವ್ರ ಜಖಂಗೊಂಡಿದೆ. ನಾಪೋಕ್ಲು ಪೊಲೀಸರು ಘಟನಾ ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದ ಬಳಿಕ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

9 ತಿಂಗಳಾದರೂ ಪೂರ್ಣಗೊಳ್ಳದ ಸಿದ್ದಾಪುರ ರಸ್ತೆ ಕಾಮಗಾರಿ

7 ದಿನದಲ್ಲಿ ರಸ್ತೆ ಕಾಮಗಾರಿ ಪೂರ್ಣಗೊಳಿಸದಿದ್ದರೆ ಬೃಹತ್ ಪ್ರತಿಭಟನೆ



ಸಿದ್ದಾಪುರದ ಬಳಿ ವಾಹನ ಸಂಚಾರಕ್ಕೆ ಅಡ್ಡಿಯಾಗಿರುವ ಅಪೂರ್ಣ ಕಾಮಗಾರಿ.

ಸಿದ್ದಾಪುರ,ಆ.24– ವಿರಾಜಪೇಟೆ ತಾಲೂಕಿನ ಸಿದ್ದಾಪುರದಲ್ಲಿ ಅಂತರ್‌ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ಕೋಣನೂರು–ಮಾಕುಟ್ಟ ರಾಜ್ಯ ಹೆದ್ದಾರಿಯ ಸಂಪರ್ಕದ ಸಿದ್ದಾಪುರ ಮುಖ್ಯ ರಸ್ತೆ 9 ತಿಂಗಳು ಕಳೆದರೂ ಕಾಮಗಾರಿ ಪೂರ್ಣವಾಗಿಲ್ಲ ವಾಹನಗಳು ತೀವ್ರ ಕಷ್ಟಕರ ರೀತಿಯಲ್ಲಿ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು 7 ದಿನದಲ್ಲಿ ರಸ್ತೆ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ ಬೃಹತ್ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಅಂಬೇಡ್ಕರ್ ಸೇನೆ ಹಾಗೂ ವಾಹನ ಚಾಲಕರ ಸಂಘ ಎಚ್ಚರಿಸಿದೆ.

ರಸ್ತೆ ಅಭಿವೃದ್ಧಿಗಾಗಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ನವೆಂಬರ್ ತಿಂಗಳಲ್ಲಿ ಭೂಮಿಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದ್ದರು. ಇದೀಗ 9 ತಿಂಗಳು ಕಳೆದರೂ ಗುತ್ತಿಗೆದಾರರ ನಿರ್ಲಕ್ಷ್ಯದಿಂದ ರಸ್ತೆ ಕಾಮಗಾರಿ ವಿಳಂಬವಾಗಿ ಸಾರ್ವಜನಿಕರಿಗೆ ಸಮಸ್ಯೆ ಉಂಟಾಗುತ್ತಿದೆ ಎಂದು ಸ್ಥಳೀಯರು ಆರೋಪಿಸಿದರು.

ಪಾಲಿಬೆಟ್ಟ ರಸ್ತೆಯಿಂದ ಅಯ್ಯಪ್ಪ ದೇವಸ್ಥಾನದವರೆಗೆ ಪಟ್ಟಣದ ಎರಡೂ ಬದಿ ಚರಂಡಿ ಮಾಡಲಾಗುತ್ತಿದ್ದು, ರಸ್ತೆ ಸಂಪೂರ್ಣ ಹೊಂಡ ಗುಂಡಿಗಳಿಂದ ಕೂಡಿ ಸಾರ್ವಜನಿಕರ ನೆಮ್ಮದಿಯ ಬದುಕಿಗೆ ಸಂಕಷ್ಟ ತಂದೊಡ್ಡಿದೆ. ಈ ರಸ್ತೆಯಲ್ಲಿ ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತಿದ್ದು, ವಾಹನ ಚಾಲಕರು ಹದಗೆಟ್ಟ ರಸ್ತೆಯಲ್ಲಿ ಸಂಚರಿಸಲು ಹರಸಾಹಸ ಪಡುವಂತಾಗಿದೆ. ಸೇತುವೆ ನಿರ್ಮಾಣಕ್ಕೆ ಎಂದು ಭಾರಿ ಗಾತ್ರದ ಗುಂಡಿ ತೆಗೆಯಲಾಗಿದ್ದು ಪೈಪು ಅಳವಡಿಸದೆ ಹಾಗೆ ಬಿಡಲಾಗಿದ್ದು ಅಪಘಾತಕ್ಕೆ ಕಾರಣವಾಗುತ್ತಿದೆ ಎಂದು ವಾಹನ ಸವಾರರು ಅಳಲು ತೋಡಿಕೊಂಡಿದ್ದಾರೆ. ಗುತ್ತಿಗೆದಾರ ಕೈಗೊಂಡಿರುವ ಕಾಮಗಾರಿ ಆಮೆ ವೇಗದಲ್ಲಿ ಸಾಗಿದ್ದು ಸಮಸ್ಯೆಗೆ ಕಾರಣವಾಗಿದೆ ಎಂದು ಅಂಬೇಡ್ಕರ್ ಸೇನೆ ಜಿಲ್ಲಾಧ್ಯಕ್ಷ ಸತೀಶ್ ಅಸಮಾಧಾನ ವ್ಯಕ್ತಪಡಿಸಿದ್ದು, ಕಾಮಗಾರಿ ಪ್ರಾರಂಭಿಸದಿದ್ದಲ್ಲಿ ವಾಹನ ಚಾಲಕರು ಹಾಗೂ ವಿವಿಧ ಸಂಘ ಸಂಸ್ಥೆಗಳನ್ನು ಒಗ್ಗೂಡಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಸುತ್ತಮುತ್ತಲಿನ ನಿವಾಸಿಗಳು ಕಾಮಗಾರಿ ಪೂರ್ಣಗೊಳಿಸಲು ಹಲವು ಬಾರಿ ಒತ್ತಾಯ ಮಾಡಿದ್ದಾರೆ. ಇತ್ತೀಚೆಗೆ ಶಾಸಕರು ಭೇಟಿ ನೀಡಿ ಪರಿಶೀಲನೆ ನಡೆಸಿ ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚನೆ ನೀಡಿದ್ದಾರೆ. ಗುತ್ತಿಗೆದಾರ ಮಾತ್ರ ಆಮೆ ನಡಿಗೆಯ ರೀತಿಯಲ್ಲಿ ಕಾಮಗಾರಿ ಮಾಡುತ್ತಿದ್ದಾರೆ. ಅಂದಾಜು ಒಂದು ಕಿಲೋ ಮೀಟರ್ ರಸ್ತೆ 9 ತಿಂಗಳು ಕಳೆದರೂ ಅಭಿವೃದ್ಧಿಯಾಗಿಲ್ಲ ಎಂದರೆ ಯಾರು ಕಾರಣ ಎಂದು ಸ್ಥಳೀಯರು ಪ್ರಶ್ನಿಸಿದ್ದಾರೆ. ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇತ್ತ ಗಮನಹರಿಸಿ ಕಾಮಗಾರಿ ಪೂರ್ಣಗೊಳಿಸಬೇಕೆಂದು ಒತ್ತಾಯಿಸಿದ್ದಾರೆ. ಈ ಸಂದರ್ಭ ವಾಹನ ಚಾಲಕರ ಸಂಘದ ಅಧ್ಯಕ್ಷ ಸೂದನ ಸತೀಶ್, ಆಟೋ ಚಾಲಕರು, ಸ್ಥಳೀಯ ನಿವಾಸಿಗಳು ಹಾಜರಿದ್ದರು.

ಹೊಂಬೆಳಕು ಕಿರಣ ಮಾಸಿಕ ಗೋಷ್ಠಿಯಲ್ಲಿ
ವಾಲ್ಮೀಕಿ ರಾಮಾಯಣದ ಸುಂದರಕಾಂಡದ ಬಗ್ಗೆ ಉಪನ್ಯಾಸ

ವಿರಾಜಪೇಟೆ: ವಿರಾಜಪೇಟೆ ಬಳಿಯ ಅರಮೇರಿ ಕಳಂಚೇರಿ ಮಠದ ಶ್ರೀ ಲಿಂಗರಾಜೇಂದ್ರ ಭವನದಲ್ಲಿ ಹೊಂಬೆಳಕು ಕಿರಣ 234 ನೇ ಮಾಸಿಕ ತತ್ತ್ವಚಿಂತನಾ ಗೋಷ್ಠಿ ಕಾರ್ಯಕ್ರಮವು ಶ್ರೀ ಮಠದ ಪೀಠಾಧಿಪತಿ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ನಡೆಯಿತು.

ಬೆಂಗಳೂರು ವಿದುಷಿ ಜಯಲಕ್ಷ್ಮಿ ಉಪನ್ಯಾಸಕರಾಗಿ ಭಾಗವಹಿಸಿ 'ವಾಲ್ಮೀಕಿ ರಾಮಾಯಣದ ಸುಂದರಕಾಂಡ' ಎಂಬ ವಿಷಯದ ಬಗ್ಗೆ ಮಾತನಾಡಿ, ಹನುಮಂತನು ಸಮುದ್ರೋಲಂಘನವನ್ನು ಮಾಡಿ ಸೀತಾಮಾತೆಯನ್ನು ಹುಡುಕಿದ ಕಥೆ, ಲಂಕೆಯ ಸೌಂದರ್ಯದಲ್ಲಿದ್ದಾಗ ಸೀತೆಗೆ ಹನುಮಂತನು ಧೈರ್ಯ ಹೇಳಿ ಮತ್ತು ರಾಮನಿಂದ ತಂದ ಉಂಗುರವನ್ನು ಸೀತೆಗೆ ಕೊಟ್ಟು, ಬಳಿಕ ಸೀತೆಯಿಂದ ಚೂಡಾಮಣಿಯನ್ನು ತೆಗೆದುಕೊಂಡು ಹೋಗಿ ರಾಮನಿಗೆ ಕೊಡುವ ಕಥೆಯ ಬಗ್ಗೆ ಉಪನ್ಯಾಸ ನೀಡಿದರು.

ಕೃಷಿಕರಾದ ಮಡಿಕೇರಿಯ ಜಿ.ಟಿ.ರಾಘವೇಂದ್ರ ಜ್ಯೋತಿ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ವಿರಾಜಪೇಟೆ ವೈದ್ಯ ಡಾ.ಎಸ್.ವಿ. ನರಸಿಂಹನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿ ಕೆ.ಬಿ.ಇಂಪನ ಸ್ವಾಗತಿಸಿದರು.

ಎಸ್.ವರ್ಷಿನಿ ನಿರೂಪಿಸಿದರೆ, ಸುಷ್ಮಿತ ಪ್ರಸಾದ್ ವಂದಿಸಿದರು.



ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಅವರಿಂದ ಉಪನ್ಯಾಸ.

ವರ್ಷ ತುಂಬುವ ಮೊದಲೇ ಉತ್ತಂಬಳ್ಳಿ ಹೆದ್ದಾರಿ ಸಂಪರ್ಕದ ಮೇಲ್ಸೇತುವೆಯ ತಡೆಗೋಡೆ ಕುಸಿತ

ವಾಹನಗಳ ಸಂಚಾರ ನಿಷೇಧ, ಬದಲಿ ಮಾರ್ಗದ ವ್ಯವಸ್ಥೆ

ಸ್ಥಳಕ್ಕೆ ಅಧಿಕಾರಿಗಳೊಂದಿಗೆ ಶಾಸಕ ಎಆರ್‌ಕೆ ಭೇಟಿ, ಪರಿಶೀಲನೆ



ತಡೆಗೋಡೆ ಕುಸಿತದ ಸ್ಥಳಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಭೇಟಿ ನೀಡಿ, ಪರಿಶೀಲಿಸಿದರು.

ಕೊಳ್ಳೇಗಾಲ, ಆ.24– ತಾಲೂಕಿನ ಉತ್ತಂಬಳ್ಳಿ ಬಳಿ ನಿರ್ಮಾಣವಾಗಿದ್ದ ಹೆದ್ದಾರಿ ರಸ್ತೆಗೆ ಸಂಪರ್ಕ ಕಲ್ಪಿಸುವ ಮೇಲ್ಸೇತುವೆಯ ತಡೆಗೋಡೆ ವರ್ಷ ತುಂಬುವ ಮೊದಲೇ ಕುಸಿತಗೊಂಡಿದ್ದು, ಆ ರಸ್ತೆಯಲ್ಲಿ ವಾಹನಗಳ ಸಂಚಾರ ಸ್ಥಗಿತಗೊಳಿಸಲಾಗಿದೆ.

ಈ ಮೇಲ್ಸೇತುವೆ ರಸ್ತೆ, ಚಾಮರಾಜನಗರ–ಕೊಳ್ಳೇಗಾಲ ಮಾರ್ಗವಾಗಿ ಬೆಂಗಳೂರಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಯ ಮಾರ್ಗದ ಮೇಲ್ಸೇತುವೆಯಾಗಿದ್ದು, ಈ ಕಾಮಗಾರಿ ಕೇವ 11 ತಿಂಗಳ ಹಿಂದೆ ಪೂರ್ಣಗೊಂಡಿತ್ತು ಆದರೆ ಅಲ್ಪಾವಧಿಯಲ್ಲೇ ತಡೆಗೋಡೆ ಕುಸಿತಗೊಂಡಿದೆ.

ತಡೆಗೋಡೆ ಕುಸಿತದಿಂದಾಗಿ ವಾಹನಗಳ ಸಂಚಾರಕ್ಕೆ ತೊಡಕಾಗುವ ಸಾಧ್ಯತೆ ಇರುವ ಕಾರಣ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಅಪಾಯಕ್ಕೂ ಮುನ್ನ ಮುನ್ನೆಚ್ಚರಿಕೆ ಕ್ರಮ ಕೈಗೊಂಡು ಬದಲಿ ಮಾರ್ಗದಲ್ಲಿ ಸಂಚರಿಸಲು ಕ್ರಮ ವಹಿಸಿದೆ.

ವಿಷಯ ತಿಳಿಯುತ್ತಿದ್ದಂತೆ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ತಕ್ಷಣ ಸ್ಥಳೀಯ ಅಧಿಕಾರಿಗಳು ಮತ್ತು ಈ ಕಾಮಗಾರಿಗೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ, ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ರಾಷ್ಟ್ರೀಯ ಹೆದ್ದಾರಿ ಪ್ರಾಜೆಕ್ಟ್ ಡೈರೆಕ್ಟರ್ ಮಿಲಿನ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ಚಂದ್ರು, ಡಿವೈಎಸ್ಪಿ ಧರ್ಮೇಂದ್ರ, ಸಬ್ ಇನ್ಸ್‌ಪೆಕ್ಟರ್ ಸುಪ್ರೀತ್, ತಹಸಿಲ್ದಾರ್ ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಬಸ್ತಿಪುರ ಪ್ರಕಾಶ್ ಇನ್ನಿತರರು ಹಾಜರಿದ್ದು ಸೇತುವೆ ತಡೆಗೋಡೆ ಕುಸಿತಕ್ಕೆ ಕಳಪೆ ಕಾಮಗಾರಿ ಕಾರಣ ಎಂದು ಆಕ್ರೋಶ ಹೊರಹಾಕಿದ್ದಾರೆ

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕರು, ಹಿಂದಿನ ಕಾಲದಲ್ಲಿ ನಿರ್ಮಾಣಗೊಂಡಿದ್ದ ಸತ್ತೇಗಾಲ ಸೇತುವೆ ಬಹಳ ಗಟ್ಟಿಮುಟ್ಟಾಗಿದ್ದು ಇನ್ನು ಸುಸ್ಥಿತಿಯಲ್ಲಿದೆ. ಸಚಿವ ನಿತಿನ್ ಗಡ್ಕರಿ ಅವರು, ಉತ್ತಮ ಸೇತುವೆ ಹೆದ್ದಾರಿ ಕಾಮಗಾರಿ ಕೈಗೊಂಡಿದ್ದಾರೆ. ನಾನು ಸಹಾ ಬಹಳ ಕಡೆ ನೋಡಿದ್ದೇನೆ. ಆದರೆ ಉತ್ತಂಬಳ್ಳಿ ಬಳಿಯ ಹೆದ್ದಾರಿ ಸೇತುವೆ ತಡೆಗೋಡೆ, ರಸ್ತೆ ಗುಣಮಟ್ಟವಿಲ್ಲದ ಕಾರಣ ಕುಸಿದಿದೆ. ಈ ಹಿನ್ನೆಲೆಯಲ್ಲಿ ಇದು ಅತ್ಯಂತ ಕಳಪೆ ಗುಣಮಟ್ಟದ ಕಾಮಗಾರಿಯಾಗಿದೆ ಎಂದರು.

ಈ ಕಾಮಗಾರಿ ಪೂರ್ಣಗೊಳ್ಳುತ್ತಿದ್ದಂತೆ ಜಿಲ್ಲೆಯ ಜನತೆಯ ಬೈಪಾಸ್ ರಸ್ತೆಯ ಮೂಲಕ ತೆರಳುವ ಕನಸು ನನಸಾಗಿತ್ತು ಎಂದು ಸಂತಸದಿಂದಿದ್ದರು. ಆದರೆ ಬೈಪಾಸ್ ರಸ್ತೆ ಸಂಪರ್ಕ ಕಲ್ಪಿಸುವ ಸೇತುವೆಯ ತಡೆಗೋಡೆ ಕುಸಿದಿರುವುದು ಆತಂಕಕಾರಿ ವಿಚಾರ. ಇದು ಅತ್ಯಂಕ ಕಳಪೆ ಕಾಮಗಾರಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಸಂಬಂಧ ಸಂಸದ ಸುನೀಲ್ ಬೋಸ್ ಅವರು ಹಾಗೂ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ಖುದ್ದು ಗುಣಮಟ್ಟದ ಪರಿಶೀಲನೆ ನಡೆಸಿ ಬಳಿಕ ಉಳಿದ ಅನುದಾನ ಬಿಡುಗಡೆಗೆ ಕೇಂದ್ರ ಸರ್ಕಾರ ಮುಂದಾಗಬೇಕು. ಹಿಂದೆ ಈ ಕಾಮಗಾರಿ ಕೈಗೊಂಡ ಗುತ್ತಿಗೆದಾರರು ನಿಧನರಾದ ಹಿನ್ನೆಲೆ ಕಾಮಗಾರಿ ವಿಳಂಬವಾಗಿತ್ತು. ಆದರೆ ಚಂಡಿಗಡದ ಗುತ್ತಿಗೆದಾರ ಸರ್ದಾರ್ಜಿ ಕಾಮಗಾರಿ ಪುನರ್ ಪ್ರಾರಂಭಿಸಿದರು. ಆದರೆ ವರ್ಷ ತುಬುವ ಮುನ್ನವೇ ತಡೆಗೋಡೆ ಕುಸಿತಗೊಂಡ ಹಿನ್ನೆಲೆ ಪುನರ್ ನಿರ್ಮಾಣಕ್ಕೆ ಮುಂದಾಗಬೇಕು.

ರಾಜ್ಯಮಟ್ಟದ ಪತ್ರಿಕಾ ವಿತರಕರ ಸಮ್ಮೇಳನ ಯಶಸ್ವಿಗೊಳಿಸಿ



ಚಾಮರಾಜನಗರ ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ರಾಜ್ಯಮಟ್ಟದ ಪತ್ರಿಕಾ ವಿತರಕರ ಸಮ್ಮೇಳನದ ಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು.

ಚಾಮರಾಜನಗರ, ಆ.24– ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಹಾಗೂ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ ಸಹಯೋಗದಲ್ಲಿ ಆ.28 ರಂದು ಮೈಸೂರಿನಲ್ಲಿ ಆಯೋಜಿಸಲಾಗಿರುವ ಪತ್ರಿಕಾ ವಿತರಕರ ಐದನೇ ರಾಜ್ಯ ಸಮ್ಮೇಳನಕ್ಕೆ ಜಿಲ್ಲೆಯ ಎಲ್ಲ ಪತ್ರಿಕಾ ವಿತರಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಜಿಲ್ಲಾ ಪತ್ರಿಕಾ ವಿತರಕರ ಒಕ್ಕೂಟದ ಜಿಲ್ಲಾಧ್ಯಕ್ಷ ಸಿ.ಪುರುಷೋತ್ತಮ್ ಮನವಿ ಮಾಡಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ಭಾನುವಾರ ರಾಜ್ಯಮಟ್ಟದ ಪತ್ರಿಕಾ ವಿತರಕರ ಸಮ್ಮೇಳನದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪತ್ರಿಕಾ ವಿತರಕರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವುದು ಸಮ್ಮೇಳನ ಆಯೋಜನೆಯ ಉದ್ದೇಶವಾಗಿದೆ. ಪತ್ರಿಕಾ ವಿತರಕರ ಕ್ಷೇಮಾಭಿವೃದ್ದಿಗೆ 5 ಕೋಟಿ ರೂ. ಮೀಸಲಿಡಬೇಕು ಎಂಬ ಬೇಡಿಕೆ ಸೇರಿದಂತೆ ವಿವಿಧ ಹಕ್ಕೊತ್ತಾಯಗಳ ಮನವಿ ಪತ್ರವನ್ನು ಸಿಎಂಗೆ ಸಲ್ಲಿಸಲಾಗುವುದು ಎಂದರು.

ಇದೇ ವೇಳೆ ಪತ್ರಿಕಾ ಒಕ್ಕೂಟದ ಸದಸ್ಯರಿಗೆ ಅಂಬೇಡ್ಕರ್ ಸಹಾಯಹಸ್ತ ಯೋಜನೆಯ ಸ್ಮಾರ್ಟ್ ಕಾರ್ಡ್ ವಿತರಿಸಲಾಯಿತು. ಆ.28 ರಂದು ಮೈಸೂರಿನಲ್ಲಿ ನಡೆಯಲಿರುವ 5ನೇ ರಾಜ್ಯಮಟ್ಟದ ಪತ್ರಿಕಾ ವಿತರಕರ ಸಮ್ಮೇಳನದ ಆಹ್ವಾನಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು.

ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಅಕ್ಷಯ್, ಗೌರವಾಧ್ಯಕ್ಷ ಚಂದ್ರಶೇಖರ್, ಸಹಕಾರ್ಯದರ್ಶಿ ಎಲ್.ಶಿವಲಿಂಗಮೂರ್ತಿ, ಉಪಾಧ್ಯಕ್ಷ ಶೇಖರಪ್ಪ, ಮಹದೇವು, ನಿರ್ದೇಶಕರಾದ ಲಿಂಗಪ್ಪ, ಸಾಗರ್, ಮಣಿಕಂಠ, ಸಿದ್ದರಾಜು. ಮಂಜುನಾಥ್ ಆರಾಧ್ಯ, ಪತ್ರಿಕಾ ಕಾರ್ಯದರ್ಶಿ ಹರವೆಮಹೇಶ್ ಸೇರಿದಂತೆ ಸಂಘದ ಸದಸ್ಯರು ಹಾಜರಿದ್ದರು.

ಗಣಪತಿ ಬಪ್ಪ ಮೋರಿಯಾ...

ಚಾ.ನಗರದಲ್ಲಿ ವೈವಿಧ್ಯಮಯ ಗಣಪತಿ ಖರೀದಿ ಜೋರು

ಮಾರುಕಟ್ಟೆಯಲ್ಲಿ 100 ರೂ.ನಿಂದ ಹಿಡಿದು 18 ಸಾವಿರ ರೂ.ಗಳವರೆಗೆ ಗಣಪನ ಮಾರಾಟ

ಸಿದ್ದಲಿಂಗಸ್ವಾಮಿ



ಚಾಮರಾಜನಗರದ ರಥಬೀದಿಯಲ್ಲಿ ಈ ಬಾರಿ ಬ್ರಹ್ಮೋಸ್ ಮಾದರಿಯ ಗಣಪತಿ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗುತ್ತಿದೆ. ಆದರೆ, ಗಣೇಶ ಮೂರ್ತಿ ತಯಾರಿಕೆ ಪೂರ್ಣಗೊಳ್ಳದ ಹಿನ್ನೆಲೆಯಲ್ಲಿ ಹಬ್ಬದ ದಿನದಂದು ಮಧ್ಯಾಹ್ನ 12 ಗಂಟೆಗೆ ಚಿಕ್ಕ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುವುದು. ಸೆ. 5ರ ನಂತರ ದೊಡ್ಡ ಗಣಪತಿ ಮೂರ್ತಿ ಪ್ರತಿಷ್ಠಾಪಿಸಲಾಗುವುದು. ಅಲ್ಲದೇ ಈ ಬಾರಿ ಸರ್ಕಾರ ಜಿಲ್ಲಾ ಕೇಂದ್ರದಲ್ಲಿ ದಸರಾ ಕಾರ್ಯಕ್ರಮ ರದ್ದುಗೊಳಿಸಿರುವುದರಿಂದ ಅದ್ದೂರಿಯಾಗಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲು ಚಿಂತನೆ ನಡೆಸಲಾಗಿದೆ.

–ಶಿವಣ್ಣ, ಅಧ್ಯಕ್ಷರು, ಶ್ರೀವಿದ್ಯಾಗಣಪತಿ ಮಂಡಳಿ.

ಚಾಮರಾಜನಗರ, ಆ.24– ಜಿಲ್ಲಾದ್ಯಂತ ಗೌರಿ– ಗಣೇಶ ಹಬ್ಬವನ್ನು ಅದ್ದೂರಿಯಾಗಿ ಆಚರಿಸಲು ನಗರ, ಪಟ್ಟಣ ಪ್ರದೇಶ ಸೇರಿದಂತೆ ಗ್ರಾಮೀಣ ಭಾಗದಲ್ಲಿ ಸಕಲ ಸಿದ್ಧತೆ ಜೋರಾಗಿದ್ದು, ಪ್ರತಿ ವರ್ಷದಂತೆ ಈ ಬಾರಿಯು ವಿಜೃಂಭಣೆಯಿಂದ ಹಬ್ಬ ನಡೆಯುವುದು ನಿಚ್ಚಳವಾಗಿದೆ.

ಜಿಲ್ಲೆಯಾದ್ಯಂತ ಗೌರಿ–ಗಣೇಶ ಹಬ್ಬವನ್ನು ಅದ್ದೂರಿಯಿಂದ ಆಚರಿಸಲು ಜನರು ಸಿದ್ಧರಾಗಿದ್ದಾರೆ. ಗಣೇಶ ವಿಗ್ರಹ ತಯಾರಕರು, ವ್ಯಾಪಾರಿಗಳು ಲಾಭದ ನಿರೀಕ್ಷೆಯಲ್ಲಿದ್ದಾರೆ.

ನಗರ, ಪಟ್ಟಣ ಪ್ರದೇಶಗಳಲ್ಲಿ ಗೌರಿ–ಗಣೇಶ ವಿಗ್ರಹಗಳ ಮಾರಾಟ ಮಳಿಗೆಗಳು ತಲೆ ಎತ್ತಿವೆ. ಗಣೇಶೋತ್ಸವ ಸಂಘಟಕರು ನೇರವಾಗಿ ತಯಾರಕರನ್ನು ಭೇಟಿ ಮಾಡಿ ಖರೀದಿಗೆ ಮುಂದಾಗಿದ್ದಾರೆ. ಪ್ರತಿ ಬಾರಿಯಂತೆ ಈ ವರ್ಷ ಮೂರ್ತಿಗಳಿಗೆ ಬೇಡಿಕೆ ಹೆಚ್ಚಳವಾಗಿದೆ ಎಂದು ತಯಾರಕರು ಹೇಳುತ್ತಿದ್ದಾರೆ. ಅದರಂತೆ ವ್ಯಾಪಾರಿಗಳು ಕೂಡ ಉತ್ತಮ ವ್ಯಾಪಾರ ಆಗುವ ನಿರೀಕ್ಷೆಯಲ್ಲಿದ್ದಾರೆ. 100 ರೂ.ನಿಂದ ಹಿಡಿದು 18 ಸಾವಿರದ ಬೆಲೆಯ ಮೂರ್ತಿಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ.

ಅದ್ದೂರಿ ಆಚರಣೆಗೆ ಸಿದ್ಧತೆ: ನಗರ, ಪಟ್ಟಣ ಪ್ರದೇಶ ಸೇರಿದಂತೆ ಜಿಲ್ಲೆಯ ಗ್ರಾಮೀಣ ಭಾಗದಲ್ಲೂ ಗೌರಿ–ಗಣೇಶ ಹಬ್ಬವನ್ನು ಅದ್ದೂರಿಯಾಗಿ ಆಚರಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಗಣೇಶನ ಮೂರ್ತಿ ಪ್ರತಿಷ್ಠಾಪನೆ ಮಾಡಲು ಚಪ್ಪರ ಹಾಕಿ, ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತಿದೆ. ವಿವಿಧ ವಿನ್ಯಾಸದ ಗಣೇಶನ ಮೂರ್ತಿ ಪ್ರತಿಷ್ಠಾಪನೆಗೆ ಜನರು ಮುಂದಾಗಿದ್ದಾರೆ.

ವ್ಯಾಪಾರ ಭರಾಟೆ ಜೋರು: ಗಣೇಶ ತಯಾರಕರು ಹಾಗೂ ಮಾರಾಟಗಾರರು ತಾತ್ಕಾಲಿಕ ಮಳಿಗೆಗಳನ್ನು ಕಟ್ಟಿಕೊಂಡು ವಿಗ್ರಹಗಳ ಮಾರಾಟದಲ್ಲಿ ತೊಡಗಿದ್ದಾರೆ. ಮನೆಗಳಲ್ಲಿ ಗೌರಿ– ಗಣೇಶ ವಿಗ್ರಹ ಪ್ರತಿಷ್ಠಾಪಿಸಿ, ಪೂಜಿಸುವವರು, ಸಾರ್ವಜನಿಕ ಗಣೇಶೋತ್ಸವ ಆಯೋಜಿಸುವ ಸಂಘಟಕರು ಮಳಿಗೆಗಳಿಗೆ ತೆರಳಿ ವ್ಯಾಪಾರಕ್ಕೆ ಮುಂದಾಗಿದ್ದಾರೆ. ಉಳಿದಂತೆ ಹಬ್ಬದ ವಿಶೇಷವಾಗಿ ಹೊಸ ಬಟ್ಟೆ ಖರೀದಿಸಲು ಜನರು ಬಟ್ಟೆ ಅಂಗಡಿಗಳಿಗೆ ಲಗ್ಗೆ ಇಡುತ್ತಿದ್ದಾರೆ. ಅಲ್ಲದೇ, ಹಣ್ಣು ಹೂ, ತರಕಾರಿ ವ್ಯಾಪಾರವೂ ಬಲು ಜೋರಾಗಿಯೇ ನಡೆಯುತ್ತಿದೆ.

ಎರಡು ದಿನ ಆಚರಣೆ: ಕಳೆದ ಬಾರಿ ಗೌರಿ ಮತ್ತು ಗಣೇಶನ ಹಬ್ಬ ಒಂದೇ ದಿನ ಆಚರಿಸಲಾಗಿತ್ತು. ಈ ಬಾರಿ ಎರಡು ದಿನಗಳ ಕಾಲ ಹಬ್ಬ ಆಚರಣೆ ಮಾಡಲಾಗುತ್ತಿದ್ದು, ಆ.26ರ ಮಂಗಳವಾರ ಗೌರಿ ಹಬ್ಬ ಹಾಗೂ ಆ.27ರ ಬುಧವಾರ ಗಣೇಶ ಚತುರ್ಥಿ ಆಚರಿಸಲಾಗುತ್ತಿದ್ದು, ಹಬ್ಬ ಎರಡು, ಮೂರು ದಿನಗಳು ಇರುವಾಗಲೇ ಗಣೇಶ, ಗೌರಿ ಮೂರ್ತಿಗಳ ವ್ಯಾಪಾರ ಜೋರಾಗಿ ನಡೆಯುತ್ತಿದೆ.

ಗಣೇಶ ಮೂರ್ತಿ ಮಾರಾಟದ ಅಂಗಡಿಗಳ ಮುಂದೆ ಹೆಚ್ಚು ಗ್ರಾಹಕರು ಕಂಡು ಬರುತ್ತಿದ್ದು, ಮಕ್ಕಳು, ಮಹಿಳೆಯರು ಮತ್ತು ದೊಡ್ಡವರು ಅಂಗಡಿಗಳಿಗೆ ಬಂದು, ಮೂರ್ತಿಗಳನ್ನು ಖರೀದಿಸುತ್ತಿರುವುದು ಸಾಮಾನ್ಯವಾಗಿದೆ.

ನಗರದಲ್ಲಿ ಚಾಮರಾಜೇಶ್ವರಸ್ವಾಮಿ ದೇವಾಲಯದ ಬಳಿ ಎಂಟು ಮಾರಾಟ ಮಳಿಗೆಗಳು ಇವೆ. ಅಗ್ರಹಾರ ಬೀದಿಯಲ್ಲಿರುವ ಪಟ್ಟಾಭಿ ರಾಮಮಂದಿರದಲ್ಲೂ ಗಣೇಶ, ಗೌರಿ ಮೂರ್ತಿಗಳನ್ನು ಮಾರಾಟಕ್ಕೆ ಇಡಲಾಗಿದೆ. ಪಿಒಪಿ ಗಣೇಶ, ಗೌರಿ ಮೂರ್ತಿಗಳಿಗೆ ಜಿಲ್ಲಾಡಳಿತ ನಿರ್ಬಂಧ ವಿಧಿಸಿರುವುದರಿಂದ ಪಿಒಪಿ ಮೂರ್ತಿಗಳು ಎಲ್ಲೂ ಕಾಣಿಸಲಿಲ್ಲ.

ಚಾ.ನಗರದಲ್ಲಿ ಬ್ರಹ್ಮೋಸ್ ಗಣಪತಿ: ಶ್ರೀವಿದ್ಯಾಗಣಪತಿ ಮಂಡಳಿಯಿಂದ ಈ ಬಾರಿ ಬ್ರಹ್ಮೋಸ್ ಗಣಪತಿ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗುತ್ತಿದೆ.

ಆಪರೇಷನ್ ಸಿಂಧೂರ್ ಕಲ್ಪನೆಯಡಿ ಸುಮಾರು 7 ಅಡಿ ಎತ್ತರದ ರ್‍ಯಾಕೆಟ್ ಬ್ರಹ್ಮೋಸ್ ಮೇಲೆ ವಿರಮಿಸುತ್ತಿರುವ ಗಣೇಶನ ಮೂರ್ತಿಯನ್ನು ಟಿ.ನರಸೀಪುರ ತಾಲೂಕಿನ ಹಲಗೋಡಿನ ಶಿಲ್ಪಿ ತಯಾರಿಸುತ್ತಿದ್ದಾರೆ.

ಶ್ರೀವಿದ್ಯಾ ಗಣಪತಿ ಮಂಡಳಿಯ 63ನೇ ವರ್ಷದ ಗಣಪತಿ ಪ್ರತಿಷ್ಠಾಪನೆಯನ್ನು ಅದ್ದೂರಿಯಾಗಿ ನಡೆಸಲು ಸಿದ್ಧತೆ ಪೂರ್ಣಗೊಂಡಿದ್ದು, ನಗರದ ರಥದ ಬೀದಿಯಲ್ಲಿ ಬೃಹತ್ ಗಾತ್ರದ ಗಣಪತಿ ಪ್ರತಿಷ್ಠಾಪನೆ ಮಾಡಿ, ಹಲವು ದಿನಗಳ ಕಾಲ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅದ್ದೂರಿಯಾಗಿ ಗಣೇಶೋತ್ಸವ ಆಚರಿಸಲಾಗುತ್ತದೆ. ಅದರಂತೆಯೇ ಈ ವರ್ಷವೂ ಕೂಡ ಶ್ರೀವಿದ್ಯಾ ಗಣಪತಿ ಮಂಡಳಿ ವತಿಯಿಂದ ಪ್ರತಿಷ್ಠಾಪನೆ ಮಾಡಲಾಗುತ್ತಿದೆ.

ಆರೋಗ್ಯ ಶಿಬಿರದಲ್ಲಿ 37 ಮಂದಿ ರಕ್ತದಾನ

ಚಾಮರಾಜನಗರ: ವಿವಿಧ ಸಂಘಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಉಚಿತ ಸಮಗ್ರ ಆರೋಗ್ಯ ತಪಾಸಣೆ ಹಾಗೂ ಸ್ವಯಂಪ್ರೇರಿತ ರಕ್ತದಾನ ಶಿಬಿರದಲ್ಲಿ 37 ಮಂದಿ ರಕ್ತದಾನ ಮಾಡಿದರು. ನಗರದ ಗಾಳೀಪುರ ಮುಖ್ಯ ರಸ್ತೆಯಲ್ಲಿರುವ ಜೆ.ಕೆ.ಫಂಕ್ಷನ್ ಹಾಲ್‌ನಲ್ಲಿ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾಡಳಿತ, ಜಿ.ಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ರಾಷ್ಟ್ರೀಯ ಕ್ಷಯ ನಿರ್ಮೂಲನಾ ಕಾರ್ಯಕ್ರಮ, ರೆಹ್ಬರ್ ಅಸೋಸಿಯೇಷನ್, ದ್ವಿಚಕ್ರ ವಾಹನ ಮೆಕ್ಯಾನಿಕ್, ಆಟೋಮೋಟಿವ್ ಅಸೋಸಿಯೇಷನ್ ವತಿಯಿಂದ ಆರೋಗ್ಯ ತಪಾಸಣೆ ಹಾಗೂ ಸ್ವಯಂಪ್ರೇರಿತ ರಕ್ತದಾನ ಶಿಬಿರ ಬಹಳ ಯಶಸ್ವಿಯಾಗಿ ನಡೆಯಿತು.

ಮೈಸೂರು ಮಿತ್ರ

ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ಕ್ರೀಡಾಕೂಟ ಸಹಕಾರಿ

ಬಿಇಓ ಎಸ್.ಸಿ.ಶಿವಮೂರ್ತಿ



ಕ್ರೀಡಾಕೂಟವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿ.ಶಿವಮೂರ್ತಿ ಉದ್ಘಾಟಿಸಿದರು.

ತಿ.ನರಸೀಪುರ, ಆ.24– ವಿದ್ಯಾರ್ಥಿಗಳು ನಿರಂತರವಾಗಿ ಕ್ರೀಡಾಭ್ಯಾಸ ಮತ್ತು ಕ್ರೀಡಾಕೂಟಗಳಲ್ಲಿ ಭಾಗವಹಿಸುವುದರಿಂದ ದೇಹವು ಸದೃಢಗೊಳ್ಳುವುದಲ್ಲದೆ, ಸದೃಢ ಮನಸ್ಸನ್ನು ಹೊಂದಬಹುದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿ.ಶಿವಮೂರ್ತಿ ತಿಳಿಸಿದರು.

ಪಟ್ಟಣದ ವಿದ್ಯೋದಯ ಕಾಲೇಜು ಆವರಣದಲ್ಲಿ ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜು ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟವನ್ನು ಕ್ರೀಡಾ ಧ್ವಜಾರೋಹಣದ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಬೇಕು. ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ಕ್ರೀಡಾಕೂಟಗಳು ಸಹಕಾರಿಯಾಗಲಿದೆ ಎಂದರು.

ಶಿಕ್ಷಣ ಮತ್ತು ಕ್ರೀಡಾ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳು ಸಾಧನೆ ಮಾಡಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಪ್ರಾಥಮಿಕ, ಪ್ರೌಢ ಶಿಕ್ಷಣ, ಪದವಿಪೂರ್ವ ಹಾಗೂ ಪದವಿ ವ್ಯಾಸಂಗದ ಅವಧಿಯಲ್ಲಿ ಕ್ರೀಡಾಕೂಟಗಳನ್ನು ಪ್ರತಿ ವರ್ಷ ಆಯೋಜಿಸಲಾಗುತ್ತಿದೆ. ಹಳ್ಳಿಗಾಡಿನ ಪ್ರತಿಭಾನ್ವಿತ ವಿದ್ಯಾರ್ಥಿಗಳು ಕ್ರೀಡಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಭವಿಷ್ಯದಲ್ಲಿ ಬದುಕನ್ನು ಸಮರ್ಥವಾಗಿ ನಿಭಾಯಿಸಲು ಏಳುಬೀಳುಗಳನ್ನು ಎದುರಿಸಲು ಕ್ರೀಡೆ ಸಹಕಾರಿಯಾಗಲಿದೆ ಎಂದರು.

ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಿ.ಸಿ.ಲಿಂಗರಾಜು ಮಾತನಾಡಿ, ಪಟ್ಟಣದಲ್ಲಿ ತಾಲೂಕು ಮಟ್ಟದ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟವನ್ನು 2 ದಿನಗಳ ಕಾಲ ಆಯೋಜಿಸಲಾಗಿದೆ. ವಿದ್ಯಾರ್ಥಿಗಳು ನಿಬಂಧನೆ ಹಾಗೂ ನಿಯಮಗಳ ಅನುಸಾರ ಪಂದ್ಯಗಳಲ್ಲಿ ಭಾಗವಹಿಸಬೇಕು. ಕ್ರೀಡಾಕೂಟದಲ್ಲಿ ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದರು.

ನಿವೃತ್ತ ಪ್ರಾಂಶುಪಾಲ ಸೋಮಣ್ಣ, ದೈಹಿಕ ಶಿಕ್ಷಣ ಪರೀಕ್ಷಕ ಮರಿಸ್ವಾಮಿ, ಉಪನ್ಯಾಸಕರಾದ ಸೋಸಲೆ ಎನ್. ಜವರಯ್ಯ, ಪುಟ್ಟರಾಜು, ಸಿದ್ದಪ್ಪ, ಮಂಜುನಾಥ, ಜಯಪ್ಪ, ಸಿದ್ದೇಶ, ಮಲ್ಲೇಶ್, ಮಹದೇವ, ಸುನೀಲ್ ಜಸ್ಟಿನ್, ಸುಮಿತ್ರಮ್ಮ, ಶಿವರಂಜಿನಿ, ವಿದ್ಯಾಲಕ್ಷ್ಮಿ, ಜಮುನಾ, ರಘು, ಶಂಕರ್, ಮೇಘ, ರೂಪಶ್ರೀ, ಶುಭಮಣಿ, ನಂದಿನಿ, ನಂಜಮಣಿ, ರಮ್ಯಾ ಇತರರಿದ್ದರು.

ಕಪ್ಪುಪಟ್ಟಿ ಧರಿಸಿದ ದೈಹಿಕ ಶಿಕ್ಷಕರು

ತಿ.ನರಸೀಪುರ: ಪಟ್ಟಣದಲ್ಲಿ ನಡೆದ ಕ್ರೀಡಾಕೂಟದಲ್ಲಿ ಪದವಿ ಪೂರ್ವ ಕಾಲೇಜುಗಳಿಗೆ ದೈಹಿಕ ಶಿಕ್ಷಣ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳದ ಸರ್ಕಾರದ ನೀತಿ ಖಂಡಿಸಿ ದೈಹಿಕ ಶಿಕ್ಷಕರು ತೋಳಿಗೆ ಕಪ್ಪು ಪಟ್ಟಿ ಧರಿಸಿ ಕಾರ್ಯ ನಿರ್ವಹಿಸಿದರು.

ಖೇಲೋ ಇಂಡಿಯಾ, ಫಿಟ್ ಇಂಡಿಯಾದಂತಹ ಕಾರ್ಯಕ್ರಮಗಳು ಯಶಸ್ವಿಯಾಗಬೇಕಾದರೆ ದೈಹಿಕ ಶಿಕ್ಷಣ ಕ್ಷೇತ್ರವನ್ನು ಬಲಗೊಳಿಸಬೇಕು. ಇದರಿಂದ ಸದೃಢ ವಿದ್ಯಾರ್ಥಿಗಳನ್ನು ಬೆಳೆಸಲು ಸಾಧ್ಯವಾಗುತ್ತದೆ. ಭವಿಷ್ಯದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಮಾನವ ಸಂಪನ್ಮೂಲವಾಗಿ ರೂಪುಗೊಳ್ಳುತ್ತಾನೆ. ಪದವಿ ಪೂರ್ವ ವಿಭಾಗದಲ್ಲಿ ದೈಹಿಕ ಶಿಕ್ಷಣ ಉಪನ್ಯಾಸಕರನ್ನು ಕಡ್ಡಾಯವಾಗಿ ನೇಮಕ ಮಾಡಿಕೊಳ್ಳಬೇಕೆಂದು ಸರ್ಕಾರವನ್ನು ದೈಹಿಕ ಶಿಕ್ಷಕರು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಸ್ನಾತಕೋತ್ತರ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಸಿದ್ದೇಶ್ವರ ಮಾತನಾಡಿ, ಶಿಕ್ಷಣದ ಮೂಲ ಉದ್ದೇಶ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯಾಗಿದೆ. ಸರ್ಕಾರ ಪ್ರಾಥಮಿಕ ಶಿಕ್ಷಣದಿಂದ ಪದವಿ ದೈಹಿಕ ಶಿಕ್ಷಣವನ್ನು ಪರಿಗಣಿಸಿ ಅಂಗೀಕರಿಸಿದೆ. ಆದರೆ ದೈಹಿಕ ಶಿಕ್ಷಣ ಕ್ಷೇತ್ರದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಾಗ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಹೀಗಾಗಿ ಬಹುತೇಕ ಶಿಕ್ಷಣದ ಮೂಲ ಉದ್ದೇಶ ಸಾಧಿತವಾಗುತ್ತಿಲ್ಲ. ದೈಹಿಕ ಶಿಕ್ಷಣ ಶಿಕ್ಷಣದ ಅವಿಭಾಜ್ಯ ಅಂಗ ಎಂದು ಅಂಗೀಕರಿಸಿರುವ ಸರ್ಕಾರಗಳು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಪದವಿ ಹಂತದವರೆಗೆ ದೈಹಿಕ ಶಿಕ್ಷಣ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದು ಮತ್ತು ಕ್ರೀಡಾ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಆಗ್ರಹಿಸಿದರು.

ಶಾಸಕ ಅನಿಲ್‌ಗೆ ಸಚಿವ ಸ್ಥಾನ ನೀಡಲು ಒತ್ತಾಯ



ಗಣೇಶ್ ಆಚಾರ್

ಹೆಚ್.ಡಿ.ಕೋಟೆ, ಆ.24– ಕ್ಷೇತ್ರದ ಜನಪ್ರಿಯ ಶಾಸಕ ಅನಿಲ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಕೆಡಿಪಿ ಸದಸ್ಯ ಹಾಗೂ ವಿಶ್ವಕರ್ಮ ಮುಖಂಡ ಗಣೇಶ್ ಆಚಾರ್ ಒತ್ತಾಯಿಸಿದ್ದಾರೆ.

ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಸತತ 2ನೇ ಬಾರಿಗೆ ಅತ್ಯಧಿಕ ಮತಗಳಿಂದ ಜಯಗಳಿಸಿರುವ ಶಾಸಕ ಅನಿಲ್ ಅವರು ಕ್ಷೇತ್ರದ ಜನರ ಕುಂದು ಕೊರತೆ ಆಲಿಸಿ, ಕಷ್ಟ ಸುಖಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದಾರೆ. ಅಲ್ಲದೇ ಕ್ಷೇತ್ರದ ಸಮಸ್ಯೆಗಳನ್ನು ವಿಧಾನಸಭೆ ಕಲಾಪದಲ್ಲಿ ಪ್ರಸ್ತಾಪಿಸಿ, ಚರ್ಚೆ ನಡೆಸಿ ಅವುಗಳಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಂಡಿದ್ದಾರೆ. ಸರ್ಕಾರದಿಂದ ಹೆಚ್ಚು ಅನುದಾನ ತಂದು ತಾಲೂಕಿನ ಸಮಗ್ರ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಿದ್ದಾರೆ. ತಾಲೂಕಿನಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡು ಪ್ರತಿಯೊಂದು ಚುನಾವಣೆಯಲ್ಲೂ ಗೆಲುವು ಸಾಧಿಸುವ ಮೂಲಕ ಕೋಟೆಯನ್ನು ಕಾಂಗ್ರೆಸ್ ಪಕ್ಷದ ಭದ್ರಕೋಟೆಯನ್ನಾಗಿ ರೂಪಿಸಿದ್ದಾರೆ. ಆದ್ದರಿಂದ ಹಿಂದುಳಿದ ತಾಲೂಕಾಗಿರುವ ಕೋಟೆ ಅಭಿವೃದ್ಧಿಗಾಗಿ ಶಾಸಕ ಅನಿಲ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಶಾಸಕ ಅನಿಲ್ ಅವರು ತಮ್ಮ ತಂದೆ ಮಾಜಿ ಶಾಸಕ ದಿ.ಚಿಕ್ಕಮಾದು, ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುವ ಮೂಲಕ ಕ್ಷೇತ್ರದ ಜನರ ವಿಶ್ವಾಸಗಳಿಸಿದ್ದಾರೆ. ಕ್ಷೇತ್ರಕ್ಕೆ ಇದುವರೆಗೆ ಒಂದು ಬಾರಿ ಮಾತ್ರ ಸಚಿವ ಸ್ಥಾನ ನೀಡಲಾಗಿದೆ. ಆದ್ದರಿಂದ ಈ ಬಾರಿ ಸಚಿವ ಸ್ಥಾನ ದೊರೆಯುವ ನಿರೀಕ್ಷೆಯಲ್ಲಿ ಕಾರ್ಯಕರ್ತರು, ಮುಖಂಡರಿದ್ದು, ಕೋಟೆ ಹಾಗೂ ಸರಗೂರು ಅವಳಿ ತಾಲೂಕಿನ ಅಭಿವೃದ್ಧಿಗಾಗಿ ಶಾಸಕ ಅನಿಲ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಆಗ್ರಹಿಸಿದರು.

ಹಳೇ ವಿದ್ಯಾರ್ಥಿಗಳು ಸರ್ಕಾರಿ ಶಾಲೆ ಉಳಿವಿಗೆ ಶ್ರಮಿಸಿ

ಶಾಲಾ ಶಿಕ್ಷಣ ಇಲಾಖೆ ವಿಷಯ ಪರಿವೀಕ್ಷಕಿ ಮೀನಾಕುಮಾರಿ ಪಾಟೀಲ್



ಪ್ರವಾಸಿ ಮಂದಿರದಲ್ಲಿ ಮೀನಾಕುಮಾರಿ ಪಾಟೀಲ್ ಅವರನ್ನು ಸನ್ಮಾನಿಸಲಾಯಿತು.

ಕೆ.ಆರ್.ನಗರ, ಆ.24– ಹಳೇ ವಿದ್ಯಾರ್ಥಿಗಳು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವ ಮೂಲಕ ಸರ್ಕಾರಿ ಶಾಲೆ ಉಳಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆ, ವಿಷಯ ಪರಿವೀಕ್ಷಕರಾದ ಮೀನಾಕುಮಾರಿ ಪಾಟೀಲ್ ತಿಳಿಸಿದರು.

ತಾಲೂಕಿನ ಮಾವತ್ತೂರು ಸರ್ಕಾರಿ ಪ್ರೌಢಶಾಲೆಯ ಹಳೇ ವಿದ್ಯಾರ್ಥಿ ಸಂಘದಿಂದ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸರಳವಾಗಿ ನಡೆದ ಕಾರ್ಯಕ್ರಮದಲ್ಲಿ ಗುರುವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕಲಿತ ವಿದ್ಯೆ ಎಂದಿಗೂ ಮರೆಯಲು ಸಾಧ್ಯವಿಲ್ಲ. ಹೀಗಾಗಿ ತಮ್ಮ ಬಾಲ್ಯದ ನೆನಪಿಗಾಗಿ ಸರ್ಕಾರಿ ಶಾಲೆ ಉಳಿಸಲು ಶ್ರಮಿಸಬೇಕು. ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿರುವ ಹಲವು ವಿದ್ಯಾರ್ಥಿಗಳು ಅತ್ಯುನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ, ವಿಜ್ಞಾನಿಗಳಾಗಿದ್ದಾರೆ ಎಂದ ಅವರು ಅಕ್ಷರ, ಜ್ಞಾನ ನೀಡಿದ ಶಿಕ್ಷಕರನ್ನು ನೆನಪಿಸಿಕೊಂಡು ಗೌರವ ನೀಡಿದಂತೆ ನೀವು ಓದಿದ ಶಾಲೆಗಳ ಕಡೆಯೂ ಗಮನ ಹರಿಸಬೇಕು ಎಂದರು.

ಹಳೇ ವಿದ್ಯಾರ್ಥಿ, ರಾಷ್ಟ್ರೀಯ ಮಾನವ ಹಕ್ಕುಗಳ ತನಿಖಾ ಸಮಿತಿ ಜಿಲ್ಲಾ ಘಟಕದ ಅಧ್ಯಕ್ಷ ಪಿ.ಮಹದೇವ್ ಮಾತನಾಡಿ, ಮೀನಾಕುಮಾರಿ ಪಾಟೀಲ್ ಅವರು ಮಾವತ್ತೂರು ಸರ್ಕಾರಿ ಪ್ರೌಢಶಾಲೆಯಲ್ಲಿ 15ಕ್ಕೂ ಹೆಚ್ಚು ವರ್ಷ ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಇಲ್ಲಿಂದ ವರ್ಗಾವಣೆಗೊಂಡ ನಂತರ, ಕೆ.ಆರ್.ನಗರ, ಮೈಸೂರು ಮತ್ತು ಬಿಳಿಕೆರೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸುದೀರ್ಘ 37 ವರ್ಷ ಸೇವೆ ಸಲ್ಲಿಸಿದ ಇವರು, ಶಾಲಾ ಶಿಕ್ಷಣ ಇಲಾಖೆ, ಉಪನಿರ್ದೇಶಕರ ಕಚೇರಿ ಮೈಸೂರು ಇಲ್ಲಿನ ವಿಷಯ ಪರಿವೀಕ್ಷಕರ ಹುದ್ದೆಗೆ ಮುಂಬಡ್ತಿ ಹೊಂದಿದ್ದಾರೆ. ನಮ್ಮ ಗುರುಗಳು (ಗ್ರೂಪ್ 'ಬಿ' ವೃಂದದ ಹುದ್ದೆಗೆ) ಅಧಿಕಾರಿಗಳಾಗಿ ಮುಂಬಡ್ತಿ ಹೊಂದಿರುವುದು ಸಂತೋಷವಾಗಿದೆ. ಇದರಿಂದ ಮಾರಗೌಡನಹಳ್ಳಿ ಹಳೇ ವಿದ್ಯಾರ್ಥಿಗಳು ಒಟ್ಟಿಗೆ ಸೇರಿ ಗುರುವಂದನೆ ಸಲ್ಲಿಸಿದ್ದೇವೆ ಎಂದರು.

ತಾಲೂಕಿನ ಮಾವತ್ತೂರು, ಮಾರಗೌಡನಹಳ್ಳಿ ಗ್ರಾಮದ ಹಳೇ ವಿದ್ಯಾರ್ಥಿಗಳಾದ ಪಿಡಿಓ ಆನಂದ, ಗ್ರಾಪಂ ಸದಸ್ಯ ಕೆ.ಸ್ವಾಮಿ, ಉಪನ್ಯಾಸಕ ರವಿ, ದೇವರಾಜ ಶೆಟ್ಟಿ ಮಾತನಾಡಿದರು. ಜಿಲ್ಲಾ ರೈತ ಸಂಘ ಮಹಿಳಾ ಘಟಕದ ಅಧ್ಯಕ್ಷೆ ನೇತ್ರಾವತಿ, ಡೇರಿ ಕಾರ್ಯದರ್ಶಿ ತೀರ್ಥೇಶ್, ಶಿಕ್ಷಕ ಮುಕ್ಕಣ್ಣ, ವೆಂಕಟರಾಜು, ಬಸವರಾಜು, ಜಯರಾಮ, ಚಾಮರಾಜು ಸೇರಿದಂತೆ ಹಳೇ ವಿದ್ಯಾರ್ಥಿಗಳಿದ್ದರು.

ಶ್ರೀಲಕ್ಷ್ಮಿಕಾಂತಸ್ವಾಮಿಗೆ ಸಿಂಹ ಕವಚ ಕಾಣಿಕೆ



ಶ್ರೀಲಕ್ಷ್ಮಿಕಾಂತಸ್ವಾಮಿ ದೇವಸ್ಥಾನಕ್ಕೆ ಸಿಂಹ ಕವಚ ಕಾಣಿಕೆ ನೀಡಲಾಯಿತು.

ನಂಜನಗೂಡು, ಆ.24– ವಾಣಿವಿಲಾಸ ಸನ್ನಿಧಾನದ ಮೈಸೂರು ರಾಜಮನೆತನದ ಕುಟುಂಬಸ್ಥರು ತಾಲೂಕಿನ ಕಳಲೆ ಗ್ರಾಮದ ಐತಿಹಾಸಿಕ ದೇವಾಲಯ ಶ್ರೀಲಕ್ಷ್ಮಿಕಾಂತಸ್ವಾಮಿ ದೇವಸ್ಥಾನಕ್ಕೆ ಸಿಂಹ ಕವಚವನ್ನು ಕಾಣಿಕೆ ನೀಡಿದರು.

ಶನಿವಾರ ದೇವಸ್ಥಾನಕ್ಕೆ ಆಗಮಿಸಿದ್ದ ದಳವಾಯಿ ಕುಟುಂಬಸ್ಥರಾದ ಇಂದುಮತಿ ಮತ್ತು ಪತಿ ಶ್ರೀಕಂಠರಾಜೇ ಅರಸ್ ಹಾಗೂ ಮೀರಾ ಬಾಗಲ್ ಅವರು ದೇವಾಲಯದಲ್ಲಿ ನಡೆದ ವಿವಿಧ ಪೂಜಾ ಕೈಂಕರ್ಯಗಳಲ್ಲಿ ಭಾಗವಹಿಸಿ ದೇವರ ಉತ್ಸವಕ್ಕಾಗಿ ಆಕರ್ಷಕ ಸಿಂಹ ಕವಚ ಹಾಗೂ ಅದಕ್ಕೆ ಬಳಸುವ ಸಾಗುವಾನಿ ಮರ ಕಾಣಿಕೆ ನೀಡಿ ಭಕ್ತಿ ಮೆರೆದರು.

ಶ್ರೀಕಂಠರಾಜೇ ಅರಸ್ ಮಾತನಾಡಿ, ಮೈಸೂರು ರಾಜಮನೆತನಕ್ಕೂ ಕಳಲೆ ಗ್ರಾಮದ ಶ್ರೀಲಕ್ಷ್ಮಿಕಾಂತಸ್ವಾಮಿ ದೇವಸ್ಥಾನಕ್ಕೂ ಅವಿನಾಭಾವ ಸಂಬಂಧವಿದೆ. ನಮ್ಮ ಕುಟುಂಬದ ಸದಸ್ಯೆ ಸುಧಾ ಎಂಬುವರ ಅಗಲಿಕೆಯ ಸ್ಮರಣಾರ್ಥ ಅವರ ಹೆಸರಿನಲ್ಲಿ ದೇವಾಲಯಕ್ಕೆ ಕಾಣಿಕೆ ಸಮರ್ಪಿಸಲಾಗಿದೆ ಎಂದರು.

ಈ ವೇಳೆ ದೇವಸ್ಥಾನದ ಪಾರುಪತ್ತೇದಾರ ಜಯರಾಂ ಹಾಗೂ ಹಿರಿಯ ಅರ್ಚಕ ಲಕ್ಷ್ಮಣಚಾರ್ ಪೂಜಾ ವಿಧಿವಿಧಾನಗಳನ್ನು ಶ್ರದ್ಧಾ ಭಕ್ತಿಯಿಂದ ನೆರವೇರಿಸಿ ದೇವರಿಗೆ ಅರ್ಪಿಸಿದ ಕಾಣಿಕೆಯನ್ನು ಪಡೆದುಕೊಂಡರು.

ದೇವಾಲಯದ ಪಾರುಪತ್ತೇದಾರ್ ಜಯರಾಂ ಮಾತನಾಡಿ, ಕಡೇ ಶ್ರಾವಣ ಶನಿವಾರ ಅಂಗವಾಗಿ ಶ್ರೀಲಕ್ಷ್ಮಿಕಾಂತಸ್ವಾಮಿಗೆ ವಿಶೇಷ ಬೆಣ್ಣೆ ಅಲಂಕಾರ ಮಾಡಲಾಗಿದೆ. ಅಲ್ಲದೆ ವಿವಿಧ ಬಗೆಯ ಪುಷ್ಪಾಲಂಕಾರಗಳಿಂದ ದೇವರ ವಿಗ್ರಹವನ್ನು ಸಿಂಹ ವಾಹನೋತ್ಸವದಲ್ಲಿ ಕೂರಿಸಿ ಅದಕ್ಕೆ ಕಾಣಿಕೆಯಾಗಿ ನೀಡಿದ ಸಿಂಹ ಕವಚ ಅಳವಡಿಸಿ, ವಾದ್ಯಗೋಷ್ಠಿ ಮೂಲಕ ದೇವಸ್ಥಾನದ ಪ್ರಾಂಗಣ ಹಾಗೂ ಗ್ರಾಮದಲ್ಲಿ ಮೆರವಣಿಗೆ ನಡೆಸಿ ಮಹಾ ಮಂಗಳಾರತಿ ನಡೆಸಿ ಪ್ರಸಾದ ವಿತರಣೆ ಮಾಡಲಾಗಿದೆ ಎಂದರು.

ಈ ವೇಳೆ ಅರಸು ಕುಟುಂಬದವರು, ದೇವಾಲಯದ ಅರ್ಚಕ ವೃಂದ ಮತ್ತು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಬಾಲಕರ ವಸತಿ ನಿಲಯಕ್ಕೆ ದಿನಸಿ ಸಾಮಗ್ರಿ ವಿತರಣೆ



ಚುಂಚನಕಟ್ಟೆ, ಆ.24– ಸ್ವಯಂ ಸೇವಾ ಸಂಸ್ಥೆಗಳಿಗೆ ಉಳ್ಳವರು ನೆರವು ನೀಡುವ ಮೂಲಕ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಬೇಕು ಎಂದು ಲಯನ್ಸ್ ಸಂಸ್ಥೆ ಅಧ್ಯಕ್ಷ ಜಯರಾಂ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಹೊಸೂರು ಸಮೀಪದ ಏಮ್ ಫಾರ್ ಸೇವಾ ಸಂಸ್ಥೆಯ ಬಾಲಕರ ವಸತಿ ನಿಲಯಕ್ಕೆ ಲಯನ್ಸ್ ಕ್ಲಬ್ ಆಫ್ ಮೈಸೂರು ಚಂದನ ಸಂಸ್ಥೆ ವತಿಯಿಂದ ಉಚಿತ ದಿನಸಿ ಸಾಮಗ್ರಿ ವಿತರಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಇಂದಿಗೂ ಮೂಲ ಸೌಲಭ್ಯಗಳನ್ನೇ ಕಾಣದ ಮಕ್ಕಳು ಸಾಕಷ್ಟು ಪ್ರಮಾಣದಲ್ಲಿದ್ದು, ಅಂತಹ ಮಕ್ಕಳನ್ನು ಗುರುತಿಸಿ ಸಂಸ್ಥೆಯ ಮೂಲಕ ಅವರಿಗೆ ಉಚಿತ ಊಟ, ಶಿಕ್ಷಣ, ವಸತಿ ಒದಗಿಸುತ್ತಿರುವುದು ಸಂತಸದ ಸಂಗತಿ. ಈ ಕಾರ್ಯಕ್ರಮದ ಮೂಲಕ ಸಂಸ್ಥೆ ಕಾರ್ಯಕ್ಕೆ ನಾವು ಕೈಜೋಡಿಸಿರುವುದು ಹೆಮ್ಮೆ ತಂದಿದೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಅಧ್ಯಕ್ಷರಾದ ಹೆಚ್.ಎಸ್.ಸುರೇಶ್ ಬಾಬು, ಬಿ.ಎಸ್. ಸ್ವಾಮಿ, ಜಯಂತ್, ಚಿಕ್ಕಸಿದ್ದೇಗೌಡ, ರವಿಲಿಂಗಪ್ಪ, ಮಾದೇಶ, ಹೇಮಂತ್ ಕುಮಾರ್, ಕಾರ್ಯದರ್ಶಿ ಹೆಚ್.ಎ.ರಾಘವೇಂದ್ರ, ಖಜಾಂಚಿ ಸಂಪತ್ ಕುಮಾರ್, ಸೇವಾ ಕಾರ್ಯ ಸಂಚಾಲಕ ಮಿರ್ಲೆ ಗಣೇಶ್, ಸದಸ್ಯರಾದ ಪುನೀತ್, ಲೋಹಿತ್, ಕೆ.ಆರ್.ನಗರ ಚೆಸ್ಕಾಂ ಇಂಜಿನಿಯರ್ ಸಿರಿಯೂರು ಪ್ರಸನ್ನ, ಎಲ್‌ಐಸಿ ಸಲಹೆಗಾರ ದೊಡ್ಡಕೊಪ್ಪಲು ರಮೇಶ್. ಮುಖಂಡ ಹೊಸೂರು ರಾಘವೇಂದ್ರ ಇತರರಿದ್ದರು.

ಸಂಘದ ಸದಸ್ಯರು ಸಕಾಲಕ್ಕೆ ಸಾಲ ಮರುಪಾವತಿಸಿ

ಭುವನಹಳ್ಳಿ ಪಿಎಸಿಎಸ್ ಅಧ್ಯಕ್ಷ ಬಿ.ಎಸ್.ಸೋಮೇಗೌಡ



ಭುವನಹಳ್ಳಿ ಪಿಎಸಿಎಸ್ ಅಧ್ಯಕ್ಷ ಬಿ.ಎಸ್.ಸೋಮೇಗೌಡ ಮಾತನಾಡಿದರು.

ಬೆಟ್ಟದಪುರ, ಆ.24– ಸಹಕಾರ ಸಂಘದಲ್ಲಿ ಸಾಲ ಪಡೆದ ಸದಸ್ಯರು ನಿಗದಿತ ಸಮಯಕ್ಕೆ ಮರುಪಾವತಿ ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಭುವನಹಳ್ಳಿ ಪಿಎಸಿಎಸ್ ಅಧ್ಯಕ್ಷ ಬಿ.ಎಸ್.ಸೋಮೇಗೌಡ ತಿಳಿಸಿದರು.

ಭುವನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ನಡೆದ 2024–25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ನಿಗದಿತ ಸಮಯಕ್ಕೆ ತಲುಪಿಸಿ ಷೇರುದಾರರ ಹಿತ ಕಾಯಲಾಗುತ್ತಿದೆ. ಅದರಂತೆ ಸದಸ್ಯರು ತಾವು ಪಡೆದ ಸಾಲವನ್ನು ಸುಸ್ತಿ ಮಾಡಿಕೊಳ್ಳದೆ ನಿಗದಿತ ಸಮಯದಲ್ಲಿ ಮರುಪಾವತಿಸಿ ಸಂಘದಿಂದ ದೊರೆಯುವ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಳ್ಳುವಂತೆ ತಿಳಿಸಿದರು.

ಮುಂಬರುವ ದಿನಗಳಲ್ಲಿ ಸಚಿವ ಕೆ. ವೆಂಕಟೇಶ್ ಅವರನ್ನು ಸರ್ವ ಸದಸ್ಯರ ನಿಯೋಗದೊಂದಿಗೆ ಭೇಟಿ ಮಾಡಿ ಸಹಕಾರ ಸಂಘದ ಅಭಿವೃದ್ಧಿಗೆ ಅನುದಾನ ಮಂಜೂರು ಮಾಡಿಸಲು ಮನವಿ ಮಾಡಲಾಗುವುದು ಎಂದರು.

ಸಂಘದ ಸಿಇಓ ಬಿ.ಪಿ.ಸತೀಶ್ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, 2024–25ನೇ ಸಾಲಿನಲ್ಲಿ ಸಂಘ 9.72 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ. ಸಂಘದಲ್ಲಿ ಸುಸ್ತಿ ಇರುವ ಸದಸ್ಯರಿಗೆ ತಿಳುವಳಿಕೆ ನೀಡಿ ಶೀಘ್ರ ಹಣ ಮರುಪಾವತಿಸುವಂತೆ ಸೂಚಿಸಲಾಗಿದೆ. ಅಲ್ಲದೇ ಸಂಘದಲ್ಲಿ ದೊರೆಯುವ ಸವಲತ್ತುಗಳ ಬಗ್ಗೆ ಮಾಹಿತಿ ಫಲಕದಲ್ಲಿ ತಿಳಿಸಲಾಗುತ್ತಿದೆ ಎಂದರು.

ಈ ವೇಳೆ ಸಭೆಯಲ್ಲಿದ್ದ ಸದಸ್ಯರು ಸಂಘದ ಅಭಿವೃದ್ಧಿಗೆ ಹಲವು ಸಲಹೆ ಸೂಚನೆಗಳನ್ನು ನೀಡಿದರು. ಸಂಘದ ಉಪಾಧ್ಯಕ್ಷ ಆನಂದ್, ಮಾಜಿ ಅಧ್ಯಕ್ಷ ಹರೀಶ್, ನಿರ್ದೇಶಕರಾದ ಬಿ.ಎಸ್.ದಿನೇಶ್, ಬಿ.ಆರ್.ಲೋಹಿತ, ಬಿ.ಆರ್.ನವೀನ, ಬಿ.ಟಿ.ಹಂಸರಾಜ್, ಬಿ.ಎಸ್. ಸುಮಿತ್ರ, ಹೇಮಾವತಿ, ಬಿ.ಹೆಚ್.ಸೋಮ ಶೇಖರ, ಶಂಕರ, ಬೋರಪ್ಪ ಕೆ.ಸಿ.ಮಹೇಶ್, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಪ್ರತಿನಿಧಿ ಟಿ.ಯತೀಶ್, ಸಿಬ್ಬಂದಿ ಬಿ.ಪಿ.ರಾಜಶೇಖರ್, ಬಿ.ಸಿ. ಸಂತೋಷ್ ಕುಮಾರ್, ಮಾಜಿ ಅಧ್ಯಕ್ಷ ಮಲ್ಲೇಶ್, ಮಾಜಿ ಗ್ರಾಪಂ ಅಧ್ಯಕ್ಷ ದೇವರಾಜ್, ಮುಖಂಡರಾದ ಗಿರೀಶ್, ಜಯಣ್ಣ, ಬಿ.ಎಸ್.ಚನ್ನೇಗೌಡ, ಪುಟ್ಟೇಗೌಡ ಸೇರಿದಂತೆ ಸಹಕಾರ ಸಂಘ ಗ್ರಾಮ ವ್ಯಾಪ್ತಿಯ ಸದಸ್ಯರು, ಮುಖಂಡರು ಇದ್ದರು.

ದೇವಾಲಯದ ಹುಂಡಿ ಹಣ ಕಳವು



ಮಲ್ಲುಂಡಿ, ಆ.24– ಗ್ರಾಮದ ಸಿದ್ದಪ್ಪಾಜಿ ದೇವಾಲಯದ ಹುಂಡಿಯಲ್ಲಿದ್ದ ಹಣ ಕಳವು ಮಾಡಿ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ.

ಶುಕ್ರವಾರ ರಾತ್ರಿ ದೇವಾಲಯದ ಒಳ ನುಗ್ಗಿರುವ ಕಳ್ಳರು ದೇವಾಲಯದ ಹುಂಡಿಯಲ್ಲಿದ್ದ ಹಣ ಕಳವು ಮಾಡಿದ್ದಾರೆ. ನಂತರ ಗ್ರಾಮದ ಹೊರ ವಲಯದಲ್ಲಿರುವ ಶ್ರೀಮಹದೇಶ್ವರ ದೇವಸ್ಥಾನದ ಬಾಗಿಲು ಮುರಿದಿರುವ ಕಳ್ಳರು ಅಲ್ಲಿ ಏನೂ ಸಿಗದ ಕಾರಣ ಬರೀ ಕೈಯಲ್ಲಿ ವಾಪಸ್ಸಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಎಸ್‌ಐ ಚೇತನ್ ಕುಮಾರ್, ಅಪರಾಧ ವಿಭಾಗದ ಎಸ್‌ಐ ರಾಸೂಲ್ ಪಾಗವಾಲೆ, ಸಿಬ್ಬಂದಿ ಶಿವಕುಮಾರ್ ಪರಿಶೀಲನೆ ನಡೆಸಿದರು. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಿಡ, ಮರಗಳಿಗೆ ನೀರೆರೆದು ಪೋಷಣೆ ಮಾಡಿ



ಹುಣಸೂರು, ಆ.24– ಪರಿಸರ ಉಳಿಸಲು ಸಸಿಗಳನ್ನು ನೆಟ್ಟರೆ ಸಾಲದು. ಅದನ್ನು ಪ್ರತಿಯೊಬ್ಬರೂ ಪೋಷಿಸುವ ಕೆಲಸವಾಗಬೇಕು ಎಂದು ನಗರದ ರೋಟರಿ ಕ್ಲಬ್ ಅಧ್ಯಕ್ಷ ಹೆಚ್.ಆರ್. ಕೃಷ್ಣಕುಮಾರ್ ತಿಳಿಸಿದರು.

ಹುಣಸೂರು ರೋಟರಿ ಕ್ಲಬ್, ನಂಜುಂಡೇಶ್ವರ ನರ್ಸರಿ ಸಹಯೋಗದಲ್ಲಿ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆ ಮಕ್ಕಳಿಗೆ ಸಸಿಗಳನ್ನು ವಿತರಿಸಿ ಮಾತನಾಡಿದ ಅವರು, ಪ್ರಕೃತಿಗೆ ಆಧಾರ ಸ್ತಂಭವಾಗಿರುವ ಗಿಡ ಮರಗಳನ್ನು ಬೆಳೆಸುವುದರಿಂದ ಫಲ ನೀಡುವುದಿಲ್ಲ. ಬದಲಿಗೆ ಉತ್ತಮ ಗಾಳಿ, ನೆರಳು ನೀಡಲಿದೆ. ಆದ್ದರಿಂದ ಗಿಡ, ಮರಗಳಿಗೆ ನೀರೆರೆದು ಪೋಷಣೆ ಮಾಡಿ ಎಂದರು.

ಕಾರ್ಯಕ್ರಮದಲ್ಲಿ ರೊ.ರವೀಶ್ ಗುಪ್ತ, ರೊ.ಚಿಲ್ಕುಂದ ಮಹೇಶ್, ನಂಜುಂಡೇಶ್ವರ ನರ್ಸರಿ ಮಾಲೀಕ ಅರುಣ್ ಕುಮಾರ್, ಎಸ್‌ಡಿಎಂಸಿ ಸದಸ್ಯ ಹರೀಶ್, ಶಿಕ್ಷಕ ಶ್ಯಾಮ್ ಸುಂದರ್ ಇದ್ದರು.

ನೂತನ ಗೌರವಾಧ್ಯಕ್ಷರಿಗೆ ಸನ್ಮಾನ



ತಿ.ನರಸೀಪುರ ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಯುವ ಘಟಕದ ನೂತನ ಗೌರವಾಧ್ಯಕ್ಷರೂ ಆದ ಬೆನಕನಹಳ್ಳಿ ಪಟ್ಟದ ಮಠದ ಅಧ್ಯಕ್ಷ ಇಮ್ಮಡಿ ಬಸವಲಿಂಗಸ್ವಾಮೀಜಿ ಅವರನ್ನು ಮಹಾಸಭಾ ಅಧ್ಯಕ್ಷ ಸಿ.ಎಂ.ಪ್ರಕಾಶ್, ಯುವ ಘಟಕದ ಅಧ್ಯಕ್ಷ ಅಶೋಕ್, ಕಾರ್ಯದರ್ಶಿ ಚನ್ನಮಲ್ಲಿಕಾರ್ಜುನ ಸ್ವಾಮಿ, ನಿರ್ದೇಶಕರಾದ ತೋಂಟೇಶ್, ಎಸ್.ಎಂ.ರಮೇಶ್, ಪೂಜಿತ್, ಕುಮಾರ್, ಓಂಕಾರಸ್ವಾಮಿ, ಸತ್ಯಪ್ಪ, ಮೂಗೂರು ಕುಮಾರಸ್ವಾಮಿ ಸೇರಿದಂತೆ ಯುವ ಘಟಕದ ನಿರ್ದೇಶಕರು ಸನ್ಮಾನಿಸಿದರು.

ಕೋಟೆಯಲ್ಲಿ ಮದ್ಯವರ್ಜನ ಶಿಬಿರದ ಸಮಾರೋಪ



ಕಾರ್ಯಕ್ರಮವನ್ನು ಪಟ್ಟಣದ ಜೆಎಸ್‌ಎಸ್ ಕಾಲೇಜಿನ ಪ್ರೊ.ಸೋಮಶೇಖರ್ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಆ.24– ಕುಡಿತ ಬಿಟ್ಟು ಸಮಾಜದಲ್ಲಿ ಗೌರವದಿಂದ ಬದುಕಬೇಕು ಎಂದು ಪಟ್ಟಣದ ಜೆಎಸ್‌ಎಸ್ ಕಾಲೇಜಿನ ಪ್ರೊ. ಸೋಮಶೇಖರ್ ತಿಳಿಸಿದರು.

ಪಟ್ಟಣದ ವನವಾಸಿ ಕಲ್ಯಾಣ ಬಿರ್ಸಾ ಮುಂಡಾ ಭವನದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವತಿಯಿಂದ ಆಯೋಜಿಸಿದ್ದ 10 ದಿನಗಳ ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಯಾರೇ ಆದರೂ ಕುಡಿತ ಬಿಡದಿದ್ದರೇ ಸಮಾಜದಲ್ಲಿ ನಿಮ್ಮಿಂದ ನಿಮ್ಮ ಕುಟುಂಬದ ಸದಸ್ಯರಿಗೆ ಅವಮಾನ ಆಗುತ್ತದೆ. ಅಲ್ಲದೇ ಮಕ್ಕಳ ಮನಸ್ಸಿಗೆ ನೋವಾಗುತ್ತದೆ. ಹೀಗಾಗಿ ಈ ಶಿಬಿರದ ಸದುಪಯೋಗಪಡಿಸಿ ಕೊಳ್ಳಬೇಕು ಎಂದ ಅವರು ನಾಳೆಯಿಂದ ನಿಮಗೆ ನೀವೇ ಜವಾಬ್ದಾರಿ. ಸ್ನೇಹಿತರ ಜೊತೆ ಸೇರಿ ಕುಡಿತದ ಚಟಕ್ಕೆ ಮತ್ತೆ ಒಳಗಾಗಬೇಡಿ. ಒಳ್ಳೆಯ ಸ್ನೇಹಿತರ ಜೊತೆಗೂಡಿ ಮತ್ತು ನಿಮ್ಮ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಶುಭ ಹಾರೈಸಿದರು.

ನಿವೃತ್ತ ಎಸ್‌ಐ ಶಾಂತರಾಜ್ ಮಾತನಾಡಿ, ಕುಡಿತದ ಚಟಕ್ಕೆ ಒಳಗಾದ ವ್ಯಕ್ತಿಗಳನ್ನು ಮದ್ಯವರ್ಜನ ಶಿಬಿರಕ್ಕೆ ಕರೆತಂದು ಅವರಿಗೆ ಸೂಕ್ತ ಮಾರ್ಗದರ್ಶನದ ಮೂಲಕ ಅವರನ್ನು ಸರಿದಾರಿಗೆ ತರಲು ಪ್ರಯತ್ನಿಸಿದ SVYM ಸಂಸ್ಥೆಗೆ ಧನ್ಯವಾದ ತಿಳಿಸಿದರು.

ನಿವೃತ್ತ ಶಿಕ್ಷಕ ಸ್ವಾಮಿ ಮಾತನಾಡಿ, ನೀವು ಕುಡಿತ ಬಿಟ್ಟು ಸಮಾಜದಲ್ಲಿ ಒಳ್ಳೆಯ ರೀತಿಯಲ್ಲಿ ಬದುಕಿ ಎಂದು ಸಲಹೆ ನೀಡಿದರು.

ವನವಾಸಿ ಕಾರ್ಯದರ್ಶಿ ಮಣಿಕಂಠ ಮಾತನಾಡಿ, ಈ ಶಿಬಿರ ನಿಮಗೆ ಒಳ್ಳೆಯ ದಾರಿ ತೋರಿಸಿದ್ದು, ನಿಮ್ಮ ಮುಂದಿನ ಜೀವನ ಸುಖಕರವಾಗಿರಲಿ ಎಂದು ಹಾರೈಸಿದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣ ಕಾರ್ಯಕ್ರಮದ ನಿರ್ದೇಶಕ ಡಾ.ಡೆನ್ನಿಸ್ ಚೌಹಾಣ್ ಮಾತನಾಡಿ, ಕುಡಿತವನ್ನು ಬಿಡಬೇಕು. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಿ. ಅಲ್ಲದೇ ಕುಟುಂಬದವರೊಂದಿಗೆ ಖುಷಿಯಾಗಿ ಜೀವನ ನಡೆಸಿ ಎಂದರು.

ಇದೇ ವೇಳೆ ಕುಡಿತ ಬಿಟ್ಟು 1.6 ವರ್ಷ ಪೂರೈಸಿದ ಹಳೆಯ ಶಿಬಿರಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಹಿರಿಯ ವ್ಯವಸ್ಥಾಪಕ ಪಿ.ಡಿ.ನಾಯಕ್, ವ್ಯವಸ್ಥಾಪಕ ಬಿ.ವಿ.ಶಂಕರ್, ಸಂಯೋಜಕರಾದ ನಾಗೇಶ್, ಅಕ್ಷಯ್ ಸೇರಿದಂತೆ ಇನ್ನಿತರರಿದ್ದರು.

ವಿಶ್ವ ಛಾಯಾಗ್ರಹಣ ದಿನಾಚರಣೆ



ಹುಣಸೂರಿನಲ್ಲಿ ನಡೆದ 186ನೇ ವಿಶ್ವ ಛಾಯಾಗ್ರಹಣ ದಿನಾಚರಣೆಯನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು. ಈ ವೇಳೆ ನಗರಸಭಾಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಪೌರಾಯುಕ್ತೆ ಮಾನಸ, ಛಾಯಾಗ್ರಾಹಕರ ಸಂಘದ ಅಧ್ಯಕ್ಷ ವಿಜಯ್, ರಾಮಸ್ವಾಮಿ ಉಪಾಧ್ಯಕ್ಷ ದಾಮೋದರ್, ಕಾರ್ಯದರ್ಶಿ ಸುರೇಶ್ ಸೇರಿದಂತೆ ಇನ್ನಿತರರಿದ್ದರು.

ಸುಂದರ್ ನಿಧನ



ನಂಜನಗೂಡು, ಆ.24– ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಉದ್ಯಮಿ, ಶ್ರೇಯ ಟ್ರೇಡರ್ಸ್ ಮಾಲೀಕ ಸುಂದರ್(47) ಭಾನುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹೆಚ್.ಡಿ.ಕೋಟೆ ತಾಲೂಕಿನ ಮಗ್ಗೆಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಬಹುಭಾಷಾ ದೇಶಭಕ್ತಿ ಗೀತಗಾಯನ ಸ್ಪರ್ಧೆ ಯಶಸ್ವಿ ಸಂಪನ್ನ; ಮೊಳಗಿದ ದೇಶಾಭಿಮಾನ

● 200ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗಿ ● ವಿಜೇತರಿಗೆ ನಗದು ಬಹುಮಾನ ● ಪ್ರತಿವರ್ಷ ಆಗಸ್ಟ್‌ನಲ್ಲಿ ಈ ಕಾರ್ಯಕ್ರಮ ಮುಂದುವರೆಯಲಿದೆ; ಅಭಾಸಾಪ ಪ್ರಾಂತ ಸಂಪರ್ಕ ಪ್ರಮುಖ ಡಾ.ವಿ.ರಂಗನಾಥ್



ಬಹುಭಾಷಾ ದೇಶಭಕ್ತಿ ಗೀತಗಾಯನ ಸ್ಪರ್ಧೆಯ ವಿಜೇತರಿಗೆ ಸಮಾರೋಪ ಸಮಾರಂಭದಲ್ಲಿ ಬಹುಮಾನಗಳನ್ನು ವಿತರಿಸಲಾಯಿತು.

ಮೈಸೂರು,ಆ.24(ಪಿಎಂ)–ಮೈಸೂರಿನ ಸರಸ್ವತಿಪುರಂನ ವಿಜಯ ವಿಠಲ ಪದವಿಪೂರ್ವ ಕಾಲೇಜು ಆವರಣದಲ್ಲಿ ಹಮ್ಮಿಕೊಂಡಿದ್ದ ಬಹುಭಾಷಾ ದೇಶಭಕ್ತಿ ಗೀತಗಾಯನ ಸ್ಪರ್ಧೆಯು 200ಕ್ಕೂ ಹೆಚ್ಚು ಸ್ಪರ್ಧಿಗಳ ಕಂಠಸಿರಿಯಲ್ಲಿ ದೇಶಾಭಿಮಾನ ಮೊಳಗುವ ಮೂಲಕ ಭಾನುವಾರ ಯಶಸ್ವಿಯಾಗಿ ಸಂಪನ್ನಗೊಂಡಿತು.

ಅಖಿಲ ಭಾರತೀಯ ಸಾಹಿತ್ಯ ಪರಿಷದ್ (ಅಭಾಸಾಪ) ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಎರಡು ದಿನ ನಡೆದ ಈ ಸ್ಪರ್ಧೆಯಲ್ಲಿ ಶನಿವಾರ 12ರಿಂದ 18 ವರ್ಷದೊಳಗಿನವರ ವಿಭಾಗದಲ್ಲಿ ಸ್ಪರ್ಧೆ ನಡೆದರೆ, ಭಾನುವಾರ 18 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ಸ್ಪರ್ಧೆ ನಡೆಯಿತು. ಈ ಎರಡರಲ್ಲಿಯೂ ವೈಯಕ್ತಿಕ ಮತ್ತು ಸಮೂಹ ವಿಭಾಗಗಳಲ್ಲಿ ಸ್ಪರ್ಧೆ ನಡೆಯಿತು. ಮಕ್ಕಳಿಂದ ಹಿಡಿದು ಹಿರಿಯ ನಾಗರಿಕರವರೆಗೂ ಭಾಗವಹಿಸಿ ತಮ್ಮ ಆಯ್ಕೆ ಭಾಷೆಯ ಗೀತೆಗಳಲ್ಲಿ ದೇಶಭಕ್ತಿ ಅನಾವರಣಗೊಳಿಸಿದರು. ಕನ್ನಡ, ಹಿಂದಿ, ಸಂಸ್ಕೃತ, ತೆಲುಗು, ತಮಿಳು, ಮಲಯಾಳಂ, ಮರಾಠಿ, ಗುಜರಾತಿ, ಒರಿಯಾ, ತುಳು, ಕೊಂಕಣಿ, ಕೊಡವ, ಬೆಂಗಾಲಿ, ಪಂಜಾಬಿ, ಅಸ್ಸಾಮಿ ಇತ್ಯಾದಿ ಭಾರತೀಯ ಭಾಷೆಗಳಲ್ಲಿ ಗೀತಗಾಯನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಭಾನುವಾರ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. 12ರಿಂದ 18 ವರ್ಷದೊಳಗಿನ ವೈಯಕ್ತಿಕ ವಿಭಾಗದಲ್ಲಿ ಪ್ರಥಮ ಬಹುಮಾನ 2 ಸಾವಿರ ರೂ., ದ್ವಿತೀಯ ಬಹುಮಾನ 1500 ರೂ., ತೃತೀಯ ಬಹುಮಾನ 1 ಸಾವಿರ ರೂ. ಹಾಗೂ ಎರಡು ಸಮಾಧಾನಕರ ಬಹುಮಾನಗಳನ್ನು ನೀಡಲಾಯಿತು. ಅದೇ ರೀತಿ ಸಮೂಹ ಗಾಯನ ವಿಭಾಗದಲ್ಲಿ ಪ್ರಥಮ ಬಹುಮಾನ 3 ಸಾವಿರ ರೂ., ದ್ವಿತೀಯ ಬಹುಮಾನ 2,500 ರೂ. ತೃತೀಯ ಬಹುಮಾನ 2 ಸಾವಿರ ರೂ. ಹಾಗೂ ಎರಡು ಸಮಾಧಾನಕರ ಬಹುಮಾನ ನೀಡಲಾಯಿತು.

12ರಿಂದ 18 ವರ್ಷದೊಳಗಿನ ವೈಯಕ್ತಿಕ ವಿಭಾಗದಲ್ಲಿ ಯೋಗಶ್ರೀ ಕನ್ನಡ ಭಾಷೆಯಲ್ಲಿ ದೇಶಭಕ್ತಿ ಗೀತೆ ಪ್ರಸ್ತುತಪಡಿಸಿ ಪ್ರಥಮ ಸ್ಥಾನ ಗಳಿಸಿದರೆ, ಕನ್ನಡ ಭಾಷೆಯಲ್ಲಿಯೇ ದೇಶಾಭಿಮಾನ ಮೆರೆದ ನಿಸರ್ಗ ಶ್ರೀಧರ್ ದ್ವಿತೀಯ ಸ್ಥಾನ ಪಡೆದರು. ಸಂಸ್ಕೃತದಲ್ಲಿ ಗಾಯನ ಸಾದರಪಡಿಸಿದ ಎಂ.ಸಂಕಲ್ಪ ತೃತೀಯ ಸ್ಥಾನ ಪಡೆದರು. ಅಲ್ಲದೆ, ಮಾನಸಿ ಹಾಗೂ ಅದ್ವಿತಾ ಸಮಾಧಾನಕರ ಬಹುಮಾನಗಳನ್ನು ಗಳಿಸಿದರು.

ಅಂತೆಯೇ ಇದೇ ವಯೋಮಿತಿಯ ಸಮೂಹ ಗೀತಗಾಯನ ವಿಭಾಗದಲ್ಲಿ ಎಂ.ಹೆಚ್.ಲಲಿತ ತಂಡ ಪ್ರಥಮ (ಕನ್ನಡ ಗೀತೆ), ಆರ್ಕಿಡ್ ಪಬ್ಲಿಕ್ ಸ್ಕೂಲ್ ತಂಡ ದ್ವಿತೀಯ, ದೈಹಾ ತಂಡ ತೃತೀಯ ಸ್ಥಾನ (ಮಣಿಪುರಿ ಭಾಷಾ ಗೀತೆ) ಪಡೆದುಕೊಂಡರು. ಅದೇ ರೀತಿ ಲಹುನ್ ಶಿಶಾ ಮತ್ತು ವನವಾಸಿ ಸಮಾಧಾನಕರ ಬಹುಮಾನ ಪಡೆದರು. 18 ವರ್ಷ ಮೇಲ್ಪಟ್ಟವರ ವೈಯಕ್ತಿಕ ವಿಭಾಗದಲ್ಲಿ ಭಗವಾನ್ (ಕನ್ನಡ) ಪ್ರಥಮ, ಆರ್.ಶ್ಯಾಮಲಾ (ತಮಿಳು) ದ್ವಿತೀಯ, ಸೈಮತ್ ಅಫನ್ (ಹಿಂದಿ) ತೃತೀಯ ಸ್ಥಾನಗಳನ್ನು ಪಡೆದರು. ಅದೇ ರೀತಿಯಲ್ಲಿ ಹೆಚ್.ಎಲ್.ಜಗದೀಶ್ (ಕನ್ನಡ) ಹಾಗೂ ಶೆಂತಾ ಶರ್ಮ (ಬೆಂಗಾಲಿ) ಸಮಾಧಾನಕರ ಬಹುಮಾನ ಪಡೆದರು.

ಇದೇ ವಯೋಮಾನದ ಸಮೂಹ ಗಾಯನ ವಿಭಾಗದಲ್ಲಿ ಕನ್ನಡ ಭಾಷೆಯಲ್ಲಿ ದೇಶಭಕ್ತಿ ಗೀತೆ ಸಾದರಪಡಿಸಿದ ಗುಂಪುಗಳೇ ಕ್ರಮವಾಗಿ ಮೂರು ಸ್ಥಾನಗಳನ್ನು ಅಲಂಕರಿಸಿದವು. ಹೆಚ್.ಎಲ್.ಜಗದೀಶ್ ತಂಡ ಪ್ರಥಮ, ಭಾಗ್ಯಲಕ್ಷ್ಮಿ ತಂಡ ದ್ವಿತೀಯ, ಆರ್.ಎನ್.ಜಯಮಾಲ ತಂಡ ತೃತೀಯ ಸ್ಥಾನ ಗಳಿಸಿದವು. ಶಂಪಾ ಶರ್ಮ ತಂಡ ಹಾಗೂ ಅನಿಕ ತಂಡ ಸಮಾಧಾನಕರ ಬಹುಮಾನ ಪಡೆದುಕೊಂಡವು.

ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಭಾಸಾಪ ಕರ್ನಾಟಕದ ಪ್ರಾಂತ ಸಂಪರ್ಕ ಪ್ರಮುಖ ಡಾ.ವಿ.ರಂಗನಾಥ್, ಕಳೆದ ವರ್ಷವೂ ಬಹುಭಾಷಾ ದೇಶಭಕ್ತಿ ಗೀತಗಾಯನ ಸ್ಪರ್ಧೆ ಆಯೋಜಿಸಲಾಗಿತ್ತು. ಅದಕ್ಕೆ ಉತ್ತಮ ಸ್ಪಂದನೆ ದೊರೆತ ಹಿನ್ನೆಲೆಯಲ್ಲಿ ಅಂದೇ ಮುಂದಿನ ವರ್ಷವೂ ಆಯೋಜಿಸಬೇಕೆಂದು ನಿರ್ಧರಿಸಲಾಗಿತ್ತು. ಅದೇ ರೀತಿಯಲ್ಲಿ ಈ ವರ್ಷದ ಕಾರ್ಯಕ್ರಮ ಯಶಸ್ವಿಯಾಗಿದ್ದು, ಪ್ರತಿವರ್ಷ ಈ ಕಾರ್ಯಕ್ರಮವು ಆಗಸ್ಟ್‌ನಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು. ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಾಂಶುಪಾಲ ಡಾ.ಕೆ.ಹನುಮಂತಾಚಾರ್ ಜೋಶಿ, ಅಭಾಸಾಪ ಕರ್ನಾಟಕ ಪ್ರಾಂತ ಉಪಾಧ್ಯಕ್ಷ ಬೆಳಗೋಡು ರಮೇಶ್ ಭಟ್, ಪ್ರಾಂತ ಕಾರ್ಯಕ್ರಮದ ರಘುಶೆಟ್ಟಿ, ಜಿಲ್ಲಾಧ್ಯಕ್ಷ ಎಸ್. ಸುಬ್ರಹ್ಮಣ್ಯ, ಉಪಾಧ್ಯಕ್ಷ ಬಿ.ಕೆ.ಜಗದೀಶ್, ಸ್ಪರ್ಧೆಯ ತೀರ್ಪುಗಾರರಾದ ಕವಿತಾ ಕಾಮತ್, ವೀಣಾ ಸಂಪತ್, ಸುರೇಶ್ ಮತ್ತಿತರರು ಹಾಜರಿದ್ದರು.

ಇದೊಂದು ವಿಶಿಷ್ಟ ಕಾರ್ಯಕ್ರಮ

ಕಳೆದ ವರ್ಷ ವಯೋಮಿತಿ ನಿಗದಿ ಮಾಡದೇ ಎಲ್ಲರಿಗೂ ಮುಕ್ತ ಅವಕಾಶ ಕಲ್ಪಿಸಲಾಗಿತ್ತು. ಈ ಬಾರಿ ವಯೋಮಿತಿ ನಿಗದಿಗೊಳಿಸಲಾಯಿತು. ಮುಂದಿನ ವರ್ಷ 12 ವರ್ಷಕ್ಕಿಂತ ಚಿಕ್ಕ ವಯೋಮಾನದ ಮಕ್ಕಳಿಗೂ ಅವಕಾಶ ಕಲ್ಪಿಸುವ ಚಿಂತನೆ ಇದೆ. ಈ ವರ್ಷದ ಸ್ಪರ್ಧೆಗಾಗಿ ವೈಯಕ್ತಿಕ ಮತ್ತು ಸಮೂಹ ಎರಡೂ ಸೇರಿದಂತೆ ಒಟ್ಟು 95 ನೋಂದಣಿಯಾಗಿದ್ದವು. ಅಂತೆಯೇ 200ಕ್ಕೂ ಅಧಿಕ ಮಂದಿ ಗಾಯನ ಸಾದರಪಡಿಸಿದ್ದು, ವಾದ್ಯ ಕಲಾವಿದರನ್ನೂ ಸೇರಿದರೆ ಈ ಸಂಖ್ಯೆ ಇನ್ನು ಹೆಚ್ಚಳವಾಗಲಿದೆ. ಇಷ್ಟು ದೊಡ್ಡ ಮಟ್ಟದಲ್ಲಿ ದೇಶಭಕ್ತಿ ಗಾಯನ ಹಿಂದೆ ನಡೆದಿದೆಯೇನೋ ಗೊತ್ತಿಲ್ಲ. ಆದರೆ ನಮ್ಮ ಪ್ರಯತ್ನದಲ್ಲಿ ದೊಡ್ಡ ಸಂಖ್ಯೆಯಲ್ಲಿ ಸ್ಪರ್ಧಿಗಳು ಭಾಗವಹಿಸಿ ವಿಶಿಷ್ಟಕಾರ್ಯಕ್ರಮ ನಡೆಯುವಂತಾಗಿದೆ.

-ಡಾ.ವಿ.ರಂಗನಾಥ್

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಇಂದ್ರ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕೂಲಿ (ಕ) + ಕೂಲಿ (ತ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವಾರ್ –2 (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ವಾರ್–2 (ತೆ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಹಚ್ಚೆ (ಕ) + ವಾರ್–2 (ತೆ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಜಸ್ಟ್ ಮ್ಯಾರಿಡ್ (ಕ) + ಕಮರೊ2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519


ಸ್ಕ್ರೀನ್ 1	ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ
ಸ್ಕ್ರೀನ್ 2	ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ.
ಸ್ಕ್ರೀನ್ 3	ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹುಟ್ಟುಹಬ್ಬದ ಶುಭ ಹಾರೈಕೆ



ಮೈಸೂರು ಜಿಲ್ಲಾ ಹಾಲು ಒಕ್ಕೂಟದ ಮಾಜಿ ನಿರ್ದೇಶಕರು ಹಾಗೂ ಬಿಜೆಪಿ ಜಿಲ್ಲಾ ಮುಖಂಡರಾದ ಎಸ್.ಸಿ.ಅಶೋಕ್ ಅವರ ಹುಟ್ಟುಹಬ್ಬದ ಅಂಗವಾಗಿ ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಕೆ.ಎನ್.ಸುಬ್ಬಣ್ಣ, ಖಾದಿ ಗ್ರಾಮೋದ್ಯೋಗದ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷ ಬಿ.ಎಸ್.ಮಾದೇವಪ್ಪ, ಬಿಜೆಪಿ ಮುಖಂಡರಾದ ಎನ್.ವಿ.ವಿನಯ್‌ಕುಮಾರ್, ಸಿ.ಕೆ.ಗಿರೀಶ್‌ಕುಮಾರ್, ಕೆ.ಆರ್.ಬ್ಯಾಂಕ್ ನಿರ್ದೇಶಕ ಜಿ.ಎಂ.ಪಂಚಾಕ್ಷರಿ, ಕೆ.ಆರ್.ನಗರದ ಪ್ರತಾಪ್ ಶುಭಕೋರಿದರು.

ಚರ್ಚಾ ಸ್ಪರ್ಧೆಯಲ್ಲಿ ವಾಕ್‌ಚಾತುರ್ಯ ಪ್ರದರ್ಶಿಸಿದ ವಿದ್ಯಾರ್ಥಿಗಳು

ಭಾರತೀಯ ವಿದ್ಯಾಭವನ ಶಾಲೆಗೆ ಸಮಗ್ರ ಪಾರಿತೋಷಕ



ಸಮಗ್ರ ಪಾರಿತೋಷಕವನ್ನು ಪಡೆದ ಭಾರತೀಯ ವಿದ್ಯಾಭವನ ಶಾಲೆಯ ವಿದ್ಯಾರ್ಥಿಗಳು

ಮೈಸೂರು, ಆ.24(ಜಿಎ)–ಮೈಸೂರಿನ ದಿನೇಶ್ ಕೋಚಿಂಗ್ ಸೆಂಟರ್ ವತಿಯಿಂದ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಅಂತರ ಪ್ರೌಢಶಾಲಾ ವಿದ್ಯಾರ್ಥಿಗಳ ಕನ್ನಡ ಚರ್ಚಾ ಸ್ಪರ್ಧೆಯನ್ನು ಭಾನುವಾರ ನಡೆಸಲಾಯಿತು.

ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದ ಕಾಮಾಕ್ಷಿ ಆಸ್ಪತ್ರೆಯ ಯೂರಾಲಜಿಸ್ಟ್ ಡಾ.ಪ್ರಕಾಶ್ ಪ್ರಭು ಅವರು, ಮಕ್ಕಳು ಚರ್ಚಾ ಸ್ಪರ್ಧೆಯಲ್ಲಿ ಚರ್ಚಿಸುವಾಗ ಸಂಯಮದಿಂದ ಆತುರ ಪಡದೆ ತಮ್ಮ ವಾದವನ್ನು ಮಂಡಿಸಬೇಕು. ಈ ರೀತಿ ಸ್ಪರ್ಧೆಯಲ್ಲಿ ಭಾಗವಹಿಸುವುದರಿಂದ ಚರ್ಚೆಯ ಮಹತ್ವ ತಿಳಿಯುತ್ತದೆ ಎಂದರು.

ಸ್ಪರ್ಧೆಯಲ್ಲಿ 25ಕ್ಕೂ ಹೆಚ್ಚು ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ, 'ಭಾರತದ ಅಭಿವೃದ್ಧಿಯಲ್ಲಿ ಹಳ್ಳಿಗಳಿಗಿಂತ ನಗರಗಳ ಪಾತ್ರವೇ ಹೆಚ್ಚು' ವಿಷಯದ ಬಗ್ಗೆ ಪರ, ವಿರೋಧ ವಾದವನ್ನು ಮಂಡಿಸಿದರು. ಬಿ.ಎಂ.ಶ್ರೀ ವಿದ್ಯಾವರ್ಧಕ ಶಾಲೆಯ ನಾದಶ್ರೀ ಆರ್.ಭಟ್ ಪ್ರಥಮ ಸ್ಥಾನ, ವಿಜಯ ವಿಠಲ ಶಾಲೆಯ ಟಿ.ಎಸ್.ವಿಭ ದ್ವಿತೀಯ, ಭಾರತೀಯ ವಿದ್ಯಾಭವನ ಶಾಲೆಯ ಎಸ್.ಎಸ್.ದೀಕ್ಷಿತ ತೃತೀಯ ಬಹುಮಾನ ಪಡೆದುಕೊಂಡರು. ಎಸ್‌ವಿಇಐ ಶಾಲೆಯ ಡಿ.ಸಿ.ಗೌಡಿ ಮತ್ತು ಪಿಎಂಶ್ರೀ ಡಿ.ಎಂಎಸ್ ಶಾಲೆಯ ಕೆ.ಪಿ.ಸುಶಾಂತ್‌ರಾಜ್ ಸಮಾಧಾನಕರ ಬಹುಮಾನ ಪಡೆದುಕೊಂಡರು. ಸಮಗ್ರ ಪಾರಿತೋಷಕವನ್ನು ಭಾರತೀಯ ವಿದ್ಯಾಭವನ ಶಾಲೆಯು ಪಡೆದು ಎಲ್ಲರ ಗಮನ ಸೆಳೆಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯಸ್ಥ ಎನ್.ವಿ.ದಿನೇಶ್, ಸೌಮ್ಯ ದಿನೇಶ್, ಪ್ರಶಾಂತರಾಜ್ ಹಾಗೂ ತೀರ್ಪುಗಾರರಾದ ಸತ್ಯಪ್ರಸಾದ್, ನವೀನ್ ಮತ್ತು ಹೇಮಲತಾ ಉಪಸ್ಥಿತರಿದ್ದರು.

ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆಗೆ ಮಾಜಿ ಸಂಸದ ಪ್ರತಾಪ್ ಸಿಂಹ ಆಕ್ಷೇಪ



ಮೈಸೂರು, ಆ.24(ಬಿಎಲ್‌ಯು)– ಈ ಬಾರಿಯ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್ ಅವರಿಂದ ಉದ್ಘಾಟಿಸುತ್ತಿರುವ ಸರ್ಕಾರದ ಕ್ರಮ ಸರಿಯಲ್ಲ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಾನು ಮುಷ್ತಾಕ್ ಅವರ ಸಾಹಿತ್ಯ ಕೊಡುಗೆ ಬಗ್ಗೆ ನಮಗೆ ಅಪಾರ ಅಭಿಮಾನವಿದೆ. ಈ ಹಿನ್ನೆಲೆ ಬಾನು ಮುಷ್ತಾಕ್ ಅವರನ್ನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮಾಡಿ ಅಪಾರ ಗೌರವ ನೀಡಿ. ಆದರೆ ಧಾರ್ಮಿಕತೆಯ ಪ್ರತೀಕವಾದ ದಸರಾವನ್ನು ಅವರಿಂದ ಉದ್ಘಾಟಿಸಬೇಡಿ ಎಂದು ಆಗ್ರಹಿಸಿದರು.

ಬಾನು ಮುಷ್ತಾಕ್ ಅವರು ಮುಸ್ಲಿಂ ಧರ್ಮದವರಾಗಿದ್ದಾರೆ. ಅಲ್ಲಾಹೂ ಬಿಟ್ಟು ಬೇರೆ ದೇವರಿಲ್ಲ ಎಂದು ಇಸ್ಲಾಂ ಧರ್ಮ ಪ್ರತಿಪಾದಿಸುತ್ತದೆ. ಇಂತಹವರಿಂದ ದಸರಾ ಉದ್ಘಾಟನೆ ಮಾಡಿಸುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಮೈಸೂರು ದಸರಾ ನಾಡಹಬ್ಬವಾಗಿದ್ದು, ಜಾತ್ಯಾತೀತತೆಯ ಪ್ರತೀಕವಲ್ಲ. ಇದು ಧಾರ್ಮಿಕ ಆಚರಣೆಯಾಗಿದೆ ಎಂದು ಪ್ರತಾಪ್ ಸಿಂಹ ಸ್ಪಷ್ಟಪಡಿಸಿದರು.

ಬಾನು ಮುಷ್ತಾಕ್ ಅವರಿಗೆ ತಾಯಿ ಚಾಮುಂಡೇಶ್ವರಿ ಬಗ್ಗೆ ನಂಬಿಕೆ ಇದೆಯೇ, ಭಕ್ತಿಯಾಗಿ ಎಲ್ಲಾದರೂ ತೋರಿಸಿದ್ದಾರೆಯೇ, ದಸರಾ ಉದ್ಘಾಟನೆಗೆ ಇವರು ಸೂಕ್ತ ವ್ಯಕ್ತಿ ಆಗುತ್ತಾರೆಯೇ ಎಂದು ಪ್ರಶ್ನಿಸಿದರು. ದಸರಾವನ್ನು ಭಕ್ತಿ ಭಾವದಿಂದ ಆಚರಣೆ ಮಾಡುವ ಧಾರ್ಮಿಕ ಕಾರ್ಯಕ್ರಮವಾಗಿದ್ದು, ಸರ್ಕಾರ ಕಾರ್ಯಕ್ರಮವಲ್ಲ ಎಂದು ಹೇಳಿದರು.

ಈ ಹಿಂದೆ ಬರಗೂರು ರಾಮಚಂದ್ರಪ್ಪ ಅವರಿಂದ ದಸರಾ ಉದ್ಘಾಟನೆ ಮಾಡಿಸಿದರು. ಆದರೆ ಬರಗೂರು ರಾಮಚಂದ್ರಪ್ಪ ಅವರು ದಸರಾ ಉದ್ಘಾಟನೆ ಮಾಡುವ ವೇಳೆ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಬರಲಿಲ್ಲ, ಸದಾ ಹಿಂದೂ ಧರ್ಮವನ್ನು ಬೈಯುತ್ತಿದ್ದ ಗಿರೀಶ್ ಕಾರ್ನಾಡ್ ಅವರಿಂದ ದಸರಾ ಉದ್ಘಾಟನೆ ಮಾಡಿಸಿದರು. ಈಗ ಬಾನು ಮುಷ್ತಾಕ್ ಅವರ ಸರದಿಯಾಗಿದ್ದು, ಈ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿಂದೂಗಳ ಭಾವನೆಗೆ ಧಕ್ಕೆ ತರುವ ತೀರ್ಮಾನ ಕೈಗೊಳ್ಳುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಆಕ್ರೋಶ ವ್ಯಕ್ತಪಡಿಸಿದರು.

ಅನಿಷ್ಟ ಮಹಿಷ ದಸರಾ ಉದ್ಘಾಟನೆ ಮಾಡಿದ ಸಿದ್ದರಾಮಯ್ಯ ಅವರ ಪರಂಪರೆ ಮುಂದುವರೆಯುತ್ತಿದೆ. ಈಗಲಾದರೂ ಬಹುಸಂಖ್ಯಾತ ಹಿಂದೂ ಧರ್ಮಿಯರ ಭಾವನೆಗೆ ಬೆಲೆ ಕೊಟ್ಟು ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆ ಮಾಡಿಸುವ ತೀರ್ಮಾನ ಬದಲಿಸಿ ಎಂದು ಒತ್ತಾಯಿಸಿದರು.

ಧರ್ಮಸ್ಥಳದ ವಿರುದ್ಧ ವ್ಯವಸ್ಥಿತ ಪಿತೂರಿ ಮಾಡಿದರು. ಆದರೆ ಎಷ್ಟೇ ಹುಡುಕಾಡಿದರೂ ಒಂದು ಮೂಳೆಯೂ ಸಿಗಲಿಲ್ಲ. ಧರ್ಮಸ್ಥಳ ವಿಚಾರವಾಗಿ ಎಸ್‌ಡಿಪಿಐನವರು ಹೈದರಾಬಾದ್‌ನಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಎಸ್‌ಡಿಪಿಐನವರಿಗೂ ಹಿಂದೂ ಧರ್ಮಸ್ಥಳಕ್ಕೂ ಏನು ಸಂಬಂಧ. ಇದೆಲ್ಲಾ ನೋಡಿದರೆ ಧರ್ಮಸ್ಥಳದ ವಿರುದ್ಧ ವ್ಯವಸ್ಥಿತ ಹುನ್ನಾರ ತಿಳಿಯುತ್ತದೆ ಎಂದು ಪ್ರತಾಪ್ ಸಿಂಹ ಆರೋಪಿಸಿದರು.

ಪರಿಸರ ಸ್ನೇಹಿ ಗಣೇಶ ವಿಗ್ರಹ ತಯಾರಿ, ಪ್ರಾತ್ಯಕ್ಷಿಕೆ ಕಾರ್ಯಕ್ರಮದಲ್ಲಿ ತಾವೇ ಗಣಪನ ತಯಾರಿಸಿದ ಮಕ್ಕಳು





ಪರಿಸರ ಸ್ನೇಹಿ ಗಣೇಶ ವಿಗ್ರಹ ತಯಾರಿ ಕಾರ್ಯಕ್ರಮಕ್ಕೆ ಡಾ.ಆರ್.ಎನ್.ಸುರೇಶ್ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು. ಮತ್ತೊಂದು ಚಿತ್ರದಲ್ಲಿ ತಾವೇ ಕೈಯಾರ ಮಾಡಿದ ಗಣೇಶ ಮೂರ್ತಿಗಳೊಂದಿಗೆ ಮಕ್ಕಳನ್ನು ಕಾಣಬಹುದು.

ಮೈಸೂರು, ಆ.24(ವಿವಿಹೆಚ್)– ಮಕ್ಕಳು ತಾವೇ ಗಣಪನನ್ನು ತಯಾರಿಸಿ, ಪೂಜಿಸುವುದರಿಂದ ಭಾವನಾತ್ಮಕ ಸಂಬಂಧದ ಜೊತೆಗೆ ಧಾರ್ಮಿಕ ಚಿಂತನೆ ಬೆಳೆಯುತ್ತದೆ ಎಂದು ಪರಿಸರ ಸ್ನೇಹಿ ಗಣೇಶ ವಿಗ್ರಹ ತಯಾರಿ ಮತ್ತು ಪ್ರಾತ್ಯಕ್ಷಿಕೆ ಸಮಿತಿ ಅಧ್ಯಕ್ಷ ಡಾ.ಆರ್.ಎನ್.ಸುರೇಶ್ ಅಭಿಪ್ರಾಯಪಟ್ಟರು.

ಮೈಸೂರಿನ ಲಕ್ಷ್ಮೀಪುರಂನ ಮಾಧವ ಕೃಪಾದಲ್ಲಿ 38ನೇ ವರ್ಷದ ಮಾಧವಕೃಪಾ ಗಣೇಶೋತ್ಸವ–2025ರ ಅಂಗವಾಗಿ ಭಾನುವಾರ ಆಯೋಜಿಸಿದ್ದ ಪರಿಸರ ಸ್ನೇಹಿ ಗಣೇಶ ವಿಗ್ರಹ ತಯಾರಿ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗಣೇಶ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲು ಪರಿಸರ ಸ್ನೇಹಿ ಕಡೆಗೆ ಮಕ್ಕಳು ವಾಲುತ್ತಿರುವುದು ಮೆಚ್ಚುಗೆಯ ಸಂಗತಿ. ಮಕ್ಕಳು ಗಣೇಶ ಮೂರ್ತಿಯನ್ನು ಮಾಡುವ ಜೊತೆಗೆ ಗಣಪನ ಆಕೃತಿ ನೀಡುವ ಸಂದೇಶಗಳನ್ನು ಪಾಲಿಸಬೇಕು. ಗಣಪನಲ್ಲಿರುವ ಗಜಮುಖ ಜ್ಞಾನ ಮತ್ತು ಬುದ್ಧಿವಂತಿಕೆ ಪ್ರತೀಕವಾಗಿದೆ. ಎಲ್ಲವನ್ನು ಕೇಳಿಸಿಕೊಂಡು ಕಡಿಮೆ ಮಾತನಾಡುವ ಗುಣಕ್ಕಾಗಿ ಬೃಹತ್ತಾದ ಕಿವಿಗಳನ್ನು, ತೀಕ್ಷ್ಣ ದೃಷ್ಟಿ ಮತ್ತು ಏಕಾಗ್ರತೆಗಾಗಿ ಸಣ್ಣ ಕಣ್ಣುಗಳನ್ನು, ಎಲ್ಲವನ್ನು ಸಹಿಸಿಕೊಳ್ಳುವ ಸಹಿಷ್ಣುತೆಗಾಗಿ ದೊಡ್ಡ ಹೊಟ್ಟೆಯನ್ನು, ವಿನಮ್ರತೆ ಮತ್ತು ಚುರುಕುತನದ ಸಂಕೇತವಾಗಿ ಇಲಿ (ಮೂಷಿಕ)ಯನ್ನು ವಾಹನವನ್ನಾಗಿಸಿಕೊಂಡಿದ್ದಾನೆ ಎಂದು ಮಕ್ಕಳಿಗೆ ಮಾಹಿತಿ ನೀಡಿದರು. ಇದೇ ರೀತಿ ಮಕ್ಕಳು ಗಣಪನಲ್ಲಿರುವ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಮಿತಿ ಸಂಚಾಲಕ ಕೆ.ಸಿ.ರುದ್ರಮೂರ್ತಿ ಮಾತನಾಡಿ, ಪರಿಸರ ಸ್ನೇಹಿ ಗಣಪ ಮಾಡಲು ಮಕ್ಕಳು ಬಳಸುವ ಮಣ್ಣಿನಲ್ಲಿ ತುಳಸಿ ಬೀಜಗಳನ್ನು ಬೆರೆಸಲಾಗಿದ್ದು, ಮಕ್ಕಳು ತಾವೇ ಮಾಡಿದ ಗಣೇಶ ಮೂರ್ತಿಯನ್ನು ಮನೆಗೆ ತೆಗೆದುಕೊಂಡು ಹೋಗಿ ಪೂಜಿಸುತ್ತಾರೆ. ನೀರಿನಲ್ಲಿ ವಿಸರ್ಜನೆ ಮಾಡಿದ ಬಳಿಕ ಆ ನೀರನ್ನು ಹೊರಗಡೆ ಚೆಲ್ಲಿದಾಗ ಅದರಲ್ಲಿರುವ ತುಳಸಿ ಬೀಜ, ಮೊಳಕೆಯೊಡೆದು ಗಿಡವಾಗುತ್ತದೆ. ಸುಮಾರು 1600ಕ್ಕೂ ಅಧಿಕ ಮಕ್ಕಳು ಈ ಪ್ರಾತ್ಯಕ್ಷಿಕೆಗೆ ನೋಂದಣಿ ಮಾಡಿಕೊಂಡಿದ್ದು, 1400ಕ್ಕೂ ಅಧಿಕ ಮಕ್ಕಳು ಭಾಗವಹಿಸಿದ್ದಾರೆ ಎಂದು ಮಾಹಿತಿ ನೀಡಿದರು. ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ಮಿಡ್ ಟೌನ್ ಅಧ್ಯಕ್ಷರಾದ ಸಂಧ್ಯಾ ಸುರೇಶ್, ಗ್ರಾಮ ವಿಕಾಸ ಸಂಯೋಜಕ ನಾಗರಾಜ್, ಸಂಚಾಲಕ ಚರಣ್, ಉದ್ಯಮಿ ತಿಲಕ್ ಉಪಸ್ಥಿತರಿದ್ದರು.

ಪರಿಸರ ಸ್ನೇಹಿ ಗಣೇಶ ವಿಗ್ರಹ ತಯಾರಿ ಕಾರ್ಯಾಗಾರದಲ್ಲಿ ನೂರಾರು ಮಕ್ಕಳು, ಪೋಷಕರು ಭಾಗವಹಿಸಿದ್ದರು. ಲಿಟ್ಲ್ ಸ್ಕ್ವಿಡ್ ಶಾಲೆಯ ಚಿತ್ರಕಲಾ ಶಿಕ್ಷಕ ಭರತ್ ಕುಮಾರ್, ಅನಿಲ್ ಕುಮಾರ್, ಧೀರಜ್, ಚಾಮರಾಜ್, ರಾಜು, ಪ್ರೀತಂ ಅವರ ತಂಡ ಮಕ್ಕಳಿಗೆ ಗಣೇಶ ವಿಗ್ರಹ ತಯಾರಿಸುವ ವಿಧಾನ ಹೇಳಿಕೊಟ್ಟರು. ಶಿಕ್ಷಕರು ಹೇಳಿಕೊಟ್ಟಾಗ ಮಕ್ಕಳು ಗಣಪನ ಆಕೃತಿ ಮಾಡಿ ಸಂತಸಪಟ್ಟರು. ಮಕ್ಕಳು ಮೂರ್ತಿ ತಯಾರಿಸುವಾಗ ಪೋಷಕರೂ ಜೊತೆಗಿದ್ದು ಸಹಕರಿಸಿದ್ದು, ಈ ವೇಳೆ ಕಂಡುಬಂದಿತು.

ಧರ್ಮಸ್ಥಳ ಪ್ರಕರಣ: ಹಿಂದೂ ಧಾರ್ಮಿಕ ನಂಬಿಕೆಯ ಮೇಲೆ ನಡೆದ ಪ್ರಾಯೋಜಿತ ದಾಳಿ

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಆರೋಪ



ಬೆಂಗಳೂರು, ಆ.24– ಧರ್ಮಸ್ಥಳ ಪ್ರಕರಣ ಹಿಂದೂ ಧಾರ್ಮಿಕ ನಂಬಿಕೆಯ ಮೇಲೆ ನಡೆದ ಪ್ರಾಯೋಜಿತ ದಾಳಿ ಎಂಬುದು ಈಗ ಬಹಿರಂಗಗೊಂಡಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಭಾನುವಾರ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಸಚಿವರು, ಕಾಂಗ್ರೆಸ್ ಸರ್ಕಾರ ಹಿಂದೂ ಧಾರ್ಮಿಕತೆಯ ಮೇಲೆ ದಾಳಿ ನಡೆಸಿ, ಪುರಾತನವಾದ, ಪ್ರಸಿದ್ಧ ಹಿಂದೂ ದೇವಾಲಯದ ವಿರುದ್ಧ ಇಲ್ಲ–ಸಲ್ಲದ ಷಡ್ಯಂತ್ರದ ಟೂಲ್‌ಕಿಟ್ ಬಳಸಿಕೊಂಡಿತು ಎಂದು ಆರೋಪಿಸಿದ್ದಾರೆ.

ಮುಖವಾಡ ಧರಿಸಿದ ವ್ಯಕ್ತಿಯಿಂದ ಹಿಡಿದು ಪ್ರಾಯೋಜಿತ ಯೂಟ್ಯೂಬರ್‌ಗಳವರೆಗೆ, ಯಾವುದೇ ಸತ್ಯಾಸತ್ಯತೆಗಳನ್ನು ಪರಿಶೀಲಿಸದೇ, ಧರ್ಮಸ್ಥಳದ ಪಾವಿತ್ರ್ಯತೆಯನ್ನು ಹಾಳುಗೆಡವಿ, 15 ದಿನಗಳ ಕಾಲ ಮಾಧ್ಯಮಗಳಿಗೆ ಸರ್ಕಸ್ ಆಗಿ ಬಿಂಬಿಸಲಾಗಿದೆ. ಧಾರ್ಮಿಕ ನಂಬಿಕೆ ಎಂದೆಂದಿಗೂ ವೈಯಕ್ತಿಕ. ಆದರೆ, ಆಡಳಿತದಲ್ಲಿ ಸಮತೋಲನ ಪ್ರಾಮುಖ್ಯ ವಹಿಸುತ್ತದೆ. ಅಸ್ಪಷ್ಟತೆಯ ಕಾಂಗ್ರೆಸ್ ಸರ್ಕಾರದಿಂದಲೇ ಇಷ್ಟು ರಾದ್ಧಾಂತ ಸೃಷ್ಟಿಯಾಗಿದೆ ಎಂದು ಆರೋಪಿಸಿದ್ದಾರೆ.

ಹೆಸರು ಹಾಳು ಮಾಡಿದ ಬಳಿಕ ಆರೋಪಿಗಳನ್ನು ಬಂಧಿಸುವ ನಾಟಕ. ಇದು ಕ್ಷಮಿಸಲಾರದಂತಹ ದೊಡ್ಡ ತಪ್ಪಾಗಿದೆ. ಅಸಂಖ್ಯಾತ ಭಕ್ತರ ಧಾರ್ಮಿಕತೆಗೆ ನೋವುಂಟಾಗಿದೆ ಎಂದು ಹೇಳಿದ್ದು, ರಾಜ್ಯ ಸರ್ಕಾರದಿಂದ ಕೆಲವೊಂದು ಪ್ರಶ್ನೆಗಳಿಗೆ ಉತ್ತರ ಬಯಸಿದ್ದಾರೆ. ಕಾಣದ ಕೈಗಳಿಂದ ಉದ್ದೇಶಪೂರ್ವಕ ಪ್ರಯತ್ನ ನಡೆದಿದೆಯಾ, ಇದು ಯಾರ ಆಜ್ಞೆಯ ಮೇರೆಗೆ ಇಂತಹ ದುಸ್ಸಾಹಸಕ್ಕೆ ಕೈಹಾಕಲಾಯಿತು, ಸತ್ಯಾಸತ್ಯಗಳು ಇದ್ದರೂ ಕಾಂಗ್ರೆಸ್ ಸರ್ಕಾರ ಏಕೆ ಮೌನವಹಿಸಿದೆ? ಇದರ ಹಿಂದಿನ ಷಡ್ಯಂತ್ರದ ರೂವಾರಿ ಹಾಗೂ ಹಣಕಾಸಿನ ವ್ಯವಹಾರದ ಮೂಲಕ್ಕೆ ತಕ್ಕ ಶಾಸ್ತಿ ಯಾವಾಗ? ನಿಷ್ಪಕ್ಷಪಾತವಾದ ತನಿಖೆ ನಡೆಸಬೇಕು ಮತ್ತು ಹೊಣೆಗಾರಿಕೆಯನ್ನು ಹೊರಬೇಕು ಎಂದು ಆಗ್ರಹಿಸಿದ್ದಾರೆ.

ಸಚಿವ ಡಾ.ಹೆಚ್.ಸಿ.ಮಹದೇವಪ್ಪರಿಗೆ ಅಭಿನಂದನೆ...



ಒಳ ಮೀಸಲಾತಿ ಹಂಚಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿ ದಲಿತ ಸಮುದಾಯಗಳಿಗೆ ನ್ಯಾಯ ಕಲ್ಪಿಸಿದ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಮುಖಂಡರಾದ ಕಿರಣ್ ಕುಮಾರ್, ಚೇತನ್, ಕಾಂತ್‌ರಾಜ್, ನವೀನ್, ವಿನೋದ್ ಅಭಿನಂದಿಸಿದರು.

ಪಂಜಾಬ್‌ನಲ್ಲಿ ಎಲ್‌ಪಿಜಿ ಟ್ಯಾಂಕರ್‌ಗೆ ಬೆಂಕಿ: ನಾಲ್ವರು ಸಜೀವ ದಹನ, ಸಾವಿನ ಸಂಖ್ಯೆ ಏಳಕ್ಕೆ ಏರಿಕೆ



ಹೋಶಿಯಾಪುರ, ಆ.24– ಎಲ್‌ಪಿಜಿ ಟ್ಯಾಂಕರ್ ಬೆಂಕಿ ಅವಘಡದಲ್ಲಿ ಸುಟ್ಟ ಗಾಯಗಳಿಂದ ಇನ್ನೂ ನಾಲ್ವರು ಜನರು ಮೃತಪಟ್ಟು ಸಾವಿನ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ.

ಹೋಶಿಯಾಪುರ ಜಿಲ್ಲಾಧಿಕಾರಿ ಆಶಿಕಾ ಜೈನ್, ಮಂಡಿಯಾಲ ನಿವಾಸಿಗಳಾದ ಮಂಜಿತ್ ಸಿಂಗ್ (60), ವಿಜಯ್ (17), ಜಸ್ವಿಂದರ್ ಕೌರ್ (65) ಮತ್ತು ಆರಾಧನಾ ವರ್ಮಾ (30) ಕಳೆದ ರಾತ್ರಿ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಶೇ. 90 ಕ್ಕೂ ಹೆಚ್ಚು ಸುಟ್ಟ ಗಾಯಗಳಿಂದ ಬಳಲುತ್ತಿದ್ದ ನಾಲ್ವರು ವೆಂಟಿಲೇಟರ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಸಿವಿಲ್ ಸರ್ಜನ್ ಡಾ. ಪವನ್ ಕುಮಾರ್ ತಿಳಿಸಿದ್ದಾರೆ. ಶುಕ್ರವಾರ ರಾತ್ರಿ 10 ಗಂಟೆ ಸುಮಾರಿಗೆ ಹೋಶಿಯಾಪುರ–ಜಲಂಧರ್ ರಸ್ತೆಯ ಮಂಡಿಯಾಲ ಅಡ್ಡಾ ಬಳಿ ಪಿಕಪ್ ವಾಹನಕ್ಕೆ ಡಿಕ್ಕಿ ಹೊಡೆದ ನಂತರ ಎಲ್‌ಪಿಜಿ ಟ್ಯಾಂಕರ್‌ಗೆ ಬೆಂಕಿ ಹೊತ್ತಿಕೊಂಡಿತು.

ಬೆಂಕಿ ವೇಗವಾಗಿ ಹರಡಿತು, ಸುಮಾರು 15 ಅಂಗಡಿಗಳು ಮತ್ತು ಸುತ್ತಮುತ್ತಲಿನ ಕನಿಷ್ಠ ನಾಲ್ಕು ಮನೆಗಳನ್ನು ಆವರಿಸಿತು ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಯ ತಕ್ಷಣ ಇಬ್ಬರು ಮೃತಪಟ್ಟು, 21 ಮಂದಿ ಗಾಯಗೊಂಡರು. ನಿನ್ನೆ ಶನಿವಾರ ಮತ್ತೊಬ್ಬರು ಸುಟ್ಟ ಗಾಯಗಳಿಗೆ ಬಲಿಯಾದರು.

ಟ್ಯಾಂಕರ್ ರಾಮ್ ನಗರ್ ಧೇಹಾ ಲಿಂಕ್ ರಸ್ತೆಯ ಕಡೆಗೆ ತಿರುಗುತ್ತಿದ್ದಾಗ ತರಕಾರಿ ತುಂಬಿದ ಪಿಕಪ್ ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಎರಡೂ ವಾಹನಗಳು ಬೆಂಕಿಗೆ ಆಹುತಿಯಾದವು. ಘಟನೆಯ ನಂತರ ಒಬ್ಬ ವ್ಯಕ್ತಿಯನ್ನು ಹೋಶಿಯಾರ್‌ಪುರದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಇನ್ನೊಬ್ಬರು ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟರು, ಮೂರನೆಯವರು ಅಮೃತಸರದ ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಕರೆದೊಯ್ಯುವ ಮಾರ್ಗಮಧ್ಯೆ ನಿಧನರಾದರು ಎಂದು ಡಾ. ಪವನ್ ಕುಮಾರ್ ಹೇಳಿದರು.

5ನೇ ವರ್ಷದ ಪುಣ್ಯಸ್ಮರಣೆ



ಎನ್. ಪರಮೇಶ್ವರಯ್ಯನವರು (ಶಿಕ್ಷಕರು)

ದುಃಖತಪ್ತರು: ಕುಟುಂಬವರ್ಗ

8ನೇ ವರ್ಷದ ಸವಿನೆನಪು



ನೀವು ನಮ್ಮನ್ನು ಅಗಲಿ ಇಂದಿಗೆ ಎಂಟು ವರ್ಷ ಕಳೆದರೂ ನಿಮ್ಮ ನೆನಪಿನಲ್ಲಿ ಇರುವ

ಶ್ರೀಮತಿ ಎಂ. ಗೌರಮ್ಮ

ನಿಧನ: 25.8.2017

ದುಃಖತಪ್ತರು: ಮಾದೇಗೌಡ.ಹೆಚ್. ರಮ್ಯ ದೀಪು (ಮಗಳು, ಅಳಿಯ), ಮಂಜುನಾಥ್ ಪೂಜ (ಮಗ, ಸೊಸೆ), ಅನಿಕಾ, ಆರವ್, ಆಯೂಷ್

ತಿ. ನರಸೀಪುರ ತಾಲ್ಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ.,

ತಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ

ಸನ್ಮಾನ್ಯ ಸಹಕಾರಿ ಬಂಧುಗಳೆ

ಮೇಲ್ಕಂಡ ಸಂಘದ / ಬ್ಯಾಂಕಿನ 2024–2025ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಎಂ. ಮಹದೇವಣ್ಣ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 30–08–2025ನೇ ಶನಿವಾರ ಬೆಳಿಗ್ಗೆ 11:00 ಗಂಟೆಗೆ ಅಂಬೇಡ್ಕರ್ ಭವನ ನಂಜನಗೂಡು ಮುಖ್ಯ ರಸ್ತೆ ತಿ.ನರಸೀಪುರ ಇಲ್ಲಿ ಏರ್ಪಡಿಸಲಾಗಿದೆ. ಸಂಘದ ಮಾನ್ಯ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಯನ್ನು ತಲುಪಿಸಲಾಗಿದೆ ಒಂದು ವೇಳೆ ಆಹ್ವಾನ ತಲುಪದ ಸದಸ್ಯರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಸಕಾಲಕ್ಕೆ ಆಗಮಿಸಿ ಮಹಾಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿ ಕೊಡಬೇಕಾಗಿ ಕೋರಲಾಗಿದೆ.

ಸ್ಥಳ: ಅಂಬೇಡ್ಕರ್ ಭವನ, ತಿ.ನರಸೀಪುರ

ದಿ: 30–08–2025

ಕಾರ್ಯಕಾರಿ ಮಂಡಲಿ ಅಪ್ಪಣೆ ಮೇರೆಗೆ
ಸಹಿ/– ಮಹೇಶ. ಎನ್, ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಈ ಮುಖಾಂತರ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ನಮ್ಮ ಕಕ್ಷಿದಾರರು ಇದೇ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನುಗಳಿಗೆ ಸಂಬಂಧಪಟ್ಟ ಹಾಗೆ ಅದರ ಹಾಲಿ ಮಾಲೀಕರಾದ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಸಿದ್ದರಾಮನಹುಂಡಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಲೇಟ್ ಕೆಂಪೀರೇಗೌಡ ರವರ ಮಗನಾದ ಸುಮಾರು 48 ವರ್ಷದ ಶ್ರೀ ರಾಮಕೃಷ್ಣ ಮತ್ತು ಇತರರು ಹಾಗೂ ಡಿಟ್ಟೋ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಕೆಂಪೇಗೌಡ ರವರ ಮಗನಾದ ಸುಮಾರು 42 ವರ್ಷ ವಯಸ್ಸಿನ ಶ್ರೀ ನಾಗರಾಜು ಕೆ ರವರುಗಳಿಂದ ಖರೀದಿಸುವ ಉದ್ದೇಶದಿಂದ ಸದರಿಯವರಿಂದ ಕ್ರಯಪತ್ರವನ್ನು ನೋಂದಾಯಿಸಿಕೊಳ್ಳಲು ತಯಾರಿರುತ್ತೇವೆ, ಆದುದರಿಂದ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳ ಸಂಬಂದಪಟ್ಟ ಹಾಗೆ ಬೇರೆ ಯಾರಿಗಾದರು ಯಾವುದೇ ರೀತಿಯಲ್ಲಾದರು ಹಕ್ಕು, ಬಾದ್ಯತೆ, ಅಧಿಕಾರ, ಆಸಕ್ತಿ ಇದ್ದಲ್ಲಿ ಇಂದಿನಿಂದ 07 ದಿನಗಳ ಕಾಲಾವಧಿಯೊಳಗೆ ಸಂಬಂಧಪಟ್ಟ ಅಸಲಿ ದಾಖಲೆಗಳೊಂದಿಗೆ ಈ ಕೆಳಕಂಡ ವಕೀಲರನ್ನು ಅವರ ಕಛೇರಿಯಲ್ಲಿ ಖುದ್ದಾಗಿ ಭೇಟಿ ಮಾಡತಕ್ಕದ್ದು. ಒಂದು ವೇಳೆ ಆ ರೀತಿಯಾಗಿ ಯಾರು ಭೇಟಿ ಮಾಡದಿದ್ದಲ್ಲಿ ಸದರಿ ಸ್ವತ್ತುಗಳ ಮಾರಾಟ ಸಂಬಂಧಪಟ್ಟ ಹಾಗೆ ಯಾರಿಗೂ ಯಾವುದೇ ರೀತಿಯಾದ ಅಭ್ಯಂತರವಿಲ್ಲವೆಂದು ಪರಿಗಣಿಸಿ ಕ್ರಯಪತ್ರವನ್ನು ನೋಂದಣಿ ಮಾಡಿಕೊಳ್ಳಲಾಗುವುದು. ಒಂದು ವೇಳೆ ಯಾರಾದರೂ ನಿಗಧಿತ ಕಾಲಾವಧಿ ಕಳೆದ ನಂತರ ಈ ಬಗ್ಗೆ ಪ್ರಶ್ನಿಸಿದ್ದಲ್ಲಿ ಅದಕ್ಕೆ ನಮ್ಮ ಕಕ್ಷಿದಾರರು ಯಾವುದೇ ರೀತಿಯಲ್ಲೂ ಹೊಣೆಯಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲೂಕು, ವರುಣಾ ಹೋಬಳಿ, ಹೊಸಹಳ್ಳಿ ಗ್ರಾಮದ ಸರ್ವೆ ನಂ. 142/2A ರಲ್ಲಿ ವಿಸ್ತೀರ್ಣ 0–10 (ಹತ್ತು) ಗುಂಟೆ, ಸರ್ವೆ ನಂ. 142/4 ರಲ್ಲಿ ವಿಸ್ತೀರ್ಣ 0–10 (ಹತ್ತು) ಗುಂಟೆ, ಸರ್ವೆ ನಂ. 142/3 ರಲ್ಲಿ ವಿಸ್ತೀರ್ಣ 0–15 (ಹದಿನೈದು) ಗುಂಟೆ ಒಟ್ಟು 0–35 (ಮೂವತ್ತೈದು) ಗುಂಟೆ ಖುಷ್ಕಿ ಜಮಿನಿಗೆ ಚಕ್ಕುಬಂದಿ:– ಪೂರ್ವಕ್ಕೆ: ನೀರು ಹರಿಯುವ ಹಳ್ಳ / ಓಣಿ ; ಪಶ್ಚಿಮಕ್ಕೆ: ಬಾಲಕೃಷ್ಣರವರ ಜಮೀನು ; ಉತ್ತರಕ್ಕೆ: ಬಾಲಕೃಷ್ಣರವರ ಜಮೀನು ; ದಕ್ಷಿಣಕ್ಕೆ: ನೀರು ಹರಿಯುವ ಹಳ್ಳ ಮತ್ತು ರಸ್ತೆ.

ಸಹಿ/– ನಾಗೇಶ ಕೆ, ಎಂ.ಬಿ.ಎ. ಎಲ್.ಎಲ್.ಬಿ.
ವಕೀಲರು, ನಂ.1197, 12/2,
ಕೃಷ್ಣರಾಜ ಬುಲೆವಾರ್ಡ್ ರಸ್ತೆ,
ಮೈಸೂರು ಟೆನ್ನಿಸ್ ಕೋರ್ಟ್ ಮುಂಭಾಗ,
ಚಾಮರಾಜಪುರಂ, ಮೈಸೂರು.
(ಮೊ: 9538842045)

ದಿನಾಂಕ: 24–08–2025
ಸ್ಥಳ: ಮೈಸೂರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಮೈಸೂರು ನಗರ, ಉದಯಗಿರಿ, ಕೆ.ಹೆಚ್.ಬಿ ಕಾಲೋನಿ, ಮನೆ ನಂ. ಎಲ್.ಐ.ಜಿ 23 ರಲ್ಲಿ ವಾಸವಾಗಿರುವ ರಾಜೇಗೌಡರವರ ಮಗ ಆರ್. ಕುಮಾರ್ ರವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ನಿವೇಶನ ಸ್ವತ್ತನ್ನು ಎಸ್. ರಾಜಗೋಪಾಲ್ ರವರ ಮಗ ಆರ್. ವೇಲುಮುರುಗನ್ ರವರಿಂದ ಕ್ರಯಕ್ಕೆ ತೆಗೆದುಕೊಳ್ಳಲು ಒಪ್ಪಂದವಾಗಿರುತ್ತದೆ. ಷೆಡ್ಯೂಲ್ ಸ್ವತ್ತು ಮೂಲತಃ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮೈಸೂರು ಇದರಿಂದ ಎಸ್. ರಾಜಗೋಪಾಲ ರವರಿಗೆ ಮಂಜೂರು ಆಗಿ, ಸದರಿಯವರು ಪೌತಿ ನಂತರ ಅವರ ಮಗ ಆರ್. ವೇಲುಮುರುಗನ್ ರವರು ಪ್ರಾಧಿಕಾರದಿಂದ ಕ್ರಯ ಪತ್ರ ಪಡೆದುಕೊಂಡಿರುತ್ತಾರೆ. ಷೆಡ್ಯೂಲ್ ಸಂಬಂಧ ಎಸ್ ರಾಜಗೋಪಾಲ್‌ರವರ ಇತರೆ ಯಾರಾದರೂ ವಾರಸುದಾರರು ಇದ್ದರೇ ಅಥವಾ ಸದರಿ ಸ್ವತ್ತಿನ ಮೇಲೆ ಬೇರೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಅಧಿಕಾರ ಹಾಗೂ ಹಿತಾಸಕ್ತಿ ಅಥವಾ ಋಣ ಭಾರ ಇದ್ದಲ್ಲಿ ಪತ್ರಿಕೆ ಪ್ರಕಟಣೆಗೊಂಡ ದಿನಾಂಕದಿಂದ 7 ದಿವಸಗಳೊಳಗೆ ಕೆಳಗೆ ಸಹಿ ಮಾಡಿರುವ ನನಗೆ ಸೂಕ್ತ ದಾಖಲಾತಿಯೊಂದಿಗೆ ತಕರಾರು ಸಲ್ಲಿಸಬಹುದು. ಸದರಿ ಅವಧಿಯೊಳಗೆ ಯಾವುದೇ ತಕರಾರು ಬಾರದೇ ಇದ್ದಲ್ಲಿ ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆದುಕೊಳ್ಳುತ್ತಾರೆ ಎಂದು ತಿಳಿಯುವುದು.

ಷೆಡ್ಯೂಲ್ ಸ್ವತ್ತು

ಮೈಸೂರು ನಗರದ ಹಂಚ್ಯಾ– ಸಾತಗಳ್ಳಿ ಬಿ ವಲಯ ಬಡಾವಣೆಯಲ್ಲಿರುವ 1283ನೇ ಸಂಖ್ಯೆಯಲ್ಲಿ ಹೊಂದಿರುವ ಅಳತೆ ಪೂರ್ವದಿಂದ ಪಶ್ಚಿಮಕ್ಕೆ 6.00 ಮೀಟರ್, ಉತ್ತರದಿಂದ ದಕ್ಷಿಣಕ್ಕೆ 9.00 ಮೀಟರ್ ಅಳತೆಯ ಒಟ್ಟು 54 ಚದರ ಮೀಟರ್‌ಗಳುಳ್ಳ ನಿವೇಶನಕ್ಕೆ ಚೆಕ್ಕುಬಂದಿ – ಪೂರ್ವಕ್ಕೆ: ನಿವೇಶನ ಸಂಖ್ಯೆ 1282 ; ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 1284 ; ಉತ್ತರಕ್ಕೆ: ರಸ್ತೆ ; ದಕ್ಷಿಣಕ್ಕೆ: ನಿವೇಶನ ಸಂಖ್ಯೆ 1324.

ಸಹಿ/– ಸಿ. ಪುಟ್ಟಸ್ವಾಮಿ, ಬಿ.ಬಿ.ಎಂ.,
ಎಲ್.ಎಲ್.ಬಿ., ವಕೀಲರು,
Roll No. KAR 705/1985
#2, ಪರಕಾಲಸ್ವಾಮಿ ಮಠದ ಕಟ್ಟಡ,
ಕೃಷ್ಣವಿಲಾಸ ರಸ್ತೆ, ಮೈಸೂರು–570 004.
Mob: 9886219150

Date: 23-8-2025

ಪುರಸಭೆ ಕಾರ್ಯಾಲಯ, ವಿರಾಜಪೇಟೆ

ಕೊಡಗು ಜಿಲ್ಲೆ – 571218 ದೂರವಾಣಿ ಸಂಖ್ಯೆ :– 08274–257332

email :- itstaff_ulb_virajpet@yahoo.com | ವೆಬ್ ಸೈಟ್:-www.virajpettown.mrc.gov.in

ಕ್ರ.ಸಂ.ನಂ.ಪು.ವಿ/ಎಸ್.ಎಫ್.ಸಿ.ಕು.ನೀ.ಸ.ಪ./ಟಿ–06/2025-26 ದಿನಾಂಕ :22/08/2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

ವಿರಾಜಪೇಟೆ ಪುರಸಭೆಯ 2024–25, ಹಾಗೂ 2025–26 ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಡಿಯಲ್ಲಿ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000, ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ 1ರ ನಿಯಮಗಳಿಗನುಸಾರ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಯುಳ್ಳ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.kppp.karnataka.gov.in ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್ ಗಳನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

1. ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ	: 25/08/2025 ರಿಂದ 08/09/2025 ಸಂಜೆ 17:30 ಗಂಟೆಗೆ
2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	: 08/09/2025 ಸಂಜೆ 17:30 ಗಂಟೆವರೆಗೆ
3. ಟೆಂಡರ್ ತೆರೆಯುವ ದಿನಾಂಕ	:09/09/2025 ಬೆಳಿಗ್ಗೆ 11.30 ಗಂಟೆಯ ನಂತರ
4. ಟೆಂಡರ್‌ಗಳನ್ನು ತೆರೆಯುವ ಸ್ಥಳ	: ವಿರಾಜಪೇಟೆ ಪುರಸಭೆ

ಕಾಮಗಾರಿಗಳ ವಿವರ, ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್ ಸೈಟ್ :– www.virajpettown.mrc.gov.in ನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡ ಬಹುದಾಗಿದೆ.

ಸಹಿ/- (ಶ್ರೀಮತಿ. ಎಂ.ಕೆ ದೇಚಮ್ಮನವರ)
ಅಧ್ಯಕ್ಷರು. ಪುರಸಭೆ. ವಿರಾಜಪೇಟೆ.

ಸಹಿ/- (ಶ್ರೀಮತಿ. ಫಸಿಹಾ ತಬಸಮ್)
ಉಪಾಧ್ಯಕ್ಷರು ಪುರಸಭೆ. ವಿರಾಜಪೇಟೆ.

ಸಹಿ/- (ಶ್ರೀ ಎಂ.ಕೆ ಅಬ್ದುಲ್ ಜಲೀಲ್)
ಸ್ಥಾಯಿ ಸಮಿತಿ ಅಧ್ಯಕ್ಷರು. ಪುರಸಭೆ. ವಿರಾಜಪೇಟೆ.

ಸಹಿ/- (ಶ್ರೀ ನಾಚಪ್ಪ ಪಿ.ಕೆ)
ಮುಖ್ಯಾಧಿಕಾರಿ. ಪುರಸಭೆ. ವಿರಾಜಪೇಟೆ.